
ರಂಜನೆ ಬೋಧನೆ ಪ್ರಬೋಧನೆ

# ಲಂಕೇಶ್

19 ನವೆಂಬರ್ 2014 ಪುಟ 20 ರೂ. 15/-



ವಿವಿಗಳ ನಿರ್ನಾಮ 5 ಸೂತ್ರಗಳು




## ನಂದಿತಾ ಸಾವು

# ದೊಂಬಿ ಹಿಂದಿನ ಕೇಸರಿ ಬಣ್ಣ



## ರಾಘು ಸಂಚಿಗೆ ಕಲ್ಲಡ್ಕ ಕಂಗಾಲು

ಎಂಟ್ರಿ ಪಡೆದ ಅಂಡರ್‌ವರ್ಲ್ಡ್-ವಾಮಾಚಾರ



ನಿಗಮ ಮಂಡಳಿ


## ಮಿಂಚಿನ ಓಟ ಧಿಕಾರದ ಆಟ

ದಾವಣಗೆರೆ

## ದುಸ್ಥಿತಿಯಲ್ಲಿ ನಗರ ಪಾಲಿಕೆ



## ಕರ್‌ಗಳ ಮುಷ್ಕರ: ಗೆದ್ದವರಾರು? ಸೋತವರಾರು?




## ಸಮಾನ ಶಿಕ್ಷಣ ಮಾಲಿಕೆ - 3

# ವಿಶ್ವವಿದ್ಯಾಲಯಗಳನ್ನು ಕೊಲ್ಲಲು ಐದು ಸರಳ ಮತ್ತು ಸುಲಭ ವಿಧಾನಗಳು


ನಮ್ಮ ದೇಶದ ಸ್ಥಿತಿಯನ್ನೇ ದೂರುತ್ತಾ ಕಾಲ ಕಳೆಯುವುದನ್ನು ಸ್ವಲ್ಪ ಹೊತ್ತು ಅಮಾನತ್ತಿನಲ್ಲಿಡೋಣ. ಈ ಜಗತ್ತಿನ 'ಅತ್ಯಂತ ಮಾದರಿ' ದೇಶವಾದ ಅಮೆರಿಕದ ಶಿಕ್ಷಣ ಮಾದರಿಯನ್ನು ಪರಿಶೀಲಿಸೋಣ. ಇಡೀ ದೇಶ ಕಾರ್ಪೋರೇಟ್‌ಗಳ ಕಪಿಮುಷ್ಟಿಯಲ್ಲಿದ್ದರೂ, ಅಮೆರಿಕದಲ್ಲಿ ಇಂದಿಗೂ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ವ್ಯವಸ್ಥೆಯಲ್ಲಿ ಅಸ್ತಿತ್ವದಲ್ಲಿರುವುದು ಸಮಾನ ಶಾಲೆಯೇ. ಉನ್ನತ ಶಿಕ್ಷಣದ ವಿಚಾರದಲ್ಲೂ 50 ಮತ್ತು 60ರ ದಶಕದಲ್ಲಿ ಅಲ್ಲಿನ ವಿಶ್ವವಿದ್ಯಾಲಯಗಳು ಮತ್ತು ಕಾಲೇಜುಗಳು ಹಲವು ವಿಧದಲ್ಲಿ ಮಾದರಿಯೆನಿಸಿದ್ದವು. ಇಡೀ ಜಗತ್ತನ್ನು ಹಾಳುಗೆಡವಲು ಹೊರಟ ಕಾರ್ಪೋರೇಟ್ ಕಂಪೆನಿಗಳು, ಬಂಡವಾಳಶಾಹಿ ವ್ಯವಸ್ಥೆಯ ದೊಡ್ಡಣ್ಣನ ಮನೆಯೊಳಗೆ ಬಿಟ್ಟಾವೆಯೇ?

ಭಾರೀ ದೊಡ್ಡ ಮಾರುಕಟ್ಟೆಯಾದ ಶಿಕ್ಷಣ ಕ್ಷೇತ್ರವನ್ನು ಸಂಪೂರ್ಣ ಮಾರುಕಟ್ಟೆ ಲೋಕದೊಳಕ್ಕೆ ಎಳೆದುಕೊಂಡು 'ನಿಮ್ಮ ಜೇಬಿನೊಳಗೆ ಎಷ್ಟು ದುಡ್ಡಿದೆಯೋ ಅಷ್ಟು ಶಿಕ್ಷಣ' ಎನ್ನುವ ನೀತಿ ಅಳವಡಿಸುವುದು ಅಮೆರಿಕದಲ್ಲಿ ಸುಲಭವಿರಲಿಲ್ಲ. ಇಂದಿಗೂ ಅಲ್ಲಿ ಸಮಾನ ಶಾಲಾ ವ್ಯವಸ್ಥೆಯನ್ನು ಹಾಳುಗೆಡವುವ ಸರ್ಕಾರ ಮತ್ತು ಕಾರ್ಪೋರೇಟ್ ಸಂಸ್ಥೆಗಳ ಪ್ರಯತ್ನಕ್ಕೆ ಪ್ರತಿರೋಧ ತೀವ್ರವಾಗಿದ್ದು, ಅದನ್ನು ಬದಲಿಸಲಾಗಿಲ್ಲ. ಆದರೆ ಅವು ವಿಶ್ವವಿದ್ಯಾಲಯಗಳನ್ನು ಕೊಲ್ಲುವುದರಲ್ಲಿ ಯಶಸ್ವಿಯಾಗಿವೆ.

ಅಮೆರಿಕ ದೇಶವು ವಿಯೆಟ್ನಾಂ ಮೇಲೆ ಯುದ್ಧ ಸಾರಿ ಮಾರಣಹೋಮ ನಡೆಸುತ್ತಿದ್ದಾಗ, ದೇಶಪ್ರೇಮಿ ವಿಯೆಟ್ನಾಂ ಜನತೆ ಅದಕ್ಕೆ ಚಳ್ಳೆಹಣ್ಣು ತಿನ್ನಿಸುವುದರಲ್ಲಿ ಕರಗತರಾಗಿ ತಿರುಗೇಟು ನೀಡುತ್ತಿದ್ದರು. ಆಗ ಮತ್ತಷ್ಟು ಬಾಂಬ್ ದಾಳಿ ನಡೆಸುವ ಬದಲು ಅಮೆರಿಕ ಹಿಂದೆ ಸರಿಯಬೇಕಾಯಿತು. ಅದಕ್ಕೆ ಒಂದು ಮುಖ್ಯ ಕಾರಣ, ಅಮೆರಿಕದೊಳಗೆ ಅದರ ವಿರುದ್ಧ ಬಂದ ಪ್ರತಿಭಟನೆ. ಆ ಪ್ರತಿಭಟನೆಗಳ ಬಹುಮುಖ್ಯ ಪ್ರೇರಣೆ ಒದಗಿಬಂದಿದ್ದು ಅಲ್ಲಿನ ವಿಶ್ವವಿದ್ಯಾಲಯಗಳ ಕಾಲೇಜುಗಳಿಂದ. ಅಷ್ಟೇ ಅಲ್ಲದೇ, ಜನಾಂಗೀಯ ವಾದದ ವಿರುದ್ಧ, ಕಾರ್ಪೋರೇಟ್ ಕಂಪೆನಿಗಳಿಂದ ಪರಿಸರ ಹಾಳಾಗುತ್ತಿರುವುದರ ವಿರುದ್ಧ, ಮಹಿಳೆಯರು ಮತ್ತು ಸಲಿಂಗಿಗಳ ವಿರುದ್ಧದ ಭಾವನೆ ಹಾಗೂ ದೌರ್ಜನ್ಯಗಳ ವಿರುದ್ಧ ಅಲ್ಲಿನ ವಿಶ್ವವಿದ್ಯಾಲಯಗಳ ಅಧ್ಯಾಪಕರುಗಳು ಮತ್ತು ವಿದ್ಯಾರ್ಥಿಗಳು ದನಿಯೆತ್ತಿದ್ದರು.

ಇದಕ್ಕೊಂದು ಕಾರಣವೂ ಇತ್ತು. '50ರ ದಶಕದಲ್ಲಿ ಅಲ್ಲಿನ ವಿಶ್ವವಿದ್ಯಾಲಯಗಳು ಎಲ್ಲ ವರ್ಗದ ವಿದ್ಯಾರ್ಥಿಗಳಿಗೂ ತೆರೆದುಕೊಂಡಿದ್ದವು. ಸಾಪೇಕ್ಷವಾಗಿ ಹೆಚ್ಚಿನ ಸ್ವಾತಂತ್ರ್ಯ ಅವುಗಳಿಗಿತ್ತು.' ಇದು 60ರ ದಶಕದಲ್ಲೂ ಮುಂದುವರೆಯಿತು ಮತ್ತು ಈ ಕ್ಯಾಂಪಸ್‌ಗಳು ಸಾರ್ವಜನಿಕ ಸಂಗತಿಗಳ ಕುರಿತ ಚಿಂತನೆ ಮತ್ತು ಕಲಿಕೆಯ ತಾಣಗಳಾಗಿ ಬೆಳೆದಿದ್ದವು. ಅದೇ ರೀತಿ ಮುಂದುವರೆಯುವುದು ಅಮೆರಿಕದ ಆಳುವವರಿಗೆ ಬೇಕಿರಲಿಲ್ಲ. ಕಂಪೆನಿಗಳಿಗೆ ಹೊಸ ಮಾರುಕಟ್ಟೆಯ ತಾಣಗಳು ಬೇಕಿದ್ದವು. ಆದರೆ ಒಂದೇ ಸಾರಿ ಸರ್ಕಾರೀ ಅನುದಾನದಲ್ಲಿ ನಡೆಯುತ್ತಿದ್ದ ಶಿಕ್ಷಣ ಸಂಸ್ಥೆಗಳನ್ನು ಮುಚ್ಚುವುದು ಸಾಧ್ಯವಿರಲಿಲ್ಲವಾಗಿ ಅವು ಬೇರೊಂದು ಸೂತ್ರವನ್ನು ಅಳವಡಿಸಿದವು. ಅದರ ಕುರಿತು www.junctrebellion.wordpress.com ಎಂಬ ತಾಣದಲ್ಲಿ (ಇದು ಅಮೆರಿಕದ ವಿಶ್ವವಿದ್ಯಾಲಯಗಳ ಮೇಲೆ ಕಾರ್ಪೋರೇಟ್ ದಾಳಿಯನ್ನು ವಿರೋಧಿಸುವ ಗುಂಪಿನದ್ದು) **How the American University was Killed in Five Easy Steps** ಎಂಬ ಲೇಖನವೊಂದು ಪ್ರಕಟವಾಗಿದೆ. ಅದು ಇಂದಿನ ನಮ್ಮ ದೇಶದ ಉನ್ನತ ಶಿಕ್ಷಣದ ಪರಿಸ್ಥಿತಿಯ ಜೊತೆ ತಾಳೆಯಾಗುವುದರಿಂದ ಈ ಮಾಲಿಕೆಯಲ್ಲಿ ಪರಿಚಯಿಸುವ ಅಗತ್ಯವಿದೆ.

ಒಂದು, ಉನ್ನತ ಶಿಕ್ಷಣ ವ್ಯವಸ್ಥೆಗೆ ಸರ್ಕಾರೀ ಅನುದಾನವನ್ನು ನಿಧಾನವಾಗಿ ಕಡಿತಗೊಳಿಸಿ: 1989ರಲ್ಲಿ ಒಟ್ಟಾರೆ ಉನ್ನತ ಶಿಕ್ಷಣಕ್ಕೆ ಖರ್ಚಾಗುತ್ತಿದ್ದ ಹಣದಲ್ಲಿ ಸರ್ಕಾರ ನೀಡುತ್ತಿದ್ದ ಹಣ ಶೇ.82ರಷ್ಟಿತ್ತು. 2011ರ ಹೊತ್ತಿಗೆ ಅದು ಶೇ.51ಕ್ಕೆ ಇಳಿಯಿತು. ಇದರ ಪರಿಣಾಮವಾಗಿ ಈ ಹಿಂದೆ ಉನ್ನತ ಶಿಕ್ಷಣವನ್ನು ಬಯಸುತ್ತಿದ್ದ ಬಹುತೇಕರಿಗೆ ಅದು ಲಭ್ಯವಾಗುತ್ತಿದ್ದರೆ, ಈಗ ಕ್ಯಾಲಿಫೋರ್ನಿಯಾ ಸರ್ಕಾರೀ ವಿಶ್ವವಿದ್ಯಾಲಯಗಳು ಮಾತ್ರವೇ ಸುಮಾರು 3 ಲಕ್ಷ ವಿದ್ಯಾರ್ಥಿಗಳಿಗೆ ಪ್ರವೇಶ ನಿರಾಕರಿಸಿತು.




ಭಾರತದಲ್ಲೂ 90ರ ದಶಕದಿಂದಲೇ 'ಪೇಮೆಂಟ್ ಸೀಟುಗಳು ಅಥವಾ self financing courses' ಶುರುವಾಗಿದ್ದು, ವಿದ್ಯಾರ್ಥಿಗಳು ಹಿಂದಿಗಿಂತಲೂ ಹೆಚ್ಚು ಶುಲ್ಕವನ್ನು ಕಟ್ಟಬೇಕಾಗುತ್ತಿದೆ. ಈಗ ಹಿಂದುಳಿದ ಮತ್ತು ದಲಿತ ವಿದ್ಯಾರ್ಥಿಗಳ ಶುಲ್ಕ ಮರುಪಾವತಿಯನ್ನು ಮಾಡದೇ ಇರುವುದು ಇತ್ಯಾದಿಗಳನ್ನು ಗಮನಿಸಿದರೆ ಇದನ್ನು ಯಾವ ರೀತಿಯಲ್ಲಿ ಹಂತಹಂತವಾಗಿ ಮಾಡಬಹುದು ಎಂಬುದು ಗೊತ್ತಾಗುತ್ತದೆ.

ಎರಡು, ಬೋಧಕ ವರ್ಗದ ವೃತ್ತಿಪರತೆಯನ್ನು ಕುಗ್ಗಿಸುವುದು ಮತ್ತು ಬೋಧಕ ವರ್ಗವನ್ನು ಅಭದ್ರತೆಯಲ್ಲಿಡುವುದು. ಅಮೆರಿಕದಲ್ಲಿ ಈ ಸದ್ಯ ಇರುವ ಒಟ್ಟು 15 ಲಕ್ಷ ವಿಶ್ವವಿದ್ಯಾಲಯ ಶಿಕ್ಷಕರಲ್ಲಿ 10 ಲಕ್ಷ ಶಿಕ್ಷಕರು ಗುತ್ತಿಗೆ ಆಧಾರದಲ್ಲಿರುವ, ತಾತ್ಕಾಲಿಕ ಹುದ್ದೆಗಳಲ್ಲಿರುವ (6 ತಿಂಗಳ ಕಾಂಟ್ರಾಕ್ಟ್ ಇತ್ಯಾದಿ) ಶಿಕ್ಷಕರಾಗಿದ್ದಾರೆ. ಅವರಿಗೆ ನೀಡುತ್ತಿರುವ ವೇತನವಾದರೂ ಎಷ್ಟು? 1975ರ ಸಂದರ್ಭದಲ್ಲಿ ಕಾಯಂ ಶಿಕ್ಷಕರು ಪಡೆದುಕೊಳ್ಳುತ್ತಿದ್ದಷ್ಟು ಸಂಬಳವನ್ನು ಈಗ ಈ ಗುತ್ತಿಗೆ ಶಿಕ್ಷಕರಿಗೆ ನೀಡಲಾಗುತ್ತಿದೆ. ಉದಾಹರಣೆಗೆ ಅಲ್ಲಿನ ಟೆಂಪಲ್ ವಿಶ್ವವಿದ್ಯಾಲಯದಲ್ಲಿ ಶಿಕ್ಷಕರ ವೇತನದ ವಾರ್ಷಿಕ ಸರಾಸರಿ 10,000 ಡಾಲರ್‌ಗಳಾಗಿತ್ತು. ಈಗ ಅಮೆರಿಕದ ಶಿಕ್ಷಕರ ವೇತನದ ವಾರ್ಷಿಕ ಸರಾಸರಿ 8,000ದಿಂದ 14,000 ಡಾಲರ್‌ಗಳಾಗಿವೆ. ಈ ವ್ಯತ್ಯಾಸವೂ ಅವರು ಎಷ್ಟು ಕೋರ್ಸ್‌ಗಳಿಗೆ ಪಾಠ ಮಾಡುತ್ತಾರೆ, ಅವರ 'ವರ್ಕ್‌ಲೋಡ್' ಎಷ್ಟು ಎನ್ನುವುದರ ಮೇಲೆ ಆಧರಿಸಿರುತ್ತದೆ. ಇಡೀ ದೇಶದಲ್ಲಿ ಪದವಿ ತರಗತಿಗಳಿಗೆ ಪಾಠ ಮಾಡುತ್ತಿರುವ ಮೇಷ್ಟರುಗಳು ಮತ್ತು ಮೇಡಂಗಳು ಬಡತನರೇಖೆಯ ಆಜುಬಾಜಿನಲ್ಲಿರುತ್ತಾರೆ. ಇಂತಹ ಕಡೆ ಅವರ ವೃತ್ತಿಪರತೆಯ ಗುಣಮಟ್ಟ ಏನಿರಬಹುದು?

ಭಾರತದಲ್ಲೂ ಅತಿಥಿ ಶಿಕ್ಷಕರು, ಅತಿಥಿ ಉಪನ್ಯಾಸಕರು ಅಥವಾ ಕಳೆದ ವರ್ಷ ಸರ್ಕಾರೀ ಆದೇಶದಲ್ಲಿ ಹೇಳಿದ್ದಂತೆ ಬಾಡಿಗೆ ಉಪನ್ಯಾಸಕರು ಚಾಲ್ತಿಗೆ ಬಂದು ಸಾಕಷ್ಟು ಕಾಲವಾಗಿದೆ. ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣ ವ್ಯವಸ್ಥೆಯಲ್ಲಿ ಸರ್ಕಾರವು ಇಂತಹ ಶಿಕ್ಷಕರನ್ನು ಇದುವರೆಗೂ ನೇಮಿಸಿಕೊಂಡಿರಲಿಲ್ಲ, ಈಗ ಅದೂ ಶುರುವಾಗುತ್ತಿದೆ. ಬಹುತೇಕ ಎಲ್ಲಾ ಕಾಲೇಜುಗಳಲ್ಲೂ ಅತಿಥಿ ಉಪನ್ಯಾಸಕರ ಸಂಖ್ಯೆಯು ಕಾಯಂ ಉಪನ್ಯಾಸಕರ ಸಂಖ್ಯೆಯನ್ನು ದಾಟಿದೆ.

ಮೂರು, ವಿಶ್ವವಿದ್ಯಾಲಯಗಳ ಆಡಳಿತವನ್ನು ಕೈಗೆ ತೆಗೆದುಕೊಳ್ಳಲು ಬೋಧಕೇತರ (ಆಡಳಿತ ಮತ್ತು ಮ್ಯಾನೇಜ್‌ಮೆಂಟ್ ಪದವಿಗಳನ್ನು ಪಡೆದುಕೊಂಡಿರುವ) ವರ್ಗವನ್ನು ನಿಯೋಜಿಸಿ. ಇವರೆಲ್ಲರೂ ಕಾಯಂ ನೌಕರರಾಗಿರುತ್ತಾರೆ. ಸದ್ಯದ ಪರಿಸ್ಥಿತಿಯಲ್ಲಿ ಕಾಯಂ ಸಿಬ್ಬಂದಿಯಲ್ಲಿ ಬೋಧಕ ವರ್ಗಕ್ಕಿಂತಲೂ ಈ ಆಡಳಿತ ಸಿಬ್ಬಂದಿಯ ಸಂಖ್ಯೆ ಅಲ್ಲಿ ಹೆಚ್ಚಿದೆ. ಆ ಪ್ರಮಾಣಕ್ಕೆ ಶಿಕ್ಷಣದ ಆಡಳಿತವನ್ನು 'ಆಡಳಿತ ವೃತ್ತಿಪರ'ರ ಕೈಗೆ ಒಪ್ಪಿಸಲಾಗಿದೆ. ಇದಲ್ಲದೇ, 'ಕನ್ಸಲ್ಟೆಂಟುಗಳು', 'ಪಿಆರ್ ಏಜೆನ್ಸಿಗಳು', 'ಮಾರ್ಕೆಟಿಂಗ್ ಫರ್ಮ್'ಗಳ ನೆರವನ್ನೂ ಯಥೇಚ್ಛವಾಗಿ ಪಡೆದುಕೊಳ್ಳಲಾಗುತ್ತಿದೆ.

ಈ ಪದಗಳಿಗೆ ಸಂವಾದಿಯಾಗಿರುವ ಕನ್ನಡ ಪದಗಳೇ ಇಲ್ಲವೇಕೆಂದರೆ, ಇಂತಹ ಮಾರುಕಟ್ಟೆ ಪರಿಣಿತಿ ಮೊದಲು ನಮ್ಮಲ್ಲಿ ಶುರುವಾಗಲಿಲ್ಲ. ಆದರೆ ಇಂತಹ ಪರಿಣಿತರನ್ನು ಶಿಕ್ಷಣ ವ್ಯವಸ್ಥೆಯನ್ನು ನಿಯಂತ್ರಿಸಲು ಬಳಸುವ ಪರಿಪಾಠವಂತೂ ಶುರುವಾಗಿದೆ. ಆದರೆ ಇದಿನ್ನೂ ಆರಂಭದ ಹಂತದಲ್ಲಿ ಇದೆ. ಈ ದೇಶದ ಖಾಸಗಿ ಶಿಕ್ಷಣ ವ್ಯವಸ್ಥೆಯಲ್ಲಂತೂ ಈ ರೀತಿಯ ಮ್ಯಾನೇಜರಿಯಲ್ ಪದ್ಧತಿ ಈಗಾಗಲೇ ಸಂಪೂರ್ಣ ಪ್ರಾಬಲ್ಯ ಸಾಧಿಸಿದೆ.

ನಾಲ್ಕು, ಕಾರ್ಪೋರೇಟ್ ಸಂಸ್ಕೃತಿ ಮತ್ತು ಕಾರ್ಪೋರೇಟ್ ಹಣವನ್ನು ವಿಶ್ವವಿದ್ಯಾಲಯಗಳಲ್ಲಿ ನುಗ್ಗಿಸಿ. ಬುದ್ಧಿಜೀವಿ ವರ್ಗವು ಎಂದಿಗೂ ಕಾರ್ಪೋರೇಟ್ ಗುಲಾಮಗಿರಿಯನ್ನು ಮಾಡಬಾರದು, ಅದು ಯಾವಾಗಲೂ ಸ್ವಾಯತ್ತ ವರ್ಗವಾಗಿರಬೇಕು ಎಂಬುದು ಒಂದು ಮೌಲ್ಯವಾಗಿತ್ತು. 'ಇನ್‌ಸೈಡ್ ಜಾಬ್' ಎಂಬ ಒಂದು ಸಿನಿಮಾ, ಈ ಮೌಲ್ಯವು ಯಾವ ರೀತಿ ಮುಳುಗಿಹೋಗಿದೆ ಎಂಬುದನ್ನು ಬಿತ್ತರಿಸಿದೆ. ವಾಲ್‌ಸ್ಟ್ರೀಟ್ (ಅಮೆರಿಕದ ಷೇರು ಮಾರುಕಟ್ಟೆ) ಹಾರ್ವರ್ಡ್, ಯೇಲ್, ಸ್ಟಾನ್‌ಫೋರ್ಡ್, ಎಂಐಟಿಗಳ ದೊಡ್ಡ ತಜ್ಞರನ್ನು ಕೊಂಡುಕೊಂಡು ತನ್ನ ಪರವಾಗಿ ಮಾತ ನಿಯೋಜಿಸಿಕೊಂಡಿದೆ ಎಂಬುದು ಅ ತೋರಿಸಲಾಗಿದೆ. ಗೋಲ್ಡ್‌ಮನ್ ಸ್ಯಾಕ್ಸ್ ಮತ್ತು ಲಿಂಚ್‌ಗಳಂತಹ ವಂಚಕ ಕಂಪೆನಿಗಳಿಂದ ಹಣ ಪಡ ಆರ್ಥಿಕ ತಜ್ಞರು ಅವರ ಪರವಾಗಿ ಪ್ರಬಂಧ ಮಂಡಿಸಿದ್ದರು.

ಇವೆಲ್ಲಾ ಸಾಧ್ಯವಾಗಿದ್ದು ಹೇಗೆಂದರೆ, ವಿಶ್ವವಿದ್ಯಾ ಸರ್ಕಾರೀ ಆಗಿರುವಾಗಲೇ ಅದರ ವಿವಿಧ ವಿಭ ಪೀಠಗಳನ್ನು ಕಾರ್ಪೋರೇಟ್ ಕಂಪೆನಿಗಳ ಹಣದ ಒಪ್ಪಿಸಲಾಗಿತ್ತು. ಆ ಹಣವು ಕಾರ್ಪೋರೇಟ್ ಸಂಸ್ಕೃ ಒಳಗೆ ತಂದಿತು. ಇದು ಈಗಾಗಲೇ ಕನ ವಿಶ್ವವಿದ್ಯಾಲಯಗಳೊಳಗೂ ಆವರಿಸುತ್ತಿರು ನೋಡುತ್ತೇವೆ. ಭಾರತದ ಅತ್ಯಂತ ಕುಬೇರರಲ್ಲೊಬ್ಬನಾದ ಅಜೀಂ ಪ್ರೇಂಜಿ ಶಿಕ್ಷಣ ವ್ಯ ನಡೆಸುತ್ತಿರುವ ಪ್ರಯೋಗಗಳ ದೂರಗಾಮಿ ಪರಿಣಾ ಈಗಲೇ ಕಣ್ಣಾರೆ ನೋಡಬೇಕೆಂದರೆ ಅಮೆರಿಕ ವ್ಯವಸ್ಥೆಯನ್ನೇ ನೋಡಬೇಕು. ಇದೀಗ ಅಜೀಂ ಫೌಂಡೇಷನ್ನಿನ ಪ್ರತಿನಿಧಿಗಳು ಯಾದಗಿರಿ, ಮಂ ಉತ್ತರ ಕನ್ನಡ ಜಿಲ್ಲೆಗಳಲ್ಲಿ ಅಧಿಕೃತವಾಗಿಯೇ ಸಭೆಗಳಲ್ಲಿ ಭಾಗವಹಿಸುವ ಅವಕಾ ಪಡೆದುಕೊಂಡಾಗಿದೆ. ತನ್ನದೇ ಒಂದು ವಿಶ್ವವಿದ್ಯಾಲಯವನ್ನೂ ಬೆಂಗಳೂರಿನಲ್ಲಿ ಹೊಂದಿ ಕಂಪೆನಿಯಲ್ಲಿ ಖ್ಯಾತಿವೆತ್ತ ಬುದ್ಧಿಜೀವಿಗಳು ಮಾಡುತ್ತಿದ್ದಾರೆ.

ಐದು, ವಿದ್ಯಾರ್ಥಿಗಳನ್ನು ಸಾಲ ಕಲಿಕೆಯೆನ್ನುವುದು ಒಂದು ಸೃಜನಶೀಲವಾದ ಏಕಕಾಲದಲ್ಲಿ ಕಲಿಸುವವರು ಮತ್ತು ಕಲಿತುಕೊ ಜೊತೆಗೂಡಿ ನಡೆಸುವ ಪ್ರಕ್ರಿಯೆ. ಶಿಕ್ಷಣ ಹೇಳುವುದೇನೆಂದರೆ ಅದು ಕೇವಲ ವಿಶ್ವವಿದ್ಯಾ ಮಾತ್ರವಲ್ಲ, ಪೂರ್ವ ಪ್ರಾಥಮಿಕ ಹಂತದಲ್ಲೂ ನ ನಡೆಯಲೇಬೇಕಾದ ಒಂದು ವಿಧಾನ. ವಿಶ್ವವಿದ್ಯಾಲಯ ಮಟ್ಟದಲ್ಲೂ ಈ ಪ್ರಕ್ರಿಯೆ ಕೇವಲ ಪ್ರೊಫೆಸರ್‌ಗಳಿಗೆ ತಗ್ಗಿ ಬಗ್ಗಿ ನಡೆದು ಕೈಗಾರಿಕೆಯಲ್ಲಿ ಕಾರ್ಮಿಕರು ಇರುವಂತೆ, ಇಲಾಖೆಯಲ್ಲಿ ಕೆಳಗಿನ ಹಂತದ ಸಿಬ್ಬಂದಿಯ ಮಾಡಬೇಕಾದ ವಿಧಾನವನ್ನು ಅಳವಡಿಸುವ ಮೂಲಕ ಸ್ವತಃ ತಾವೇ ಒಂದು ಸಿದ್ಧಪಡಿಸಿದ ಶಿಕ್ಷಣ ಸಂಸ್ಥೆಗಳಿಂದ ಹೊರಬರುವ ಸಮುದಾಯವನ್ನು ಸೃಷ್ಟಿಸುವುದು.

ವಿವಿಧ ರೀತಿಯ ಸಾಲಗಳನ್ನು ಸರ್ಕಾರ ಮತ್ತು ಹಣಕಾಸು ಸಂಸ್ಥೆಗಳಿಂದ ಪಡೆದುಕೊಳ್ಳುವ ವಿದ್ಯಾ ಅವನ್ನು ನಂತರ ತೀರಿಸಬೇಕಾದ ಒತ್ತಡದಲ್ಲಿರುತ 20ನೇ ಶತಮಾನದುದ್ದಕ್ಕೂ ಅಮೆರಿಕ ವಿಶ್ವವಿದ್ಯಾಲಯಗಳ ಬಹುತೇಕ ಸೀ ಉಚಿತವಾಗಿದ್ದವು ಎಂಬುದು ಇಂದಿನ ತಲೆಮಾರಿಗೆ ಇಲ್ಲ. ಹಾಗಾಗಿ ತನಗೆ ಬೇಕಾದ ಸರಕನ್ನು ಕೊಂಡು ಗ್ರಾಹಕನ ರೀತಿಯಲ್ಲಿ ವಿದ್ಯಾರ್ಥಿ ಮನಸ್ಥಿ ರೂಪಿಸಲಾಗುತ್ತದೆ. ಈ ರೀತಿಯ ಸ್ಥಿತಿ ಭಾರತದ ವೇಗವಾಗಿ ಮತ್ತು ವ್ಯಾಪಕವಾಗಿ ಹರಡುತ್ತಿರ ನೋಡುತ್ತೇವೆ.

ಅಮೆರಿಕವೇ ಮಾದರಿಯಾಗಿರುವಾಗ, ಹಂತಗಳಲ್ಲಿ ನಾವು ಕೆಲವದರ ಮೂಲಕ ಹಾದುಹೋಗುತ್ತಿದ್ದೇವೆ ಮತ್ತು ಕೆಲವು ಹಾದುಹೋಗಲು ಸಿದ್ಧತೆ ನಡೆಯುತ್ತಿದೆ; ಮತ್ತು ಪರಿಣಾಮ ಏನಾಗಲಿದೆ ಎಂಬುದನ್ನು ವಿಶ್ವವಿದ್ಯಾಲಯಗಳು ಈಗಲೇ ನಮಗೆ ತೋ ಯುಪಿಎ ಸರ್ಕಾರವು ಸಿದ್ಧಪಡಿಸಿರುವ, ಎನ್‌ಡಿಎ ಸರ್ಕಾರವು ಮತ್ತಷ್ಟು ಕಾರ್ಪೋ ಧೋರಣೆಯಿಂದ ಸಂಸತ್ತಿನ ಅನು ಪಡೆದುಕೊಳ್ಳಲಿರುವ ಹಲವು ಕಾಯ್ದೆಗಳು ಮೇಲೆ ಎರಗಲಿವೆ. The foreign ed institutions bill, The education tr bill, The technical, medical ed institutions bill, The NAAC for educations bill ಇತ್ಯಾದಿಗಳು ಅ ಇವೆಲ್ಲವೂ ಜಾರಿಗೆ ಬಂದರೆ, ಯುಜಿಸಿಯು ಇ ಅಕ್ಷರಶಃ ಅದನ್ನು ರದ್ದುಗೊಳಿಸುವ (dis ಪ್ರಸ್ತಾಪವೂ ಇವುಗಳಲ್ಲಿವೆ.

ಭಾರತವು ಅಮೆರಿಕ ಆಗುವುದಿಲ್ಲ, ಭಾರತ ಅಂಬಾನಿ, ಅದಾನಿ, ಟಾಟಾ ಇವರೆಲ್ಲರ ಅ ವಾಗಿದೆ. ಅದಕ್ಕೆ ನಮ್ಮ ಶಿಕ್ಷಣ ಕ್ಷೇತ್ರವೂ ಗಿರುವುದಿಲ್ಲ. ಸುಲಭ ಮತ್ತು ಸರಳವಲ್ಲದಿದ್ದರೂ ಭಾರತದ ಶಿಕ್ಷಣ ಕ್ಷೇತ್ರವನ್ನು ಉಳಿಸಿಕೊಳ್ಳಲು ಮತ್ತು ಪ್ರಜಾತಂತ್ರೀಕರಿಸಲು ಬೇಕಾದ ಐದು ಮಾರ್ಗಗಳನ್ನು ಹುಡುಕಿಕೊಳ್ಳುವ ಅಗತ್ಯವ ಮುಂದಿದೆ.

# ಜಾತಿ ವ್ಯವಸ್ಥೆಗೆ ಬಲಿಯಾದ ಮತ್ತೊಂದು ದಲಿತ ಕುಟುಂಬ



• ಗೌರಿ ಲಂಕೇಶ್
editorlankesh@gmail.com

ಕಳೆದ ವಾರ ಮಹಾರಾಷ್ಟ್ರದಲ್ಲಿ ಒಂದು ಭೀಕರ ೆ ನಡೆಯಿತು. ಅಹಮದ್‌ನಗರ ಜಿಲ್ಲೆಯ ಜಾವಖೇಡೆ ಯಲ್ಲಿ ಅಕ್ಟೋಬರ್ 23ರ ಬೆಳಗ್ಗೆ ಒಬ್ಬ ರೈತನ ಮನೆಯ ಬಾಗಿಲುಗಳು ತೆರೆದಿದ್ದು ಒಳಗಡೆ ಯಾರೂ ದ್ದು ಹಳ್ಳಿಯ ಕೆಲವರಲ್ಲಿ ಆಶ್ಚರ್ಯ ಮೂಡಿಸಿತು. ತೂಹಲದಿಂದ ಅವರು ಮನೆಯೊಳಗಡೆ ನೋಡಿದಾಗ ಡೆಗಳೆಲ್ಲ ರಕ್ತಮಯವಾಗಿದ್ದು ಕಂಡುಬಂತು. ಅದು ಯ್ ಜಾಧವ್ ಎಂಬಾತನ ಮನೆಯಾಗಿದ್ದರಿಂದ ಲೇ ಹಳ್ಳಿಯ ಜನ ಹತ್ತಿರದ ಹಳ್ಳಿಗಳಲ್ಲಿ ವಾಸಿಸುತ್ತಿದ್ದ ಸಂಬಂಧಿಕರಿಗೆ ವಿಷಯ ತಿಳಿಸಿದರು. ಜಾಧವ್ ಬಂಧಿಗಳು ಬಂದು ಆ ಮನೆಯಲ್ಲಿ ವಾಸಿಸುತ್ತಿದ್ದ ಯ್ ಜಾಧವ್ (42), ಆತನ ಪತ್ನಿ ಜಯಶ್ರೀ ಮತ್ತು ಮಗ ಸುನೀಲ್ (20) ಗಾಗಿ ಕಲಾರಂಭಿಸಿದರು.


ಸಂಜಯ್ ಜಾಧವ್, ಆತನ ಹೆಂಡತಿ ಮತ್ತು ಮಗನ ಗಳನ್ನು ತುಂಡುತುಂಡಾಗಿ ಕೊಚ್ಚಿ, ಅವುಗಳನ್ನು ಬೇರೆ ಕಡೆ ಎಸೆಯಲಾಗಿತ್ತು. ಅದರಲ್ಲೂ ಯುವಕ ಲನ ಶಿರಚ್ಛೇದ ಮಾಡಿ ರುಂಡ ಮತ್ತು ಮುಂಡವನ್ನು ತೆರೆದ ಬಾವಿಯಲ್ಲಿ ಬಿಸಾಡಲಾಗಿತ್ತು. ಆತನ ಳುಗಳನ್ನು ಬೇರೆಲ್ಲೋ ಹಾಕಿದ್ದರು. ಮೂರೂ ಜನರ ಗಳ ಭಾಗಗಳನ್ನು ವಿವಿಧ ಕಡೆಗಳಲ್ಲಿ ಪತ್ತೆಹಚ್ಚಿ ಳನ್ನೆಲ್ಲ ಸಂಗ್ರಹಿಸಲು ಜಾಧವ್ ಸಂಬಂಧಿಕರಿಗೆ ಇಡೀ ಬೇಕಾಯಿತು.

ಎಂಬ ದಲಿತ ಯುವಕ ಅದೇ ಹಳ್ಳಿಯ ಓರ್ವ ಮರಾಠಾ ಮಹಿಳೆಯೊಂದಿಗೆ ಸಂಬಂಧ ಹೊಂದಿದ್ದು; ಅದು ಗೊತ್ತಾಗುತ್ತಿದ್ದಂತೆ 'ಮೇಲು' ಜಾತಿಯ ಮರಾಠರು ಜಾಧವ್ ಕುಟುಂಬದ ಮೇಲೆ ಸೇಡು ತೀರಿಸಿಕೊಂಡಿರುವುದು.

ಸಂಜಯ್ ಜಾಧವ್ ಒಂದೂವರೆ ಎಕರೆ ಹೊಲವನ್ನು ಹೊಂದಿದ್ದ ಪುಟ್ಟ ರೈತನಾಗಿದ್ದ. ಆತನ ಪತ್ನಿ ಜಯಶ್ರೀ ಮನೆ ಮತ್ತು ಹೊಲದಲ್ಲಿ ಕೆಲಸ ಮಾಡುತ್ತಿದ್ದಳು. ಅವರ ಪುತ್ರ ಸುನೀಲ್ ಮುಂಬೈಯಲ್ಲಿ ಹಾಲಿನ ಡೈರಿಯಲ್ಲಿ ಅರೆಕಾಲಿಕನಾಗಿ ಕೆಲಸ ಮಾಡುತ್ತಾ ಪಶುಸಂಗೋಪನೆಯನ್ನು ಓದುತ್ತಿದ್ದ. ದೀಪಾವಳಿ ಹಬ್ಬಕ್ಕೆಂದು ಹಳ್ಳಿಗೆ ಬಂದಿದ್ದ ಸುನೀಲ್ ಆಧುನಿಕ ಯುವಕ. ಆತನ ಮೊಬೈಲ್‌ನಲ್ಲಿ ಅದೇ ಹಳ್ಳಿಯ ಮರಾಠಿ ಮಹಿಳೆಯ ಕರೆಗಳು ಇದ್ದವಲ್ಲದೆ ಸುನೀಲ್ ತನ್ನ ಫೇಸ್‌ಬುಕ್ ಅಕೌಂಟಿನಲ್ಲೂ ಆಕೆಯ ಫೋಟೋ ಹಾಕಿದ್ದ.

ಸುನೀಲ್ ತರಹದ ದಲಿತ ಯುವಕ 'ಮೇಲು' ಜಾತಿಯ ಮಹಿಳೆಯ ಸಂಗ ಮಾಡುವುದು ಆ ಜಾತಿಯ ಕರ್ಮಠರಿಗೆ ಸರಿ ಕಾಣಲಿಲ್ಲ. ಆದ್ದರಿಂದಲೇ ನರಕ ಚತುರ್ದಶಿ ಮುಗಿಸಿಕೊಂಡು ನಿದ್ರಿಸುತ್ತಿದ್ದ ಜಾಧವ್ ಕುಟುಂಬದ ಮೇಲೆ ದಾಳಿ ಇಟ್ಟ ಮರಾಠರ ತಂಡ ಅವರನ್ನೆಲ್ಲ ನಿರ್ದಯವಾಗಿ ಕೊಂದು ಬಿಸಾಡಿದೆ.

ಅಂದಹಾಗೆ, ಇದೇ ಅಹಮದ್‌ನಗರ ಜಿಲ್ಲೆಯಲ್ಲೇ ಕಳೆದ ಜುಲೈ 17ರಂದು ನಿತಿಶ್ ಆಗೆ ಎಂಬ ಮತ್ತೋರ್ವ ದಲಿತ ಯುವಕ ಬೇರೆ ಜಾತಿಯ ಯುವತಿಯನ್ನು


ಜಾಧವ್ ಮನೆ ಮತ್ತು ಕೊಲೆಯಾದ ಸಂಜಯ್, ಸುನೀಲ್ ಹಾಗು ಜಯಶ್ರೀ

ಪ್ರೀತಿಸುತ್ತಿದ್ದ ಎಂಬ ಕಾರಣಕ್ಕೆ ಕೊಲೆ ಮಾಡಲಾಗಿತ್ತು. ಆತನ ಕೊಲೆಯೂ ಸುದ್ದಿಯಾಗಲೇ ಇಲ್ಲ.

ಅಷ್ಟೇ ಅಲ್ಲ, ಇತ್ತೀಚೆಗೆ, ಅಂದರೆ ನವೆಂಬರ್ 3ರಂದು. ಗುಜರಾತಿನಲ್ಲಿ ದಲಿತ ಮಹಿಳೆಯರ, ವೃದ್ಧರ, ಮಕ್ಕಳ ಮೇಲೆ 'ಮೇಲು' ಜಾತಿಯ ಠಾಕೂರರು ದಾಳಿ ಮಾಡಿದ್ದಾರೆ. ಅದಕ್ಕೆ ಕಾರಣ ಕುಡಿಯಲು ಶುದ್ಧ ನೀರು ಬೇಕೆಂದು ದಲಿತ ಮಹಿಳೆಯರು ಹೋರಾಟ ಮಾಡಿದ್ದು. ಮಾಳವಾಡ ಎಂಭ ಹಳ್ಳಿಯಲ್ಲಿ ದಲಿತರು ವಾಸಿಸುವ ಕೇರಿಗೆ ಕುಡಿಯುವ ನೀರು ಸರಬರಾಜು ಆಗದಂತೆ ಠಾಕೂರರು ತಡೆದಿದ್ದರು. ಆಗ ದಲಿತ ಮಹಿಳೆಯರು ನೀರು ಪೈಪಿಗೆ ತೂತು ಕೊರೆದು ನೀರು ಸಂಗ್ರಹಿಸಲಾರಂಭಿಸಿದರು. ಇದರಿಂದ ಕೋಪಗೊಂಡ ಠಾಕೂರರು ಆ ಹಳ್ಳಿಯಲ್ಲಿರುವ ಎಲ್ಲಾ 60 ದಲಿತ ಕುಟುಂಬಗಳ ಮನೆಗಳ ಮೇಲೆ ದಾಳಿ ಮಾಡಿದರಲ್ಲದೆ, ಗರ್ಭಿಣಿಯರು, ಕಂದಮ್ಮಗಳು ಎಂದೆಲ್ಲ ನೋಡದೆ ಎಲ್ಲರನ್ನು ಹೀನಾಯವಾಗಿ ಥಳಿಸಿದ್ದಾರೆ. ಈ ಪ್ರಕರಣದ ನಂತರ ಪೊಲೀಸರು ಮೇಲು ಜಾತಿಯವರನ್ನು ಕಾಟಾಚಾರಕ್ಕೆ ಬಂಧಿಸಿದ್ದು ಅವರೆಲ್ಲ ಈಗ ಜಾಮೀನಿನ ಮೇಲೆ ಹೊರಬಂದಿದ್ದಾರೆ.

ಜಗತ್ತಿನಲ್ಲೇ ಎಲ್ಲೂ ಇರದ, ಆದರೆ ಮಹಾನ್ ಭಾರತದಲ್ಲಿ ಮಾತ್ರ ಆಳವಾಗಿ ಬೇರೂರಿರುವ ಈ ಜಾತಿ ವ್ಯವಸ್ಥೆ ಹೇಗೆ ದಲಿತರನ್ನು ಶೋಷಿಸುತ್ತಿದೆ ಮತ್ತು ಆ ನಿಟ್ಟಿನಲ್ಲಿ ಹೇಗೆ ಮಹಿಳೆಯರನ್ನೇ ವಾಹನವಾಗಿಸಿಕೊಂಡಿದೆ ಎಂಬುದು ಇಂತಹ ಪ್ರಕರಣಗಳಿಂದ ಮತ್ತೆಮತ್ತೆ ಸಾಬೀತಾಗುತ್ತಲೇ ಇದೆ. ಆದರೆ ಯಾವ ರಾಜಕೀಯ ಪಕ್ಷಗಳೂ ಈ ಗಂಭೀರ ಸಮಸ್ಯೆಯನ್ನು ಬಗೆಹರಿಸುವ ಚಿಂತನೆಯಲ್ಲಿ ತೊಡಗಿಲ್ಲ. ಬದಲಾಗಿ ವಿವಿಧ ರೀತಿಯಲ್ಲಿ ಈ ಜಾತಿ ವ್ಯವಸ್ಥೆಯನ್ನು ಪೋಷಿಸುತ್ತಲೇ ಬಂದಿವೆ. ಅದರತ್ತ ಗಮನಹರಿಸುವ ಮುನ್ನ ಈ ಪ್ರಕರಣದಲ್ಲಿ ದಲಿತ ಯುವಕನ ಬದಲಾಗಿ ಓರ್ವ ಮುಸಲ್ಮಾನ ಇದ್ದಿದ್ದರೆ ಏನಾಗುತ್ತಿತ್ತು ಎಂಬುದನ್ನು ನೋಡೋಣ.

ಈಗ ಎಲ್ಲರಿಗೂ ಗೊತ್ತಿರುವಂತೆ ಚೆಡ್ಡಿಗಳು 'ಲವ್ ಜಿಹಾದ್' ಎಂಬ ಕಪೋಲಕಲ್ಪಿತ ಯೋಜನೆಗೆ ಪ್ರಚಾರ ಸಿಗುವಂತೆ ಮಾಡಿದ್ದಾರೆ. ಅವರ ಪ್ರಕಾರ ಹಿಂದೂ ಯುವತಿಯರನ್ನು ಮುಸಲ್ಮಾನ ಯುವಕರು ಮೋಡಿ ಮಾಡಿ ಮತಾಂತರಗೊಳಿಸುತ್ತಿದ್ದಾರೆ. ಆದ್ದರಿಂದ ಮುಸಲ್ಮಾನ ಯುವಕರಿಂದ ಹಿಂದೂ ಯುವತಿಯರನ್ನು ರಕ್ಷಿಸಬೇಕಿದೆ. ಇತ್ತೀಚೆಗೆ ಆರೆಸ್ಸೆಸ್ ಮುಖ್ಯಸ್ಥ ಮೋಹನ್ ಭಾಗವತ್ "ಲವ್ ಜಿಹಾದ್‌ಗೆ ಸೂಕ್ತ ಪರಿಹಾರ ನಮ್ಮ ಹಿಂದೂ ಯುವತಿಯರಿಗೆ ನಮ್ಮ ಸಂಸ್ಕೃತಿ ಬಗ್ಗೆ ಕಲಿಸುವುದು" ಎಂದು ಹೇಳಿದ್ದಾನೆ. ಆದರೆ ಯಾವುದು ಈ ಸಂಸ್ಕೃತಿ ಎಂದು ಆತ ಸ್ಪಷ್ಟಪಡಿಸಿಲ್ಲ.

ಅದಿರಲಿ, ಯಾವ ಚೆಡ್ಡಿಗಳು ಲವ್ ಜಿಹಾದ್ ಬಗ್ಗೆ ಹುಯಿಲೆಬ್ಬಿಸುತ್ತಿದ್ದರೋ ಅವರೇ ಖಾಪ್ ಪಂಚಾಯತ್‌ಗಳನ್ನೂ ಬೆಂಬಲಿಸಿದವರು ಎಂಬುದನ್ನು ಮರೆಯುವಂತಿಲ್ಲ. ಅದಕ್ಕೆ ಸೂಕ್ತ ಉದಾಹರಣೆ ಇತ್ತೀಚೆಗೆ ಹರಿಯಾಣ ರಾಜ್ಯದ ಬಿಜೆಪಿ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಮನೋಹರ್ ಲಾಲ್ ಖಟ್ಟರ್. ಈತ ಈ ಹಿಂದೆ ಲವ್ ಜಿಹಾದ್ ವಿರುದ್ಧ ಮಾತನಾಡಿದ್ದನಲ್ಲದೆ, ಖಾಪ್ ಪಂಚಾಯತ್‌ಗಳು ಸಾಮಾಜಿಕ ಕಾನೂನಿನ ಪ್ರಕಾರ ಕೆಲಸ ಮಾಡುತ್ತಿವೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದ. ಯಾವುದು ಈ ಸಾಮಾಜಿಕ ಕಾನೂನು ಮತ್ತು ಯಾರು ಇವುಗಳನ್ನು ರೂಪಿಸಿದ್ದು ಎಂದೂ ಈತ ತುಟಿಪಿಟಿಕ್ ಎಂದಿರಲಿಲ್ಲ.

ಈಗ ಎಲ್ಲರಿಗೂ ಗೊತ್ತಿರುವಂತೆ ಚೆಡ್ಡಿಗಳು ಎಂದೂ ಅಂತರಧರ್ಮೀಯ ಮದುವೆಗಳಿರಲಿ ಅಂತರಜಾತಿ ಮದುವೆಗಳನ್ನೂ ಬೆಂಬಲಿಸಿದವರಲ್ಲ, ಜಾತಿ ವಿನಾಶಕ್ಕೆ ಶ್ರಮಿಸಿದವರಲ್ಲ, ಅಸ್ಪೃಶ್ಯತೆಯ ವಿರುದ್ಧ ಹೋರಾಡಿದವರಲ್ಲ. ಬದಲಾಗಿ ಅವರಿಗೆ ಜಾತಿ ವ್ಯವಸ್ಥೆಯನ್ನು ಕಾಪಾಡುವುದೇ ಮುಖ್ಯ. ಅದಕ್ಕೆ ಅವರು ಹಿಂದೂ ಯುವತಿಯರ ಸ್ವಾತಂತ್ರ್ಯ ಆಯ್ಕೆಯ ಹಕ್ಕು ಮತ್ತು ಸ್ವಾವಲಂಬಿತನವನ್ನು ಬಲಿ ಕೊಡಲೂ ಹಿಂಜರಿಯುವವರಲ್ಲ. ಯಾಕೆಂದರೆ ಅವರ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಬೇಳೆ ಬೇಯುವುದೇ ಈ ದರಿದ್ರ ಜಾತಿ ವ್ಯವಸ್ಥೆಯಲ್ಲಿ. ಆದರೆ ಬಹಿರಂಗವಾಗಿ ಜಾತಿಯನ್ನು ಸಮರ್ಥಿಸಿಕೊಳ್ಳಲು ಸಾಧ್ಯವಿಲ್ಲದ್ದರಿಂದ ಅವರು ಅನ್ಯಧರ್ಮೀಯರನ್ನು ಗುರಿ ಮಾಡಿಕೊಳ್ಳುತ್ತಾರೆ. ಆ ನಿಟ್ಟಿನಲ್ಲಿ ನೋಡಿದಾಗ ಮೇಲುನೋಟಕ್ಕೆ 'ಲವ್ ಜಿಹಾದ್' ಮುಸಲ್ಮಾನರನ್ನು ಗುರಿಯಾಗಿಸಿಕೊಂಡಿದ್ದರೂ, ಅಂತರಾಳದಲ್ಲಿ ಅದರ ನಿಜವಾದ ಗುರಿ ದಲಿತರು ಮತ್ತು ಮಹಿಳೆಯರೇ ಆಗಿದ್ದಾರೆ ಎಂಬುದು ಅರ್ಥವಾಗುತ್ತದೆ.

ಇನ್ನು ಈ ಜಾತಿ ವ್ಯವಸ್ಥೆಯನ್ನು ರಾಜಕಾರಣಿಗಳು ತಮ್ಮ ಲಾಭಕ್ಕೆ ಹೇಗೆ ಪೋಷಿಸುತ್ತಾ ಬಂದಿದ್ದಾರೆ ಎಂಬುದನ್ನು ನೋಡೋಣ. ಅದಕ್ಕೆ ಇತ್ತೀಚೆಗೆ ಸಾಕ್ಷ್ಯ ಒದಗಿಸಿದ್ದು ನರಹಂತಕ ನರೇಂದ್ರ ಮೋದಿ. ಈತ ಗಾಂಧಿ ಜಯಂತಿಯಂದು ಪೊರಕೆ ಹಿಡಿದು ಕಸ ಗುಡಿಸುವ ನಾಟಕಕ್ಕೆ ದೇಶಾದ್ಯಂತ ದೊಡ್ಡ ಪ್ರಚಾರ ಸಿಕ್ಕಿತು. ಆದರೆ ಈ ನಾಟಕಕ್ಕೆ ಆತ ಆಯ್ಕೆ ಮಾಡಿಕೊಂಡಿದ್ದು ದಲಿತರೇ ವಾಸಿಸುವ ಕಾಲೋನಿ ಎಂಬುದಕ್ಕೆ ಅಷ್ಟು ಪ್ರಚಾರ ಸಿಗಲಿಲ್ಲ ಯಾಕೆ? ಕಸ ಮತ್ತು ಪೊರಕೆ ಎಂದಕೂಡಲೇ ಜನರಿಗೆ ನೆನಪಾಗುವುದು ದಲಿತರೇ? ಆ ಸಮುದಾಯದವರೇ ಇವತ್ತಿಗೂ ನಗರಗಳ ರಸ್ತೆಗಳನ್ನು, ಚರಂಡಿಗಳನ್ನು, ಮ್ಯಾನ್‌ಹೋಲ್‌ಗಳನ್ನು ಸ್ವಚ್ಛ ಮಾಡುವ 'ಜವಾಬ್ದಾರಿ'ಯನ್ನು ತಲೆತಲಾಂತರದಿಂದ ಹೊಂದಿದ್ದಾರೆ ಎಂಬ ಕಾರಣಕ್ಕೇ? ದಲಿತರು ಎಂದರೆ ಗಲೀಜು ಎಂಬ ಭಾವನೆ ನಮ್ಮ ಜಾತಿ ವ್ಯವಸ್ಥೆಯಲ್ಲಿ ಬೇರೂರಿರುವುದರಿಂದಲೇ?

ಮೋದಿಗೆ ನಿಜವಾಗಲೂ 'ಸ್ವಚ್ಛ ಭಾರತ'ವನ್ನು ನಿರ್ಮಿಸಬೇಕು ಎಂಬ ಆಶೆ ಇದ್ದಿದ್ದರೆ ಅದನ್ನು ಆತ ತನ್ನ ಲೋಕಸಭಾ ಕ್ಷೇತ್ರದಿಂದಲೇ ಪ್ರಾರಂಭಿಸಬಹುದಿತ್ತು. ಯಾಕೆಂದರೆ ಎಲ್ಲರಿಗೂ ಗೊತ್ತಿರುವಂತೆ ಆತ ಪ್ರತಿನಿಧಿಸುವ ವಾರಣಾಸಿ ಮತ ಕ್ಷೇತ್ರ ಈ ದೇಶದಲ್ಲೇ ಅತಿ ಮಲಿನಗೊಂಡಿರುವ ಪ್ರದೇಶ. ಆದರೆ ಆತ ವಾರಣಾಸಿಯಲ್ಲೇ ಈ ಆಂದೋಲನವನ್ನು ಪ್ರಾರಂಭಿಸಿದ್ದರೆ 'ಹಿಂದೂ' ಧಾರ್ಮಿಕ ಕ್ಷೇತ್ರಗಳಲ್ಲಿ ಮುಖ್ಯವಾದ ಈ ಸ್ಥಳ ಎಷ್ಟು ಗಬ್ಬುನಾರುತ್ತಿದೆ ಎಂದು ಪ್ರಚಾರ ಪಡೆಯುತ್ತಿತ್ತು. ಅದು ಸ್ವಘೋಷಿತ 'ಗರ್ವಿಷ್ಟ ಹಿಂದೂ' ಮೋದಿಗೆ ಬೇಕಿರಲಿಲ್ಲ. ಆದ್ದರಿಂದಲೇ ಆತ ಮತ್ತೊಮ್ಮೆ ದಲಿತರನ್ನು ಕಸಕಡ್ಡಿಗೆ, ಗಲೀಜಿಗೆ, ಕೆಳವರ್ಗಕ್ಕೆ ಸಮಾನವಾಗಿಸಲು ದಲಿತರ ಕಾಲೋನಿಯನ್ನು ಆಯ್ಕೆ ಮಾಡಿಕೊಂಡದ್ದು ಎಂದರೆ ತಪ್ಪಾಗಲಾರದು.

'ನಾವೆಲ್ಲ ಹಿಂದೂ ನಾವೆಲ್ಲ ಒಂದು' ಎಂಬು ಅಬ್ಬರಿಸುವ ಚೆಡ್ಡಿಗಳು ಎಂದೂ ದಲಿತರ ಶ್ರೇಯೋಭಿವೃದ್ಧಿಗೆ ಯತ್ನಿಸಿದವರಲ್ಲ. ಬದಲಾಗಿ ಅವರನ್ನೆಲ್ಲ ಕೆಳ ಸ್ಥಾನದಲ್ಲೇ ಇಟ್ಟು, ಅದನ್ನು ಮರೆಮಾಚಲು ದಲಿತರಿಗೆ ಧಾರ್ಮಿಕ ಅಫೀಮನ್ನು ಉಣ್ಣಿಸಿ ರಾಜಕೀಯ ಲಾಭ ಮಾಡಿಕೊಳ್ಳುವುದು ಚೆಡ್ಡಿಗಳ ಹುನ್ನಾರ. ಆದ್ದರಿಂದಲೇ ಆರೆಸ್ಸೆಸ್ ಮುಖ್ಯಸ್ಥ ಭಾಗವತ್ ಇತ್ತೀಚೆಗೆ "ಅಸ್ಪೃಶ್ಯತೆ ಭಾರತದಲ್ಲಿ ಇರಲೇ ಇಲ್ಲ. ಹೊರಗಿನವರು (ಅಂದರೆ ಮುಸಲ್ಮಾನರು) ಇಲ್ಲಿಗೆ ಬಂದ ಮೇಲೆಯೇ ಈ ಪದ್ಧತಿ ಶುರುವಾಗಿದ್ದು" ಎಂದು ಸುಳ್ಳು ಹೇಳಿದ್ದಾನೆ. ಅವನ ಉದ್ದೇಶ 'ಹಿಂದೂ ಧರ್ಮ'ದಲ್ಲಿರುವ ಈ ನೀಚ ಪದ್ಧತಿಗೆ ಹಿಂದೂಗಳು ಕಾರಣರಲ್ಲ, ಬದಲಾಗಿ ಮುಸಲ್ಮಾನರು ಎಂದು ಬಿಂಬಿಸುವುದು.

'ಸ್ವಚ್ಛ ಭಾರತ' ನಿರ್ಮಾಣವಾಗುವುದು ರಸ್ತೆಗಳನ್ನು ಗುಡಿಸುವ ಮೂಲಕವಲ್ಲ, ಬದಲಾಗಿ ಮಹಿಳೆಯರನ್ನು ಅಸ್ತ್ರವಾಗಿಸಿಕೊಂಡು ದಲಿತರನ್ನು, ಅಲ್ಪಸಂಖ್ಯಾತರನ್ನು ದಮನಿಸುವ, ಅಮಾನುಷವಾಗಿ ಕೊಲೆ ಮಾಡುವ ಈ ಪುರುಷ ಪ್ರಧಾನ ಜಾತಿ ವ್ಯವಸ್ಥೆಯನ್ನು ನಿರ್ಮೂಲನೆ ಮಾಡುವ ಮೂಲಕ.

ಎಲ್ಲಿಯತನಕ ಈ ಜಾತಿ ಎಂಬ ನೀಚ, ಅನಿಷ್ಟ ಪದ್ಧತಿ ಇರುತ್ತದೋ, ಎಲ್ಲಿಯ ತನಕ ಅಸಹಾಯಕರ ಮೇಲೆ ದಾಳಿ-ದಮನ-ಕೊಲೆಗಳು ನಡೆಯುತ್ತದೋ ಅಲ್ಲಿಯತನಕ ಭಾರತ ನೀಚ, ಅನಿಷ್ಟ ಮತ್ತು ಗಬ್ಬುನಾರುವ ದೇಶವಾಗಿಯೇ ಉಳಿದಿರುತ್ತದೆ ಎಂಬುದು ನಿಸ್ಸಂಶಯ. ●


ಛರಿ ಎಂದರೆ ಈ ಭೀಕರ ಕೊಲೆಗಳು ನಮ್ಮ ಧ್ಯಮಗಳಲ್ಲಿ ಪ್ರಮುಖ ಸುದ್ದಿಯಾಗಲೇ ಇಲ್ಲ. 'ದ ಹಿಂದೂ' ಪತ್ರಿಕೆಯನ್ನು ಹೊರತುಪಡಿಸಿ ಯಾವ ಪತ್ರಿಕೆಯೂ ಈ ಕೊಲೆಗಳ ಬಗ್ಗೆ ಸುದ್ದಿಯನ್ನು ಸಲಿಲ್ಲ. ಇನ್ನು ಕೊಲೆ, ಅತ್ಯಾಚಾರ, ಅಪರಾಧ ತರಹದ ಗಳನ್ನೇ ಅವಲಂಬಿಸಿರುವ ಟಿವಿ ಚಾನೆಲ್‌ಗಳಿಗೂ ಂದು ಮುಖ್ಯ ಸುದ್ದಿಯಾಗಲಿಲ್ಲ. ಇಂತಹ ಕೊಲೆಗಳು ನಡೆದವು ಎಂದು 'ದಿ ನೇಷನ್ ವಾಂಟ್ಸ್ ಟು ' ಎಂದು ಯಾವ ಟಿವಿ ಆಂಕರ್‌ನೂ ಅಬ್ಬರಿಸಲೇ

ಯಾಕೆ ಗೊತ್ತಾ?

ಸಂಜಯ್, ಜಯಶ್ರೀ ಮತ್ತು ಸುನೀಲ್ ದಲಿತ ದಾಯಕ್ಕೆ ಸೇರಿದವರು. ಅಷ್ಟೇ ಮುಖ್ಯವಾಗಿ ಅವರನ್ನೆಲ್ಲ ನುಷವಾಗಿ ಕೊಲೆ ಮಾಡಿದ್ದು 'ಮೇಲು' ಜಾತಿಯ ಠ ಸಮುದಾಯದವರು.

ದೇ ಮಹಾರಾಷ್ಟ್ರದಲ್ಲಿ 2006ರಲ್ಲಿ ಖೈರ್ಲಾಂಜಿ ಇನ್ನೊಂದು ಹಳ್ಳಿಯಲ್ಲಿ ಇದೇ ತರಹ ಭೂತ್‌ಮಾಂಗೆ ದಲಿತ ಕುಟುಂಬದ ನಾಲ್ವರನ್ನು ಕೊಲೆ ಲಾಗಿತ್ತು. ಈಗ ಜಾಧವ್ ಕುಟುಂಬದ ಸರದಿಯಷ್ಟೇ ಂತೆ ಈ ಪ್ರಕರಣವನ್ನು ಎಲ್ಲರೂ ನಿರ್ಲಕ್ಷಿಸಿದ್ದಾರೆ. ಘೋರಣೆಯ ಹಿಂದೆ ಜಾತಿ ಆಧಾರಿತ 'ಹಿಂದೂ 'ದಲ್ಲಿ ದಲಿತರ ಬಗ್ಗೆ ಇರುವ ಕ್ರೌರ್ಯ ಎದ್ದು ಸುತ್ತದೆ.

ಜಾಧವ್ ಕುಟುಂಬವನ್ನು ನಿರ್ನಾಮ ಮಾಡಿದ ಇಲ್ಲಿಯತನಕ ಮಹಾರಾಷ್ಟ್ರದ ಪೊಲೀಸರು ಮಾತ್ರವಲ್ಲ, ಈ ಕಗ್ಗೊಲೆಗಳಿಗೆ ಏನು ಕಾರಣ ದನ್ನೂ ಅಲ್ಲಿನ ಸರ್ಕಾರ ಪತ್ತೆ ಮಾಡಿಲ್ಲ. ಈ 'ಯ ಹಿಂದೆಯೂ ಅದೇ ಜಾತಿ ವ್ಯವಸ್ಥೆಯ ಕ್ರೌರ್ಯ ಅದೇನೆಂದರೆ 20 ವರ್ಷ ಹರೆಯದ ಸುನೀಲ್



# ರಂಗೀಲಾ ರಾಘು ಖತ್ರಾಕ್ಕೆ ಕಲ್ಲಡ್ಕ ಕಂಗಾಲ

## ರಾಮಚಂದ್ರಾಪುರ ಮಠಕ್ಕೆ ಅಂಡರ್‌ವರ್ಲ್ಡ್-ವಾಮಾಚಾರ ಎಂ

ಹವ್ಯಕರ ರಾಮಚಂದ್ರಾಪುರ ಮಠದ ನಡತೆಗೆಟ್ಟ ಕಾವಿ ಡಾನ್ ರಾಘವೇಶ್ವರ ಭಾರತಿ ಸ್ವಾಮಿ ಉರುಫ್ ರಾಘು ಭಟ್ಟ ಹತಾಶೆಯಿಂದ ಮೈ-ಕೈ ಪರಚಿಕೊಳ್ಳುತ್ತಿದ್ದಾನೆ. ಸಿಐಡಿ ವಿಚಾರಣೆ ಕಾನೂನುಬದ್ಧ ಆಗುತ್ತಿದ್ದಂತೆಯೇ ತನಗೆ ಮುಳುಗು ನೀರು ಖಾತ್ರಿ ಎಂಬುದು ರಾಘುಗೆ ಮನದಟ್ಟಾಗಿ ಹೋಗಿದೆ. ಹಾಗಾಗಿ ತಾನು ಮುಳುಗುವಾಗ ಮತ್ತೊಂದಿಷ್ಟು ಮಂದಿಯನ್ನು ಜತೆಗಿಟ್ಟುಕೊಂಡೇ ಮುಳುಗುವ ಕೆಟ್ಟ ಹಠಕ್ಕಾತ ಬಿದ್ದಿದ್ದಾನೆ! ಒಂದು ಕಾಲದಲ್ಲಿ ಪ್ರಜ್ಞಾವಂತಿಕೆಗೆ-ವಿಚಾರವಂತಿಕೆಗೆ ಹೆಸರಾಗಿದ್ದ ಹವ್ಯಕ ಬ್ರಾಹ್ಮಣರನ್ನು 'ಮಠಾಂಧತೆ'ಯ ವಶೀಕರಣಕ್ಕೆ ಒಳಪಡಿಸಿಕೊಂಡು ಹಾದಿ ತಪ್ಪಿಸಿದರೂ ಕಾನೂನಿನ-ನೈತಿಕತೆಯ ಕುಣಿಕೆಯಿಂದ ಪಾರಾಗಲಾಗದೇ ರಾಘು ಅಂತಿಮವಾಗಿ ಭೂಗತ ಪಾತಕಿಗಳಿಗೆ ಮತ್ತು ವಾಮಾಚಾರಕ್ಕೆ ಮೊರೆ ಹೋಗಿದ್ದಾನೆ, ಪಾಪ!!

ಸಿಐಡಿ ವಿಚಾರಣೆಯ ವಿವರಗಳನ್ನೆಲ್ಲ ನ್ಯಾಯಾಲಯದ ಗಮನಕ್ಕೆ ತಂದರೆ ರಾಘು ಭಟ್ಟನ ಜಾಮೀನುಗಳೆಲ್ಲ ರದ್ದಾಗಿ ಆತನ ವೈದ್ಯಕೀಯ ಪರೀಕ್ಷೆಯೂ ನಡೆಯುವುದು ಗ್ಯಾರಂಟಿ. ಅಂಥ ಸಾಲಿಡ್ ಸಾಕ್ಷ್ಯಾಧಾರ ರಾಘು ಹೆಣ್ಣಿನ ಅಂಗ ಸಂಗಕ್ಕೆ ಬಿದ್ದಿರುವ ಕುರಿತು ಸಿಐಡಿಗೆ ಸಿಕ್ಕಿದೆ. ಹಾಗೆಯೇ ಜೈಲೂಟಕ್ಕೂ ರಾಘು ಭಟ್ಟ ಒಗ್ಗಿಕೊಳ್ಳಬೇಕಾದ ಪ್ರಸಂಗವೂ ಎದುರಾಗುವುದು ಖಂಡಿತ. ಆಗ ರಾಮನ ಪೂಜೆ ಮಾಡೋರು ಯಾರು? ಎಂಬ ಚಿಂತೆಗೀಗ ರಾಘುನ 'ಚಿಂತನ ಚಿಲುಮೆಕಾರರು' ಬಿದ್ದಿದ್ದಾರೆ. ರಾಘು ಜೈಲಿಗೆ ಹೋದ ತಕ್ಷಣ ಒಂದು ಸುಪ್ರೀಂ ಸಮಿತಿ ರಚಿಸಿ ಅದಕ್ಕೆ ಮಠದ ಪಾರುಪತ್ಯ ವಹಿಸಲಿಕ್ಕೂ ಇಷ್ಟು ದಿನ ರಾಘುನ ನಂಬಿಗಸ್ಥರಾಗಿದ್ದ ಬುದ್ಧಿಜೀವಿಗಳು ಸ್ಕೆಚ್ ಹಾಕಿದ್ದಾರೆ. ರಾಮನ ಪೂಜೆಗೆ ಒಬ್ಬ 'ಬಡ ಬ್ರಾಹ್ಮಣನ' ನೇಮಕಾತಿ ಬಗ್ಗೆಯೂ ಮಾತುಕತೆ ನಡೆಸಿದ್ದಾರೆ.

ರಾಘು ರೆಸ್ಕ್ಯೂ ಆಪರೇಷನ್‌ನ ಸೇನಾಧಿಪತಿಯಾಗಿದ್ದ 'ವಿಶ್ವ' ವಿಖ್ಯಾತ ಪತ್ರಕರ್ತ ಈಗಾತನ ದೌರ್ಬಲ್ಯ ಬಳಸಿಕೊಂಡು ಮಠದ ದೊರೆಯಾಗಲು ಹವಣಿಸುತ್ತಿದ್ದಾನೆ. ಕೆಕ್ಕಾರು ಮಠದಲ್ಲಿ ಚಾತುರ್ಮಾಸ್ಯ ವ್ರತಕ್ಕೆ ಕುಳಿತಿದ್ದ ರಾಘುಗೆ "ನೀನು ಹೆಣ್ಣಿನ ಮೋಹಕ್ಕೆ ಒಳಗಾಗಿ ಪೀಠಕ್ಕೆ ಕಳಂಕ ತಂದಿದ್ದೀಯಾ... ಹಾಗಾಗಿ ತಕ್ಷಣ ಪೀಠತ್ಯಾಗ ಮಾಡು..." ಎಂದು ಪ್ರೇಮಲತಾ ಶಾಸ್ತ್ರಿ ಕುಟುಂಬಸ್ಥರ ಜತೆ ಆರೆಸ್ಸೆಸ್ ಮುಖಂಡರು ಬಂದಿದ್ದರಲ್ಲ, ಆಗ ಅವರೊಂದಿಗೆ ಈ 'ವಿಷ'ವೂ ಇತ್ತು. ಆನಂತರ ಮಠದ 'ಆಕರ್ಷಣೆ'ಗೆ ಒಳಗಾಗಿ ಯೂ-ಟರ್ನ್ ಹೊಡೆದಿತ್ತು. ಈಗ ಇಡೀ ಮಠವನ್ನೇ ಸುಪರ್ದಿಗೆ ತೆಗೆದುಕೊಳ್ಳುವ ಪ್ಲಾನ್ ಹಾಕಿಕೊಂಡು ಉಸ್ತುವಾರಿ ಸಮಿತಿಯ ಅಧ್ಯಕ್ಷನಾಗಲು ಹವಣಿಸುತ್ತಿದೆ; ಇದು ಗೊತ್ತಾಗಿದ್ದೇ ತಡ, ರಾಘುಗೆ ಪೀಠತ್ಯಾಗ ಸನ್ನಿಹಿತವಾಗುತ್ತಿರುವ ದುಃಸ್ವಪ್ನ ಹಗಲಲ್ಲೂ ಕಾಣಿಸಲಾರಂಭಿಸಿದೆ.

ತನ್ನ ಹಿತೈಷಿಗಳಂತೆ ವರ್ತಿಸುತ್ತಿದ್ದವರೇ ಒಳಗೊಳಗೇ ಸಂಚು ಹೆಣೆಯುತ್ತಿರುವ ಕಹಿ ಸತ್ಯ ಅರಿವಾಗುತ್ತಲೇ ರಾಘು ಕೆರಳಿ ಕನಲಿಸುತ್ತಿದ್ದಾನೆ! ತಾನೊಮ್ಮೆ ಜೈಲು ಸೇರೋದು ಅನಿವಾರ್ಯವಾದರೆ, ಹಿತ ಶತ್ರುಗಳನ್ನೆಲ್ಲ ಗಂಡಾಂತರಕ್ಕೆ ಸಿಕ್ಕಿಸಿಯೇ ಹೋಗಬೇಕೆಂಬ ದೃಢ ನಿರ್ಧಾರಕ್ಕೆ ಬಂದಿದ್ದಾನೆ. ಈ ಪ್ರತೀಕಾರ ಕಾರ್ಯಾಚರಣೆಯ ಮೊದಲ ಅಸ್ತ್ರ ಮೊನ್ನೆ ಆತ ಸಿಐಡಿ ಎದುರು ಪ್ರದರ್ಶಿಸಿದ್ದಾನೆ. ಕಾಮಕಥಾದ ಬಲಿಪಶು ಪ್ರೇಮಲತಾರ ಗಂಡನ ಸೋದರ ಶ್ಯಾಮಶಾಸ್ತ್ರಿ ಮಠದ ಗೂಂಡಾಪಡೆಯ ಬೆದರಿಕೆ ಸಹಿಸಲಾಗದೆ ಆತ್ಮಹತ್ಯೆ ಮಾಡಿಕೊಂಡಿದ್ದ ಪ್ರಕರಣದಲ್ಲಿ ರಾಘು ಆರೆಸ್ಸೆಸ್ ರಿಂಗ್‌ಮಾಸ್ಟರ್ ಕಲ್ಲಡ್ಕ ಪ್ರಭಾಕರ ಭಟ್‌ನನ್ನು ಎಳೆದು ತಂದು ನಿಲ್ಲಿಸಿದ್ದಾನೆ. ತನಗೂ-ಶ್ಯಾಮ್ ಆತ್ಮಹತ್ಯೆಗೂ ಸಂಬಂಧವೇ ಇಲ್ಲ, ಆತನ ಸಾವಿಗೆ ಕಲ್ಲಡ್ಕನ ಫೋನ್ ಕರೆಯೇ ಕಾರಣ ಎಂಬರ್ಥದ ಮಾತು ರಾಘು ಸಿಐಡಿ ಅಧಿಕಾರಿಗಳೆದುರು ಉಸುರಿದ್ದಾನೆ.

ಅಲ್ಲಿಗೆ ಹಿಂದೂ ಮತಾಂಧ ಕಲ್ಲಡ್ಕ ಭಟ್ಟ ರಾಮಚಂದ್ರಾಪುರ ಮಠದ ಲಫಡಾ-ರಾದ್ಧಾಂತದಲ್ಲಿ ಭಾಗಿಯೆಂಬುದು ಜಗಜ್ಜಾಹೀರಾಗಿ ಹೋಗಿದೆ! ಸಿಐಡಿ ಪೊಲೀಸರು ಕಲ್ಲಡ್ಕನನ್ನು ಕರೆಸಿ ತಾಸುಗಟ್ಟಲೆ ವಿಚಾರಣೆ ಮಾಡಿದ್ದಾರೆ. ಶ್ಯಾಮಶಾಸ್ತ್ರಿ ರಾಮಚಂದ್ರಾಪುರ ಮಠಕ್ಕೆಷ್ಟು ನಿಷ್ಠನಾಗಿದ್ದರೋ ಅಷ್ಟೇ ಆಪ್ತತೆ ಕಲ್ಲಡ್ಕನೊಂದಿಗೆ ಆತನಿಗಿತ್ತು, ಇಂಥ ನಂಬಿಗಸ್ಥ ಕಲ್ಲಡ್ಕನೇ ಪದೇಪದೇ ಫೋನಾಯಿಸಿ "ಕೆಕ್ಕಾರು ಮಠಕ್ಕೋಗಿ ರಾಘು ಸ್ವಾಮಿ ಕಾಲಿಗೆ ಬಿದ್ದು ಕ್ಷಮೆ ಕೇಳು... ಅತ್ತಿಗೆ ಪ್ರೇಮಲತಾರ ರೇಪ್ ಆರೋಪ ಸುಳ್ಳೆಂದು ಪತ್ರಿಕಾಗೋಷ್ಠಿಯಲ್ಲಿ ಹೇಳು..." ಎಂದು ಒತ್ತಡ-ಭಯ ಹಾಕಿದಾಗ ದಿಗ್ಭ್ರಾಂತರಾದ ಶ್ಯಾಮ ಶಾಸ್ತ್ರಿಗೆ ಆತ್ಮಹತ್ಯೆ ಬಿಟ್ಟು ಬೇರೆ ದಾರಿಯೇ ಕಾಣಿಸಿರಲಿಲ್ಲ! ಆದರೆ ಈ ಆರೋಪದಿಂದ ನುಣುಚಿಕೊಳ್ಳುತ್ತ ಬರದಿದ್ದ ಕಲ್ಲಡ್ಕನನ್ನು ಈಗ ಸಾಕ್ಷಾತ್ ರಾಘು ಸ್ವಾಮಿಯೇ ಗಂಡಾಂತರಕ್ಕೆ ಸಿಲುಕಿಸಿಬಿಟ್ಟಿದ್ದಾನೆ.

ಹಾಗೆಯೇ ವಿಶ್ವವಿಖ್ಯಾತನ ಮಠದ ಪಾರುಪತ್ಯ ಸಮಿತಿ ರಚನೆ ಪ್ರಸ್ತಾಪವನ್ನು ತಿರಸ್ಕರಿಸಿರುವ ರಾಘು ಆತನಿಗೂ ಪಾಠ ಕಲಿಸಲು ಸಮಯ ಸಾಧಿಸುತ್ತಿದ್ದಾನೆಂಬ ಸುದ್ದಿ ಮಠದ ಮೂಲೆ-ಮೂಲೆಯಿಂದ ಪಸರಿಸುತ್ತಿದೆ! ಹಾಗೊಮ್ಮೆ ತಾನು ಪೀಠದಿಂದ ತೊಲಗುವ ಸಂದರ್ಭ ಬಂದಿದ್ದೇಯಾದರೆ ತಂಗಿ ಮಗ ಸಮುದ್ವರನ್‌ನೇ ಹೊಸ ಸ್ವಾಮಿಯಾಗಬೇಕೆಂಬುದು ರಾಘುನ ತೀರ್ಮಾನ. ಇದಕ್ಕೆ ಈಗ ಆತನ ಪರ-ವಿರೋಧ ಎರಡೂ ಕಡೆಯಿಂದ ದೊಡ್ಡ ಅಡೆ-ತಡೆಯೇ ಎದುರಾಗುತ್ತಿದೆ. ಎಲ್ಲ ದಿಕ್ಕಿನಿಂದಲೂ ಸೋಲು-ಅಪಮಾನಗಳೇ ಎದುರಾಗುತ್ತಿರುವುದರಿಂದ ರಾಘು ಗತಿಯಿಲ್ಲದೆ ವಾಮ ಮಾರ್ಗ ಮತ್ತು ಭೂಗತ ಪ್ರಪಂಚದ ಮಾರ್ಗ ಹಿಡಿದಿದ್ದಾನೆ. ಅಥರ್ವಣ ವೇದ ಅಥವಾ ರೌಡಿ ವೇದವಾದರೂ ತನ್ನ ಬಚಾಯಿಸ ಬಹುದೆಂದು ಭಾವಿಸಿ ತಂತ್ರಗಾರಿಕೆ ನಡೆಸಿದ್ದಾನೆ.

ಪ್ರೇಮಲತಾ ಮತ್ತಾಕೆಯ ಪತಿ ದಿವಾಕರ ಶಾಸ್ತ್ರಿಗೆ ಭೂಗತ ಪಾತಕಿ ಕಲಿ ಯೋಗೀಶ್ ಫೋನಾಯಿಸಿ ರೇಪಿಸ್ಟ್ ರಾಘು ಪರ ವಕಾಲತ್ತು ಮಾಡಿದ್ದಾನೆ. ರೇಪ್ ಕೇಸ್‌ನಲ್ಲಿ ದುಬೈ ವಾಸಿ ರೌಡಿ ಕಲಿ ಯೋಗೀಶ್ ಎಂಟ್ರಿ ಹೊಡೆಯುವ ಮೂಲಕ ರಾಘುನ ಕಾವಿಗೆ ಕಾಮದ ಕಲೆಯೊಂದಿಗೆ ಕ್ರೌರ್ಯದ ಕುರುಹು ಅಂಟಿಕೊಂಡಂತಾಗಿದೆ! ಪ್ರೇಮಲತಾ ಶಾಸ್ತ್ರಿಗೆ 301 ಸಂಖ್ಯೆಯಿಂದ ಫೋನ್ ಮಾಡಿದ್ದ ಕಲಿ ಯೋಗೀಶ್, ರಾಘುನ ಮೇಲೆ ಕೊಟ್ಟಿರುವ ಅತ್ಯಾಚಾರ ಪ್ರಕರಣ ವಾಪಸ್ ಪಡೆಯುವಂತೆ ಬೆದರಿಸಿದ್ದಾನೆ. ಆ ಸಮಯದಲ್ಲಿ ಪ್ರೇಮಲತಾ ಸಿಐಡಿ ಅಧಿಕಾರಿಗಳ ಎದುರು ಕುಳಿತು ವಿಚಾರಣೆ ಎದುರಿಸುತ್ತಿದ್ದರು. ಬೆದರಿಕೆ ಕರೆಯನ್ನು ಒಂದಿಷ್ಟು ನಿಮಿಷ ಕೇಳಿಸಿಕೊಂಡ ಆಕೆ ಮೊಬೈಲ್ ಸೆಟ್ ಸಿಐಡಿ ಪೊಲೀಸರಿಗೆ ಕೊಟ್ಟಿದ್ದಾರೆ. ಅಧಿಕಾರಿಗಳು ಬೆದರಿಕೆಯ ಧ್ವನಿ ಕರಾರುವಾಕ್ಕಾಗಿ ಗ್ರಹಿಸಿದ್ದಾರೆ. ನಂತರ ಸಿಐಡಿ ಕಚೇರಿಗೆ ಬರುವಂತೆ ಆ ಧ್ವನಿದಾರನಿಗೆ ಪೊಲೀಸರು ಹೇಳಿದ್ದಾರೆ. ಆಗ ಕರೆ ಕಟ್ ಆಗಿದೆ.

ಮಂಗಳೂರಿನ ಮೂಲ್ಕಿಯ ಹಳೆಯಂಗಡಿ ... ಯೋಗೀಶ್ ಮೊದಲು ಖಾಸಗಿ ಬಸ್ ಏಜೆಂಟ ... ಮಂಗಳೂರು ಮೂಲದ ಪಾಂಗಾಳ ರಾಮ ... ಮುಂಬೈ ಭೂಗತ ಲೋಕದಲ್ಲಿ ಚಲಾವಣೆ ... ಈ ಕಲಿ ಯೋಗೀಶ್ ಆತನ ಗ್ಯಾಂಗ್ ಸೇರಿಕೊ ... ಸೈಜಿನ ರೌಡಿಯಾಗಿ ರೂಪುಗೊಂಡಿದ್ದ. ರಾಮ ... ಪೊಲೀಸರ ಎನ್‌ಕೌಂಟರ್‌ನಲ್ಲಿ ಹತನಾದ ... ಮಂಗಳೂರಿಗೆ ಓಡಿಬಂದಿದ್ದ. ಮಂಗಳೂರು-ಬೆಂ ... ಅಡಗಿ ಭೂಗತ ವ್ಯವಹಾರ ಕುದುರಿಸುತ್ತ ಭಯ ... ಬೆಳೆದಿದ್ದ. ಬೆಂಗಳೂರಿನ ತಿಲಕ್ ನಗರದಲ್ಲಿ ... ಕಾರ್ಪೊರೇಟರ್ ಶಮೀವುಲ್ಲಾನ ಶಬನಮ್ ... ಶೂಟೌಟ್ ಪ್ರಕರಣದಲ್ಲಿ ಈತ ಸಿಕ್ಕಿಬಿದ್ದಿದ್ದ ... ಜಾಮೀನು ಸಿಗುತ್ತಿದ್ದಂತೆಯೇ ದುಬೈಗೆ ಪರಾ ... ಕಲಿ ಅಲ್ಲಿ ಡಾನ್ ರವಿ ಪೂಜಾರಿ ಎಂಬ ... ಕಡೆಯ ಡಾನ್‌ನ ಪಡೆ ಸೇರಿಕೊಂಡು ಬಿಟ್ಟ! ... ಈತ ಕರಾವಳಿ ಮತ್ತು ಬೆಂಗಳೂರಿನ ಭೂಗತ ... ಸಕ್ರಿಯನಾಗಿದ್ದಾನೆ. ಇಂಥ ಕಲಿ ಯೋಗೀಶ್ ... ಪ್ರೇಮಲತಾರ ಗಂಡ ದಿವಾಕರ ಶಾಸ್ತ್ರಿಗೂ ಫೋ ... ರಾಘು ಸ್ವಾಮಿ ತಂಟೆಗೆ ಹೋಗದಂತೆ ತಾಕೀತು ...


ಕಳೆದ ಅಕ್ಟೋಬರ್ 31ರ ಮಧ್ಯಾಹ್ನ ... ದಿವಾಕರ ಶಾಸ್ತ್ರಿಗೆ 85690766499 ನಂಬರಿ ... ಕರೆ ಬರೋಬ್ಬರಿ 21 ನಿಮಿಷ ಸಂಭಾಷಣೆ ನ ... ಕರೆದಾರ ತಾನು ಅಂಡರ್‌ವರ್ಲ್ಡ್ ಡಾನ್ ಕಲಿ ... ಎಂದಬ್ಬರಿಸಿದೆ. "ರಾಘುಶ್ರೀ ಮೇಲೆ ಹಾಕಿರು ... ವಾಪಸ್ ಪಡೆದುಕೊಳ್ಳಿ... ಇಲ್ಲದಿದ್ರೆ ನಿಮ್ಮನ್ನು ... ಹಾಕಿ ಬಿಡ್ತೇನೆ.. ಸಮಾಜದಲ್ಲಿ ಒಳ್ಳೆಯ ಕೆಲಸ ಮಾ ... ಸ್ವಾಮೀಜಿ ಮೇಲೆ ಕೇಸ್ ಹಾಕ್ಲಿಕ್ಕೆ ನಿಮಗೆಷ್ಟು ಧ ... ಕೇಸ್ ವಾಪಸ್ ಪಡಕೊಂಡು ಇತ್ಯರ್ಥ ಮಾ ... ಇಲ್ಲದಿದ್ರೆ ನಿಮ್ಮನ್ನ ಸುಮ್ನೆ ಬಿಡೋದಿಲ್ಲ... ಇಂ ... ಚೆಕ್ ಮಾಡಿ ನಾವ್ಯಾರೆಂದು ಗೊತ್ತಾಗ್ತದೆ.... ಅತ್ಯಾಚಾರ ಮಾಡಲಿಕ್ಕೆ ಹೇಗೆ ಸಾಧ್ಯ....? ನಿಮ ... ಸಹಕಾರದಿಂದ್ಲೇ ಇದೆಲ್ಲ ನಡೆದಿದೆ... ಈ ರೇಪ್ ... ಹೇಗೆ?... ನಿಮ್ಮ ಲೆದರ್ ವ್ಯವಹಾರ ಎಲ್ಲೆಲ್ಲಿ ... ಎಲ್ಲೆಲ್ಲಿ ರಫ್ತು ಮಾಡ್ತೀರಿ ಅದೆಲ್ಲ ನಂಗೆ ... ಮಾರಾಯ್ರೆ.... ಕಂಪ್ಲೇಂಟ್ ವಾಪಸ್ ಪಡೀರಿ... ನೋಡಿ ಏನಾಗ್ತದೆ ಅಂತಾ...." ಎಂದು ಮ ... ಕಡೆಯ ಕನ್ನಡದಲ್ಲಿ ಒಂದೇ ಸಮನೆ ಹೆದರಿಸಿ ... ಯೋಗೀಶ್.

ಈ ರೌಡಿಗೂ-ರಾಘು ಸ್ವಾಮೀಗೂ ಅದೆಂ ... ಸನ್ಯಾಸಿ ಎಂದು ಬೋರ್ಡು ಜಡಿದುಕೊಂಡವ ... ಪಾಪ ಮಾಡಿ ಅದರಿಂದ ಬಚಾವಾಗಲು ರಾ ... ಸರಣಿ ಅಪರಾಧ ಮಾಡುವಂತಾಗಿದೆ. ... ಅಂಡರ್‌ವರ್ಲ್ಡ್ ಲಿಂಕಿರುವುದೂ ಈಗ ನಿಸ್ಸಂ ... ಮಠದ ಭಕ್ತ ಗಣಕ್ಕೆ ಸಾಬೀತಾಗಿಹೋಗಿದೆ. ... ಕಡೆಯಿಂದ ರಾಘು ಪರಿವಾರ ವಾಮಾಚಾರಕ್ಕೆ ... ಸಿದ್ಧಪಡಿಸಿಕೊಂಡಿದೆ. ಗೋಳಿ ಸ್ವಾಮಿಗೆ ಲಾಗಾಯ ... ಆಧ್ಯಾತ್ಮಿಕ-ನೈತಿಕ ಪರಂಪರೆಗಿಂತಲೂ ಲೌಕಿ ... ವಾಮಾಚಾರ ಮಾರ್ಗದತ್ತಲೇ ತುಡಿತ ಜಾಸ್ತಿ ... ಮೋಡಿ-ವಶೀಕರಣ ಮಾಡುವ ತಂತ್ರಗಾರರ ಸಂಗ ... ಸಾಗರ ಸಮೀಪದ ಕೋಣಕಟ್ಟೆಯಲ್ಲಿ ಈ ರಾ ... ಕುರಿಯನ್ನು ಸಿಗಿದು ಅದರ ವಪೆ ತೆಗೆದು ... ಯಾಗಕ್ಕೆ ಹಾಕಿದಾಗಲೇ ಈತ ಅದ್ದ ದಾರಿಯ ... ಹೆಚ್ಚಿರುವ ಅನಾಹುತಕಾರಿ ಕಾವಿಜೀವಿ ಖಾತ್ರಿಯಾಗಿತ್ತು.










ಶ್ಯಾಮಶಾಸ್ತ್ರಿ

### "ರಾಘು ಭಟ್ಟ"

ರಾಮಚಂದ್ರಾಪುರ ಮಠದ ರಾಘು ಸ್ವಾಮಿ ಬಗ್ಗೆ ಹವ್ಯಕ ಬ್ರಾಹ್ಮಣರಲ್ಲಿದ್ದ ಭಕ್ತಿ ಈಗ ಮಾಯವಾಗಿ ಭಯ ಮೂಡಿ ಕಾಡುತ್ತಿದೆ! ಎಲ್ಲವನ್ನೂ ಪರಾಮರ್ಶೆಯ ಓರೆಗಲ್ಲಿಗೆ ತಿಕ್ಕಿ ನೋಡುವ ಸ್ವಭಾವದ ಬ್ರಾಹ್ಮಣರಲ್ಲಿ 'ತಾಲೀಬಾನ್' ಮಾದರಿಯ ಮತಾಂಧತೆ ಬೆಳೆಸಿರುವ ರಾಘು ಆ ಸಮುದಾಯವನ್ನು ಮಂಗ ಮಾಡಿ ಕಾಮನೆಗಳ ಸಾಧಿಸುತ್ತಿದ್ದಾನೆ. ಗುರುಗಳ ಕಾಮಿನಿ-ಕಾಂಚಾಣದ ಕಚಡ ಕತೆ ಬಗ್ಗೆ ಯಾರೂ ಮಾತಾಡದಂತೆ ಮಠದ ತಾಲೀಬಾನ್ ಗೂಂಡಾಗಳು ನಿಗಾ ಇಟ್ಟಿದ್ದಾರೆ. ಹೀಗಾಗಿ ರಾಘುನ ರಗಳೆಗಳ ಬಗ್ಗೆ ಮಾತಾಡುವುದಿರಲಿ ಪಿಸುಗುಡುವುದಕ್ಕೂ ಹೈಗರು ಹೆದರುತ್ತಿದ್ದಾರೆ. ಎಲ್ಲಿ ತಮ್ಮನ್ನು "ಕಾಫಿರ್" ಎಂದು ಮಠದ ರೌಡಿಪಡೆ ಘೋಷಿಸಿ ಬೆನ್ನತ್ತುತ್ತದೋ ಎಂಬ ಆತಂಕದಲ್ಲಿ ಬ್ರಾಹ್ಮಣರಿದ್ದಾರೆ.

ಮಠದ ತಾಲೀಬಾನ್ ಗೂಂಡಾಗಳು ಬಡಿದು ಹಾಕುವ, ತಮ್ಮ ಉದ್ಯೋಗ- ವ್ಯವಹಾರಕ್ಕೆ ಅಡ್ಡಗಾಲು ಹಾಕುವ ಆತಂಕದ ನಡುವೆಯೂ ಒಂದಿಷ್ಟು ಆತ್ಮಗೌರವದ, ವೈಚಾರಿಕತೆಯ ಬ್ರಾಹ್ಮಣರು ರಾಘುನ ಭಾನ್ಗಡಿಗಳ ಬಗ್ಗೆ ಕೋಡ್‌ವರ್ಡ್‌ನಲ್ಲಿ ಚರ್ಚಿಸುತ್ತಿದ್ದಾರೆ. ಈ ಪರೋಕ್ಷ ವಿಮರ್ಶೆ ವಿಧಾನಕ್ಕೆ ಸಮಸ್ತ ಬ್ರಾಹ್ಮಣ ವಲಯದಲ್ಲಿ ಹಬ್ಬಿಕೊಂಡುಬಿಟ್ಟಿದೆ. ಈ ಬ್ರಾಹ್ಮಣರು ರಾಘು ಸ್ವಾಮಿಗೆ "ರಾಘು ಭಟ್ಟ" ಎಂಬ ಅಡ್ಡ ಹೆಸರಿಟ್ಟು ಆತನ ಏಕಾಂತ ದರ್ಶನ-ಬಹಿರಂಗ ಭೋಂಗು, ವೈದ್ಯಕೀಯ ಪರೀಕ್ಷೆಗೆ ಹಿಂದೇಟು ಹಾಕುತ್ತಿರುವ ಪಾಪಪ್ರಜ್ಞೆ, ಮಠದೊಳಗಿನ ಬಳೆ-ಗೆಜ್ಜೆ ನಿನಾದ-ಹಣದ ಅವ್ಯವಹಾರ-ರೌಡಿಗಳ ಆರ್ಭಟದ ಬಗ್ಗೆ ಮಾತಾಡುವ ಪರ್ಯಾಯ ಮಾರ್ಗ ಕಂಡುಕೊಂಡಿದ್ದಾರೆ.

ನಾಲ್ಕು ಹವ್ಯಕರು ಸೇರಿದಲ್ಲಿ "ಏಂತದಡಾ ರಾಘು ಭಟ್ಟನ ಹೊಸ ಭಾನ್ಗಡಿ...." ಎಂದು ಮಾತು ಶುರು ಹಚ್ಚಿಕೊಳ್ಳುತ್ತಾರೆ. ಈ "ರಾಘು ಭಟ್ಟ" ಕೋಡ್‌ವರ್ಡ್ ಹವ್ಯಕ ಹೆಂಗಸರ ನಡುವೆಯೂ ಚಿರಪರಿಚಿತವಾಗಿ ಹೋಗಿದೆ. ಒಟ್ಟಿನಲ್ಲಿ ದಿನಕ್ಕೊಂದು ಆಯಾಮ ಪಡೆಯುತ್ತಿರುವ ರಾಘು ಭಟ್ಟನ ಬಂರ್ಗಾಸ್ ಭಾನ್ಗಡಿ "ತಾಲೀಬಾನ್ ಬ್ರಾಹ್ಮಣರ" ಭಯದ ಮಧ್ಯೆಯೂ ರೋಚಕ ಚರ್ಚೆಗೆ ವಸ್ತುವಾಗಿರುವುದು ಮಜಾ ಆಗಿದೆ!



...ಈಗ ಅಂಥದೇ ವಾಮ ಮಾರ್ಗ ಆತ ಬಳಸಿಕೊಂಡು ...ಕೇಸ್‌ನಿಂದ ಮುಕ್ತನಾಗಲು ತಂತ್ರ ಹೆಣೆದಿದ್ದಾನೆ. ...ಭಟ್ಟನ ಹೆತ್ತಪ್ಪ ಶ್ರೀನಿವಾಸ ಭಟ್ಟ ಮಗನ ಸಂಕಷ್ಟ ...ಗೆ ಭಟ್ಕಳದ ಪಟ್ಟಡವಿಯಲ್ಲಿರುವ 'ಕಿತ್ರೆ' ಎಂಬ ...ಲ್ಲಿ 'ಶತ್ರು ಸಂಹಾರ' ಹವನಕ್ಕೆ ಅಣಿಯಾಗಿದ್ದ. ...ಕನ್ನಿಕಾ ಪರಮೇಶ್ವರಿ ದೇವಸ್ಥಾನ ರಾಘುನ ಮಠದ ...ರ್ಯಿಯಲ್ಲಿದೆ. ಆ ದೇವಸ್ಥಾನ ದುರ್ಗಮ ...ಲ್ಲಿರುವುದರಿಂದ ತನ್ನ ವಾಮಾಚಾರಕ್ಕೆ ಪ್ರಶಸ್ತ ...ದು ರಾಘುನ ರಹಸ್ಯ ಕಾರ್ಯಸೂಚಿಯಲ್ಲೊಂದು. ...ೇರಳದ ಮತ್ತು ದಕ್ಷಿಣ ಕನ್ನಡ ಚತುರ ತಂತ್ರಿಗಳನ್ನು ...ರೇಪ್ ಕೊಟ್ಟವರ- ಸರ್ಕಾರ ನಡೆಸುತ್ತಿರುವವರ ...ಉನ್ನತಾಧಿಕಾರಿಗಳ ಹೆಸರಲ್ಲಿ ವಾಮಾಚಾರ ಮಾಡಲು ...ವಾಸ ಭಟ್ಟ ಯೋಜನೆ ಹಾಕಿಕೊಂಡು ಹೋಗಿದ್ದ. ...ದರೆ ಕಿತ್ರೆ ದೇವಿ ಮನೆ ದೇವಸ್ಥಾನ ವೈದಿಕ ...ಪು ಭಟ್ ಇದಕ್ಕೆ ಒಪ್ಪಲಿಲ್ಲ. ಬೇಕಿದ್ದರೆ ಸ್ಥಳೀಯ ...ರನ್ನೇ ಕರೆಸಿ- ಸ್ಥಳೀಯರ ದೇಣಿಗೆಯಿಂದ ಸಂಕಷ್ಟ ...ಹವನ-ಹೋಮ ರಾಘುಗಾಗಿ ಮಾಡೋಣವೆಂದು ...ಕ್ಕೆ ಹೊಡೆದಂತೆ ನೇರಾ-ನೇರ ಆತನ ತಂದೆಗೆ ...ದ್ದಾರೆ. ಹೀಗಾಗಿ ನವೆಂಬರ್ 3ರಂದು ಸಹಜ ವೈದಿಕ ...ದಲ್ಲಿ ಹೋಮ ಹವನ ನಡೆದಿದೆ; ಮತ್ತೊಂದು ...ರಕ್ಷಣಾ ಹೋಮ ಇದೇ 7ರಂದು ನಡೆಯಲಿದೆ. ...ದ ಸಮಾಧಾನವಾಗದ ರಾಘು, ಅಪ್ಪ ಶ್ರೀನಿವಾಸ ...ತ್ರೆಯ ಕಾಡಿನಲ್ಲೆಲ್ಲೋ ವಾಮಾಚಾರಿಗಳನ್ನು ತಂದು ...ಶ ಹೋಮ-ಹವನ ಕದ್ದು ಮಾಡಿ ಮುಗಿಸಿದ್ದಾನೆಂಬ ...ಮೂ ಈಗ ಹಾರಾಡುತ್ತಿದೆ.

...ಶೀಕರಣ-ತಂತ್ರಗಾರಿಕೆ ವಿದ್ಯೆಯಲ್ಲಿ ಅಪಾರ ...ಮುಟ್ಟಿರುವ ರಾಘುಸ್ವಾಮಿ ತನಗೆ ಬೇಕಾದ ಹೆಂಗಸರ ...ವಶೀಕರಣ ಮಂತ್ರ ಪಠಿಸುತ್ತಿದ್ದನೆಂಬುದು ಮಠದ ...ರದಲ್ಲಿ ಬಹಿರಂಗ ರಹಸ್ಯ! ಅಮಾಯಕ ಗಾಯಕಿ ...ಲತಾರನ್ನು ಬಳಸಿಕೊಳ್ಳುವಾಗಲೂ ಆಕೆಯ ...ಶ್ ಮಾಡಲು ಈ ವಶೀಕರಣ ಮಂತ್ರದ ಮಹತ್ವದ ...ತ ಪ್ರವಚನವನ್ನೇ ನೀಡಿದ್ದಾನೆ. ಇದಕ್ಕಾತ ಆಧಾರವಾಗಿ ... ಪರಂಪರೆಯ ಮೂಲ "ಮಹಾಪುರುಷ" ...ಚಾರ್ಯರ ಸೌಂದರ್ಯ ಲಹರಿಯನ್ನು ...ಂಡಿದ್ದಾನೆ. ಶಂಕರಾಚಾರ್ಯ ಶಕ್ತಿ ಪಡೆದಿದ್ದೇ ...ರಣೆಯಿಂದ; ಶಂಕರಾಚಾರ್ಯ ಮದುವೆಯಾಗದ ...ಯಾದರೂ, ಆತ ತಂತ್ರ ವಿದ್ಯೆಗಾಗಿ ಹೆಣ್ಣನ್ನು ...ಕೊಳ್ಳುತ್ತಿದ್ದರು. ಇದಕ್ಕೆ ಸಾಕ್ಷಿಯೆಂದರೆ ಆತ ಬರೆದ ...ಗಾಂಗ ವರ್ಣನೆಯ ಸ್ತೋತ್ರಗಳೆಂದು ರಾಘು ತನ್ನ ... ಆಪರಿ ಸಮರ್ಥಿಸಿಕೊಳ್ಳುತ್ತಿದ್ದ.

...ಘು ತನ್ನ ತೆವಲಿನ-ವಂಚನೆಯ ಮಾರ್ಗ ಸುಗಮ ...ಕೊಳ್ಳಲು ವೇದ-ಪುರಾಣ-ಭಾಗವತಗಳನ್ನೆಲ್ಲ ...ಕೋ ಹಾಗೆ ಬಳಸಿಕೊಳ್ಳುವುದರಲ್ಲಿ ನಿಸ್ಸೀಮ. ... ಈತನ ಅರೆಸ್ಟಾದರೆ ಸಾಕು, ಇಂಥ ಕೊಳಕು ...ಂಕ-ವಶೀಕರಣ ವಿದ್ಯೆಯಿಂದ ಅದೆಷ್ಟು ಅಮಾಯಕ ...ರ ಹಾದಿ ತಪ್ಪಿಸಿ ಮುಕ್ಕಿದ್ದಾನೆ; ಯಾವ್ಯಾವ ...ದಿಂದ ಹಣ ಸಂಗ್ರಹಿಸಿ ತನ್ನ ತಾಲಿಬಾನಿ ಪಡೆಗೆ ... ಪುಂಡರ-ಪಾಪಿಗಳ-ಪಾತಕರ ರಕ್ಷಣಾ ಕವಚದಲ್ಲಿ ...ಕಾಪು ಕಿತಾಪತಿ ಮಾಡಿದ್ದಾನೆಂಬುದೆಲ್ಲ ಸರಣಿಯಾಗಿ ...ರುವುದು ನಿಸ್ಸಂಶಯ. ಈಗ ಆತನ ಗೂಂಡಾ ... ಹೆದರಿ ಅನ್ಯಾಯಕ್ಕೆ ಒಳಗಾದವರು ಬಾಯಿ ...ಂಡಿದ್ದಾರೆ. ಪ್ರವಚನ ಪ್ರವೀಣ ರಾಘು ಜಾಣರೆಂಬ ...ಪ ಬ್ರಾಹ್ಮಣರನ್ನು, ತಾನೊಬ್ಬ ಶ್ರೀರಾಮನ ...ವತಾರವೆಂದು ನಂಬಿಸಿ ಬೇಳೆ ಬೇಯಿಸಿಕೊಳ್ಳು ...ದು ನಿಜಕ್ಕೂ ದುರಂತ.


...ಮಚಂದ್ರಾಪುರ ಮಠದ ಬೆಕ್ಕು ಪುಟನೆಗೆದದ್ದು ...ಗೂ ಕಂಡಿದೆ. ಈ ಕಳ್ಳ ಬೆಕ್ಕಿಗೆ ಗಂಟೆ ಕಟ್ಟೋರು ...??

• ಶುದ್ಧೋಧನ

# ಘನತೆಯ ಸಾವನ್ನು ಆಹ್ವಾನಿಸಿದ ಯುವತಿ ಬ್ರಿಟನಿ

ಇದೇ ನವೆಂಬರ್ 1ರಂದು ಬ್ರಿಟನಿ ಮೈನಾರ್ಡ್ ಎಂಬ ಅಮೆರಿಕನ್ ಯುವತಿಯ ಸಾವು ಜಗತ್ತಿನಾದ್ಯಂತ ಸುದ್ದಿ ಮಾಡಿತು. ಅದಕ್ಕೆ ಕಾರಣ ಆಕೆ ಆಯ್ಕೆ ಮಾಡಿಕೊಂಡ ಘನತೆಯ ಸಾವು.

ಬ್ರಿಟನಿ ಚಿಕ್ಕವಳಾಗಿದ್ದಾಗಲೇ ಅವಳ ತಂದೆ ತನ್ನ ಹೆಂಡತಿ ಮತ್ತು ಮಗಳಿಂದ ದೂರವಾಗಿದ್ದ. ಆಗ ತಾಯಿ ಡೆಬ್ಬಿ ತಂದೆಯ ಕೊರತೆಯನ್ನು ನೀಗಿಸಲು ಪ್ರಯತ್ನಪಟ್ಟಿದ್ದರಿಂದ ಬ್ರಿಟನಿಗೆ ಸಾಹಸ ಕ್ರೀಡೆಗಳಲ್ಲಿ ಮತ್ತು ಊರೂರು ಸುತ್ತುವುದರಲ್ಲಿ ಆಸಕ್ತಿ ಹುಟ್ಟಿತು. ಆಕೆ ಯೌವನಕ್ಕೆ ಕಾಲಿಟ್ಟ ಕೂಡಲೇ ದೇಶದೇಶ ಸುತ್ತಲಾರಂಭಿಸಿದಳು. ಮ್ಯಾರಾಥಾನ್ ರೇಸ್‌ಗಳಲ್ಲಿ ಭಾಗವಹಿಸಿದ್ದಲ್ಲದೆ, ಮೌಂಟ್ ಕಿಲಿಮಂಜಾರೋವನ್ನೂ ಬ್ರಿಟನಿ ಏರಿದ್ದಳು. ಶಾಲಾ ಶಿಕ್ಷಕಿಯಾಗಿ ತರಬೇತಿ ಪಡೆಯುವ ಜೊತೆಜೊತೆಗೆ ನೇಪಾಲ್, ಥೈಲ್ಯಾಂಡ್, ಸಿಂಗಪೂರ್, ವಿಯಟ್ನಾಮ್, ಕಾಂಬೋಡಿಯಾ ತರಹದ ದೇಶಗಳಿಗೆಲ್ಲ ಭೇಟಿ ನೀಡಿದಳು.





ಮದುವೆ ದಿನ ಬ್ರಿಟನಿ

ಈ ದೇಶಗಳಲ್ಲಿನ ಬಡತನದ ದೃಶ್ಯಗಳು ತಾನೆಷ್ಟು ಅದೃಷ್ಟವಂತೆ ಎಂಬುದನ್ನು ಬ್ರಿಟನಿಗೆ ಕಲಿಸಿಕೊಟ್ಟಿದ್ದವು.

ಹೀಗೆ ಜೀವನೋತ್ಸಾಹದಿಂದ ತುಂಬಿದ್ದ ಚಿಲುಮೆಯಂತಿದ್ದ ಬ್ರಿಟನಿ ಕಳೆದ ವರ್ಷ ತನ್ನ ಐದು ವರ್ಷದ ಬಾಯ್‌ಫ್ರೆಂಡ್ ಡ್ಯಾನ್‌ನನ್ನು ಮದುವೆಯಾದಳು. ದಾಂಪತ್ಯ ಜೀವನಕ್ಕೆ ಕಾಲಿಟ್ಟ ಬ್ರಿಟನಿ ಮಕ್ಕಳನ್ನು ಹಡೆಯುವ, ತನ್ನದೇ ಕುಟುಂಬವನ್ನು ಕಟ್ಟಿಕೊಳ್ಳುವ ಕನಸು ಕಾಣುತ್ತಿದ್ದಳು.

ಆದರೆ ಪದೇಪದೇ ಅವಳನ್ನು ತೀವ್ರ ತಲೆನೋವು ಕಾಡುತ್ತಿತ್ತು, ಅದಕ್ಕೆ ಕಾರಣ ಹುಡುಕಿದಾಗ ಬ್ರಿಟನಿಗೆ ದೊಡ್ಡ ಆಘಾತ ಕಾದಿತ್ತು, ವೈದ್ಯರು ಬ್ರಿಟನಿ ಮಿದುಳಿಗೆ ಕ್ಯಾನ್ಸರ್ ತಾಕಿದೆ ಎಂದೂ, ಹೆಚ್ಚೆಂದರೆ ಆಕೆ ಆರರಿಂದ ಹತ್ತು ವರ್ಷ ಬದುಕಿರಬಹುದೆಂದೂ ಹೇಳಿದರು. ಅರವತ್ತೋ, ಎಪ್ಪತ್ತೋ ವರ್ಷ ವಯಸ್ಸಾಗಿರುವವರಿಗೆ ಒಂದು ದಶಕ ಎಂಬುದು ವರವಾಗಿ ಕಾಣಿಸಬಹುದು. ಆದರೆ ಆಗಿನ್ನೂ 28ರ ಹರೆಯದ ಬ್ರಿಟನಿಗೆ ಅದು ಸಹಜವಾಗಿಯೇ ಅಲ್ಪಾಯುಶವಾಗಿ ಭಾವಿಸಿತು. ಆದರೂ ಆಕೆ ಕ್ಯಾನ್ಸರ್ ರೋಗಕ್ಕೆ ಚಿಕಿತ್ಸೆ ಪಡೆಯಲಾರಂಭಿಸಿದಳು. ಚಿಕಿತ್ಸೆಯ ಜೊತೆಗೆ ಬರುವ ಅಪಾರ ನೋವನ್ನೂ ಸಹಿಸಿದಳು. ಆದರೆ ಅದೆಲ್ಲದರಿಂದ ಯಾವ ಫಲವೂ ಸಿಗಲಿಲ್ಲ, ಬದಲಾಗಿ ಮೂರು ತಿಂಗಳ ನಂತರ ವೈದ್ಯರು "ಕ್ಯಾನ್ಸರ್ ಶೀಘ್ರವಾಗಿ ಬೆಳೆಯುತ್ತಿದೆ. ಇನ್ನು ಆರು ತಿಂಗಳ ಕಾಲ ಮಾತ್ರ ಬದುಕಿರುತ್ತೀಯಾ" ಎಂದರು. ಅಷ್ಟೇ ಅಲ್ಲ, ಕ್ಯಾನ್ಸರ್ ಆಕೆಯ ಮಿದುಳನ್ನು ಆಕ್ರಮಿಸಿಕೊಂಡು ಬೆಳೆದಂತೆಲ್ಲ ಆಕೆ ಹೆಚ್ಚೆಚ್ಚು ತೀವ್ರತರವಾದ ನೋವನ್ನು ಅನುಭವಿಸಬೇಕಾಗುತ್ತದೆ ಎಂದರಲ್ಲದೆ ಕಾಲಕ್ರಮೇಣ ಆಕೆ ತನ್ನ ಎಲ್ಲ ಅಂಗಾಂಗಗಳ ಮೇಲಿನ ನಿಯಂತ್ರಣವನ್ನೇ ಕಳೆದುಕೊಂಡು ಸಾಯುತ್ತಾಳೆ ಎಂದೂ ಹೇಳಿದರು.

ಬ್ರಿಟನಿಗೆ ಅಂತಹ ಸಾವು ಬೇಕಿರಲಿಲ್ಲ, ಆಗ ಆಕೆ ಒಂದು ನಿರ್ಧಾರಕ್ಕೆ ಬಂದಳು. ಬ್ರಿಟನಿ ವಾಸಿಸುತ್ತಿದ್ದ ಕ್ಯಾಲಿಫೋರ್ನಿಯಾ ರಾಜ್ಯದಲ್ಲಿ ಚಿಕಿತ್ಸೆಯೇ ಇಲ್ಲದಂತಹ ರೋಗಗಳಿಗೆ ತುತ್ತಾಗಿರುವವರು ಘನತೆಯಿಂದ ಸಾವನ್ನು ಸ್ವೀಕರಿಸಲು ನೆರವು ನೀಡುವಂತಹ ಕಾನೂನು ಇಲ್ಲ, ಆದ್ದರಿಂದ ಅಂತಹ ಕಾನೂನು ಇರುವ ಒರೆಗಾನ್ ರಾಜ್ಯಕ್ಕೆ ವಲಸೆ ಹೋಗಲು ಆಕೆ ನಿರ್ಧರಿಸಿದಳು. ಆಗ ತಾಯಿ ಡೆಬ್ಬಿ "ನನ್ನ ಮಗಳಾದ ನೀನು ಎಂತಹ ಸ್ಥಿತಿಯಲ್ಲಿದ್ದರೂ ನಾನು ನಿನ್ನನ್ನು ನೋಡಿಕೊಳ್ಳುತ್ತೇನೆ" ಎಂದು ಭರವಸೆ ಕೊಟ್ಟಳು. ಗಂಡ ಡ್ಯಾನ್ ಕೂಡ ಆಕೆಯ ಜೊತೆ ನಿಲ್ಲುವ ಮಾತು ಕೊಟ್ಟ. ಆದರೆ ಬ್ರಿಟನಿಗೆ ತನ್ನ ದೇಹದ ಮೇಲೆ ನಿಯಂತ್ರಣ ಕಳೆದುಕೊಂಡು, ನೋವನ್ನು ಅನುಭವಿಸುತ್ತಾ ಹೀನಾಯವಾಗಿ ಸಾಯುವುದು ಬೇಕಿರಲಿಲ್ಲ, ಅದಕ್ಕೆ ಬದಲಾಗಿ ಸೂಕ್ತ ಸಮಯದಲ್ಲಿ ತನಗೆ ಬೇಕಾದಂತಹ ಸಾವನ್ನು ಘನತೆಯಿಂದ ಸ್ವೀಕರಿಸಬೇಕೆಂಬ ತನ್ನ ನಿರ್ಧಾರವನ್ನು ಅವರಿಬ್ಬರೂ ಬೆಂಬಲಿಸಬೇಕೆಂದು ಅವರ ಮನ ಒಲಿಸಿದಳು. ಅನಂತರ ಬ್ರಿಟನಿಯ ಇಡೀ ಕುಟುಂಬ ಒರೆಗಾನ್ ರಾಜ್ಯಕ್ಕೆ ವಲಸೆ ಹೋಯಿತು. ಅಲ್ಲೊಂದು ಪುಟ್ಟ ಮನೆಯನ್ನು ಪಡೆದು ಸಾಧ್ಯವಾದಷ್ಟು ನೆಮ್ಮದಿಯಿಂದ ಜೀವಿಸಲು ಬ್ರಿಟನಿ ಯತ್ನಿಸಿದಳು. ಜೊತೆಗೆ ಅಮೆರಿಕದ ಎಲ್ಲಾ ರಾಜ್ಯಗಳೂ ಸಾವಿನ ಅಂಚಿನಲ್ಲಿರುವ ರೋಗಿಗಳಿಗೆ ಘನತೆಯಿಂದ ಸಾಯಲು ನೆರವಾಗುವಂತಹ ಕಾನೂನನ್ನು ಜಾರಿಗೆ ತರಬೇಕೆಂಬ ಆಂದೋಲನದಲ್ಲಿ ಭಾಗವಹಿಸಲಾರಂಭಿಸಿದಳು.

ಕೆಲವರು ಬ್ರಿಟನಿಯ ನಿರ್ಧಾರವನ್ನು ಟೀಕಿಸಿದರು; ಇದು ಕ್ರಿಶ್ಚಿಯನ್ ಧರ್ಮದ ವಿರುದ್ಧದ ನಿಲುವು ಎಂದು ಪ್ರತಿಭಟಿಸಿದರು; ಆಕೆ ಆತ್ಮಹತ್ಯೆ ಮಾಡಿಕೊಳ್ಳಲು ನಿರ್ಧರಿಸಿದ್ದಾಳೆ ಎಂದು ಹುಯಿಲೆಬ್ಬಿಸಿದರು. ಆದರೆ ಬ್ರಿಟನಿ ಅದೆಲ್ಲವನ್ನು ದಿಟ್ಟವಾಗಿ ಎದುರಿಸಿದಳು. "ನನ್ನ ದೇಹದ ಒಂದು ಕಣವೂ ಸಾವಿಗಾಗಿ ಇಚ್ಛಿಸುತ್ತಿಲ್ಲ, ನಾನು ಆತ್ಮಹತ್ಯೆ ಮಾಡಿಕೊಳ್ಳುತ್ತಿಲ್ಲ, ಇವತ್ತು ಯಾರಾದರೂ ನನ್ನ ಮಿದುಳನ್ನು ನಾಶ ಮಾಡುತ್ತಿರುವ ಕ್ಯಾನ್ಸರ್ ರೋಗಕ್ಕೆ ಚಿಕಿತ್ಸೆ ಇದೆ ಎಂದೂ, ನಾನು ಚೇತರಿಸಿಕೊಳ್ಳುತ್ತೇನೆ ಎಂದೂ ಭರವಸೆ ನೀಡಿದರೆ ನಾನು ಈ ನಿರ್ಧಾರದಿಂದ ಈ ಕೂಡಲೇ ಹಿಂದೆ ಸರಿಯುತ್ತೇನೆ. ಆದರೆ ದುರದೃಷ್ಟವಶಾತ್ ನನ್ನನ್ನು ತಿನ್ನುತ್ತಿರುವ ಕ್ಯಾನ್ಸರ್‌ಗೆ ಚಿಕಿತ್ಸೆಯೇ ಇಲ್ಲ, ಆದ್ದರಿಂದ ಅದು ನನ್ನನ್ನು ಸಂಪೂರ್ಣವಾಗಿ ನಾಶ ಮಾಡುವ ಮುನ್ನ, ನನ್ನನ್ನು ನೋವಿಗೆ ದೂಡುವ ಮುನ್ನ, ನಾನು ನನ್ನ ದೇಹದ ಮೇಲೆ ಎಲ್ಲಾ ನಿಯಂತ್ರಣವನ್ನು ಕಳೆದುಕೊಳ್ಳುವ ಮುನ್ನ ನಾನೇ ಘನತೆಯಿಂದ ಸಾವನ್ನು ಸ್ವೀಕರಿಸುತ್ತೇನೆ" ಎಂದು ಬ್ರಿಟನಿ ಸ್ಪಷ್ಟಪಡಿಸಿದಳು.

ಒರೆಗಾನ್ ರಾಜ್ಯದ ಕಾನೂನಿನ ಪ್ರಕಾರ ಸಾವಿನ ಅಂಚಿನಲ್ಲಿರುವ - ಆದರೆ ದೈಹಿಕವಾಗಿ ಮತ್ತು ಮಾನಸಿಕವಾಗಿ ಇನ್ನೂ ಗಟ್ಟಿ ಇದ್ದು ತಮ್ಮ ಪ್ರಾಣವನ್ನು ತೆಗೆದುಕೊಳ್ಳುವಂತಹ ನಿರ್ಧಾರಕ್ಕೆ ಬರುವ ಶಕ್ತಿಯನ್ನು ಹೊಂದಿರುವ- ರೋಗಿಗಳಿಗೆ ವೈದ್ಯರು ಮಾತ್ರೆಗಳನ್ನು ಶಿಫಾರಸು ಮಾಡಬಹುದೇ ಹೊರತು ಅದನ್ನು ಅವರೇ ತಮ್ಮ ಕೈಯಿಂದ ಕೊಡುವಂತಿಲ್ಲ, ಇದರ ಅರ್ಥ ರೋಗಿ ಇನ್ನೂ ತನ್ನ ದೈಹಿಕ ಮತ್ತು ಮಾನಸಿಕ ಶಕ್ತಿಯನ್ನು ಹೊಂದಿದ್ದಾಗಲೇ ಮಾತ್ರೆಗಳನ್ನು ಯಾರ ನೆರವಿಲ್ಲದೆ ತೆಗೆದುಕೊಳ್ಳಬೇಕು.

ಕಳೆದ ಕೆಲವು ತಿಂಗಳುಗಳಿಂದ ಬ್ರಿಟನಿಯ ಆರೋಗ್ಯ ಕುಸಿಯುತ್ತಾ ಬಂದಿತ್ತು, ತಲೆ ಮತ್ತು ಕತ್ತು ನೋವುಗಳ ಜೊತೆಗೆ ಆಕೆ ಆಗಾಗ ಮೂರ್ಛೆ ಹೋಗಲೂ ಪ್ರಾರಂಭಿಸಿದ್ದಳು. ಇತ್ತೀಚೆಗೆ ಆಕೆ ಒಂದು ದಿನದಲ್ಲೇ ಎರಡು ಬಾರಿ ಮೂರ್ಛೆ ಹೋದಳಲ್ಲದೆ ಅನಂತರ ಆಕೆ ಕೆಲಕಾಲ ಮಾತನಾಡುವ ಶಕ್ತಿಯನ್ನೇ ಕಳೆದುಕೊಂಡಿದ್ದಳು. "ಒಮ್ಮೆಯಂತೂ ನನಗೆ ಜ್ಞಾನ ಬಂದಾಗ ನನ್ನ ಎದುರಿಗೆ ಇದ್ದದ್ದು ನನ್ನ ಗಂಡ ಎಂಬುದು ನನ್ನ ಅರಿವಿಗೆ ಬಂತಾದರೂ ನಾನು ಅದೆಷ್ಟೇ ಪ್ರಯತ್ನಿಸಿದರೂ ಆತನ ಹೆಸರೇ ನನಗೆ ನೆನಪಾಗಲಿಲ್ಲ, ಅದು ಭಯಾನಕ ಅನುಭವವಾಗಿತ್ತು" ಎಂದಳು ಬ್ರಿಟನಿ.

ಇದು ಹೀಗೇ ಮುಂದುವರೆದರೆ ತನ್ನನ್ನು ಕ್ಯಾನ್ಸರ್ ಸಂಪೂರ್ಣವಾಗಿ ವಶಪಡಿಸಿಕೊಳ್ಳುತ್ತದೆ ಎಂದು ಅರಿತ ಬ್ರಿಟನಿ ನವೆಂಬರ್ 1ರಂದು ವೈದ್ಯರು ತನಗೆ ಕೊಟ್ಟಿದ್ದ ಮಾತ್ರೆಗಳನ್ನು ತೆಗೆದುಕೊಳ್ಳುವ ಮೂಲಕ ಘನತೆವೆತ್ತ ಸಾವನ್ನು ಸ್ವೀಕರಿಸುವುದಾಗಿ ನಿರ್ಧರಿಸಿದಳು. ಅದರಂತೆ ಅಂದು ತನ್ನ ಮತ್ತು ಗಂಡನ ಬೆಡ್‌ರೂಮಿನಲ್ಲಿ, ಪ್ರೀತಿಯ ತಾಯಿ, ಗಂಡ, ಮಲತಂದೆ ಮತ್ತು ವೈದ್ಯ ಮಿತ್ರರ ಸಮ್ಮುಖದಲ್ಲಿ ಬ್ರಿಟನಿ ಸಾವನ್ನು ಆಹ್ವಾನಿಸಿಕೊಂಡಳು. ಬ್ರಿಟನಿ ಕೊನೆಯುಸಿರೆಳೆದಾಗ ಆಕೆಯ ವಯಸ್ಸು ಕೇವಲ 29.

ಮಾರಕ ರೋಗದ ಎದುರು ಸೋಲುವ ಮುನ್ನ ಮರಣ ಹೊಂದುವ ನಿರ್ಧಾರ ತೆಗೆದುಕೊಳ್ಳುವುದು ಸುಲಭದ ಮಾತಲ್ಲ, ಜೀವನವನ್ನು ಅಪಾರವಾಗಿ ಪ್ರೀತಿಸುತ್ತಿದ್ದ, ದಾಂಪತ್ಯ ಜೀವನಕ್ಕೆ ಆಗತಾನೆ ಕಾಲಿಟ್ಟು, ಕನಸುಗಳ ಗೋಪುರವನ್ನೇ ಕಟ್ಟಿಕೊಂಡಿದ್ದ ಯುವತಿ ಬ್ರಿಟನಿ ಅಂತಹ ಧೈರ್ಯದ ನಿರ್ಧಾರ ತೆಗೆದುಕೊಂಡ ಗಟ್ಟಿಗಿತ್ತಿ.


ಲವ್ ಡಿಸಪಾಯಿಂಟ್‌ಮೆಂಟ್ ಎಂದೋ, ನಿರುದ್ಯೋಗದ ಸಮಸ್ಯೆ ಎಂದೋ ಆತ್ಮಹತ್ಯೆ ಮಾಡಿಕೊಳ್ಳುವುದು ಖಂಡಿತವಾಗಿಯೂ ಸರಿಯಲ್ಲ, ಆದರೆ ಚಿಕಿತ್ಸೆಯೇ ಇಲ್ಲದ ರೋಗಕ್ಕೆ ಬಲಿಯಾಗಿ ನರಳುತ್ತಾ ತಮ್ಮ ಸುತ್ತ ಇರುವವರನ್ನೂ ನೋವಿಗೆ ದೂಡುತ್ತಾ ಸಾಯುವ ಬದಲಾಗಿ ಇಂತಹ ಘನತೆಯ ಸಾವನ್ನು ಸ್ವೀಕರಿಸುವ ಆಯ್ಕೆ ಜನರಿಗೆ ಎಲ್ಲೆಡೆ ಇರಬೇಕಲ್ಲವೇ?

• ಸಾವಂತಿ





ಗೆಳತಿ, ತಾಯಿ ಮತ್ತು ಪ್ರೀತಿಯ ನಾಯಿಯೊಂದಿಗೆ....



ಗಂಡ ಡ್ಯಾನ್ ಜೊತೆ



ನಾಲ್ಕು ವರ್ಷದ ಬ್ರಿಟನಿ ತಾಯಿ ಡೆಬ್ಬಿ ಜೊತೆ

ರಂಜನೆ | ಬೋಧನೆ | ಪ್ರಚೋದನೆ ಲಂಕೇಶ್

## ನಿಗಮ ಮಂಡಳಿ ಪಾಲಿಟಿಕ್ಸ್

# ಮಿಂಚಿನ ಓಟ ಅಧಿಕಾರದ ಆಟ


ಸಿದ್ದು


ಪರಮೇಶ್ವರ್

**ಚಾ**ಮರಾಜಪೇಟೆಯಿಂದ ಕಾಂಗ್ರೆಸ್ ಟಿಕೆಟ್ ಗಿಟ್ಟಿಸಿಯೂ ಜಮೀರ್ ವಿರುದ್ಧ ಸೋತ ನಿವೃತ್ತ ಪೊಲೀಸ್ ಅಧಿಕಾರಿ ಜೆ.ಎ. ಬಾವಾರನ್ನು ಪ್ರತಿಷ್ಠಿತ ನಿಗಮವೊಂದಕ್ಕೆ ಅಧ್ಯಕ್ಷರನ್ನಾಗಿ ಮಾಡಲೇಬೇಕೆಂಬುದು ಮೊಯ್ಲಿ ಸಾಹೇಬರ ಹಟವಂತೆ. ಆಸ್ಕರ್ ಫರ್ನಾಂಡಿಸ್ ಲಕ್ಷ್ಮಿಗೋಲ್ಡ್ ನಂಜುಂಡಿಯವರನ್ನು 'ವಿಶ್ವ ಕರ್ಮ ಅಭಿವೃದ್ಧಿ ನಿಗಮ'ಕ್ಕೆ ತರಲೇಬೇಕೆಂದು ಪಟ್ಟು ಹಾಕಿದ್ದಾರಂತೆ. ರಾಜ್ಯ ಕಾಂಗ್ರೆಸ್ ಅಧ್ಯಕ್ಷ ಪರಮೇಶ್ವರ್ ತನ್ನ ಬಲಗೈ ಬಂಟ ಆಸ್ಟ್ರೇಲಿಯಾ ಪ್ರಕಾಶನನ್ನು ಫಲವತ್ತಾದ ಮಂಡಳಿಯೊಂದಕ್ಕೆ ಅಧ್ಯಕ್ಷನನ್ನಾಗಿಸಲೇಬೇಕೆಂಬ ಸರ್ಕಸ್ಸಿಗೆ ಕೈಹಾಕಿದ್ದಷ್ಟೇ ಅಲ್ಲ; ತನ್ನದೇ ಮೂವತ್ತು ಮಂದಿ ಬೆಂಬಲಿಗರ ಪಟ್ಟಿಯನ್ನೂ ಕೊಟ್ಟಿದ್ದಾರಂತೆ!

ಸದ್ಯ ತನ್ನನ್ನೇ ಅಬಕಾರಿ ನಿಗಮಕ್ಕೋ ಎಂಎಸ್ಐಎಲ್‌ಗೋ ಅಧ್ಯಕ್ಷನನ್ನಾಗಿ ಮಾಡಿ ಎಂದು ಪರಮೇಶ್ವರ್ ಸಾಹೇಬರು ಲಾಬಿ ಶುರು ಹಚ್ಚಿಕೊಂಡಿಲ್ಲವಲ್ಲ; ಅದು ರಾಜ್ಯ ಕಾಂಗ್ರೆಸ್ಸಿನ ಪುಣ್ಯ.

ಖರ್ಗೆಯವರದ್ದೇ ಒಂದು ಪಟ್ಟಿ, ಧರ್ಮಸಿಂಗ್ ಪ್ರಾಯೋಜಿತ ಮತ್ತೊಂದು ಪಟ್ಟಿ, ಬಿ.ಕೆ. ಹರಿಪ್ರಸಾದ್‌ರ 'ಅಹಿಂದ' ಪಟ್ಟಿ, ರಾಮಲಿಂಗಾರೆಡ್ಡಿ ಮತ್ತು ದಿನೇಶ್ ಗುಂಡೂರಾವ್ ಸೇರಿಕೊಂಡು ಮಾಡಿರುವ ಬೆಂಗಳೂರು ಸಿಟಿ ಲೀಡರುಗಳ ಪಟ್ಟಿ, ಎಸ್.ಎಂ. ಕೃಷ್ಣರದ್ದೇ ಮತ್ತೊಂದು ಪಟ್ಟಿ, ಜನಾರ್ದನ್ ಪೂಜಾರಿಯವರ ಕರಾವಳಿ ಕಾಂಗ್ರೆಸ್ ನಿಷ್ಠರ ಪಟ್ಟಿ ಮತ್ತು ಟಿ.ಬಿ. ಜಯಚಂದ್ರರು ಪರಿಶೋಧಿಸಿಕೊಟ್ಟ ಒಕ್ಕಲಿಗರ ಪಟ್ಟಿ...!


ಹೀಗೆ ಅವರವರ ಮೂಗಿನ ನೇರಕ್ಕೆ ಅವರವರ ಬಕುತಿಗೆ ತಕ್ಕಂತೆ ನಿಗಮ-ಮಂಡಳಿಗಳ ಆಕಾಂಕ್ಷಿಗಳು, ಲಾಬಿಕೋರರು, ಅರ್ಜಿದಾರರದ್ದೇ ದೊಡ್ಡ ಪಡೆಯೊಂದು ಕಾಂಗ್ರೆಸ್ ಕಾರಿಡಾರಿನಲ್ಲಿ ಜಮಾಯಿಸಿದೆ. ವಯೋವೃದ್ಧ ಜಾಫರ್ ಷರೀಫ್ ಸಾಹೇಬರಿಂದ ಹಿಡಿದು ಮಾರ್ಗರೆಟ್ ಆಳ್ವರ ತನಕ, ಬಿಂಬಾ ರಾಯ್ಕರ್ ಮೊದಲಾಗಿ ಶಾಮನೂರು ಧಣಿಗಳ ತನಕ, ಮರೆಯಲ್ಲೇ ಕೂತು ಕಾರ್ಯತಂತ್ರ ರೂಪಿಸುತ್ತಿರುವ ಆರ್. ಜಾಲಪ್ಪ, ರೆಹಮಾನ್ ಖಾನ್; ಹೀಗೆ ಬಂದಷ್ಟು ಗುಂಜಿಕೊಳ್ಳುವ ಹಾಲಿ ಮಾಜಿ ಕಾಂಗ್ರೆಸ್ ಅಧಿಪತಿಗಳೆಲ್ಲರೂ ನಿಗಮ ಮಂಡಳಿಗಳ ಪಾರುಪತ್ಯಕ್ಕೆ ನಿಂತು ಬಿಟ್ಟಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಹೊಸ ತಲೆ ಶೂಲೆಯ ರೂಪದಲ್ಲಿ ಶುರುವಾದ ನಿಗಮ ಮಂಡಳಿಗಳ ಪಾಲಿಟಿಕ್ಸ್ ನಿಜಕ್ಕೂ ಹಗ್ಗದ ನಡಿಗೆಯೆ.


### ಪದಾಧಿಕಾರಿಗೂ ಕೈ!


'ಇರೋದು ಮೂರು ಬಂದೋರು ಸಾವಿರಾರು' ಎಂಬಂತೆ ಯಾರಿಗೆಂದು ಮಣೆ ಹಾಕುತ್ತಾರೋ, ಕೊನೆಗಿದು ಎಲ್ಲಿಗೆ ಬಂದು ನಿಲ್ಲುತ್ತೋ ಬಲ್ಲವರಿಲ್ಲ. ನಿನ್ನೆ ಮೊನ್ನೆಯ ತನಕ ಹೈಕಮಾಂಡ್ ಧೂತ ದಿಗ್ವಿಜಯ್ ಸಿಂಗ್ ಹಾಲಿ


ಕೆ.ಹೆಚ್. ಮುನಿಯಪ್ಪ ಸಮ್ಮತಿಸುವುದಿಲ್ಲ.

ಜೊತೆಗೆ ಆಸ್ಕರ್ ತಮ್ಮ ಬೆಂಬಲಿಗರದ್ದೇ ಮ... ಪಟ್ಟಿ ನೀಡಿದ್ದಾರಂತೆ. ಧರ್ಮಸಿಂಗ್ ಬೇರೆ ಪದ...


ಎಸ್.ಎಂ. ಕೃಷ್ಣ


ಮೊಯ್ಲಿ


ಆಸ್ಕರ್


ಖರ್ಗೆ

ಶಾಸಕರು ಮತ್ತು ಕಳೆದ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಟಿಕೆಟ್ ಗಿಟ್ಟಿಸಿಯೂ ಸೋತವರಿಗೆ ಸ್ಥಾನಮಾನವಿಲ್ಲ ಎನ್ನುತ್ತಿದ್ದವರು ಈಗ ಪಕ್ಷದ ಪದಾಧಿಕಾರಿ ಹುದ್ದೆಯಲ್ಲಿದ್ದವರಿಗೂ ಅದನ್ನು ವಿಸ್ತರಿಸಿದ್ದಾರೆ. ಅಂದರೆ ಅಪ್ಪಟ ಕಾರ್ಯಕರ್ತರಿಗಷ್ಟೇ ಮಂಡಳಿ ಸಮ್ಮಾನ.

ಸರಿಸುಮಾರು 80 ನಿಗಮ ಮಂಡಳಿಗಳು, ಹದಿನಾಲ್ಕು ಉಪಾಧ್ಯಕ್ಷ ಪದವಿಗಳು 650 ರಷ್ಟು ನಿರ್ದೇಶಕ ಸ್ಥಾನಗಳೂ ಸೇರಿದಂತೆ ಒಟ್ಟು 1100 ಮಂದಿ ಕಾಂಗ್ರೆಸ್ ಕಾರ್ಯಕರ್ತರನ್ನು ಅಧಿಕಾರಕ್ಕೇರಿಸುವ ಆಶೆಯೇನೋ ಮುಖ್ಯಮಂತ್ರಿಗಳಿಗಿದೆ. ಸಮಸ್ಯೆಯಿರುವುದು ಇಡೀ ಪಕ್ಷವನ್ನು ಒಟ್ಟಿಗೆ ಕರೆದೊಯ್ಯುವಲ್ಲಿ, ತನಗೆ ಬೇಕುಬೇಡವಾದವರ ಆಧಾರದ ಮೇಲೆ ಸಿಎಂ ಯಾವುದನ್ನೂ ನಿರ್ಧರಿಸುವಂತಿಲ್ಲ, ತನಗಿಂತಲೂ ಹಿರೀಕರದ್ದೇ ದೊಡ್ಡ ಪಟ್ಟಿಯಿದೆ. ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಪರಮೇಶ್ವರ್ ನೀಡಿದ ಪಟ್ಟಿಯನ್ನು ಯಾವುದೇ ಕಾರಣಕ್ಕೂ ಖರ್ಗೆ ಒಪ್ಪುವುದಿಲ್ಲ, ಹಾಗೆ ಖರ್ಗೆ ನೀಡಿದ ಪಟ್ಟಿಯನ್ನೇ ಜಾರಿಗೊಳಿಸ ಹೊರಟರೆ ಅದನ್ನು

ಸಿದ್ದುಗೆ ಫೋನ್ ಮಾಡಿ ತಲೆ ತಿನ್ನುತ್ತಿದ್ದಾರೆ. ಮಂತ್ರಿಯಾಗಿದ್ದ ರೆಹಮಾನ್ ಖಾನರದ್ದೂ ದೊಡ್ಡ ... ಇದೆ. ಅದಕ್ಕೆ ತದ್ವಿರುದ್ಧವಾಗಿದೆ ಜಾಫರ್ ... ಬೆಂಬಲಿಗರ ಹಿಂಡು. ಜೆಡಿಎಸ್ ತೊರೆದು ಬಂ... ಬಿಜೆಪಿಗೆ ವಿದಾಯ ಹೇಳಿ ಕಾಂಗ್ರೆಸ್ ಬಾವುಟ ಹಿಡಿ... ಕಳೆದ ಚುನಾವಣೆಯಲ್ಲಿ ಟಿಕೆಟ್ ಕೈ ತಪ್ಪಿದ ... ಹಕ್ಕು ಮಂಡಿಸುವವರು, ಹಿಂದಿನ ಚುನಾವಣೆಗಳಲ್ಲಿ ... ಅಭ್ಯರ್ಥಿ ಪರ ಪ್ರಚಾರಕ್ಕಿಳಿದವರು, ಶೋಷಿತ ... ಮುಖಂಡರು, ಜಾತಿ ನೇತಾರರು; ಹೀಗೆ ಒಂದಲ್ಲ ... ಕಾರಣಕ್ಕೆ ಅವಕಾಶದ ಬಾಗಿಲು ಬಡಿಯುತ್ತಿರುವವ... ಏಕಕಾಲಕ್ಕೆ ಸಂತೃಪ್ತಿ ಪಡಿಸುವುದೆಂದರೆ ಅದು ಜೇನು... ಕೈಯಿಟ್ಟಂತೆಯೆ.

### ಪರಮೇಶ್ವರ್ ಕಾಟ

ಇಂಥಾ ತಲೆನೋವನ್ನು ಲೆಕ್ಕ ಹಾಕಿಯೇ ಸಿ... ನಿಗಮ ಮಂಡಳಿಗಳ ಉಸಾಬರಿಯನ್ನು ಹೈಕ... ವರಿಷ್ಠ ದಿಗ್ವಿಜಯ್ ಹೆಗಲಿಗೆ ಹೊರಿಸಿದ್ದಾರೆ. ಹ...

## ಜನರ ಮೇಯರ್ ರಾಮಚಂದ್ರಪ್ಪ, ಸರತಿ ಸಾಲಲ್ಲಿ ಹುಚ್ಚಪ್ಪ!

**ಮಂ**ಡಳಿಗಳ ಅಧ್ಯಕ್ಷಗಾದಿಯ ಆಕಾಂಕ್ಷಿಗಳ ಪೈಕಿ ಮಂಚೂಣಿಯಲ್ಲಿರುವುದು ಬೆಂಗಳೂರಿನ ಮೂವರು ಮೇಯರ್‌ಗಳು. ಸದ್ಯ ಪ್ರದೇಶ ಕಾಂಗ್ರೆಸ್ ಸಮಿತಿಯ ಪ್ರಧಾನ ಕಾರ್ಯದರ್ಶಿ ರಾಮಚಂದ್ರಪ್ಪ ಈ ಹಿಂದೆ ಬೆಂಗಳೂರಿನ ಮೇಯರ್ ಆಗಿದ್ದವರು. ವರ್ಷದ ಮಟ್ಟಿಗೆ ಮೇಯರಾಗಿದ್ದರೂ ರಾಮಚಂದ್ರಪ್ಪನವರನ್ನು ಮಾಧ್ಯಮಗಳು 'ಜನರ ಮೇಯರ್' ಎಂದೇ ಕರೆಯುತ್ತಿದ್ದವು. ಮೂಲತಃ ಕನ್ನಡ ಚಳವಳಿಯಿಂದ ಬಂದ ಕಾರಣಕ್ಕೋ ಏನೋ ಕಳೆದ ಬಾರಿಯೇ ಎಮ್ಮೆಲ್ಸಿಯಾಗಬೇಕಿತ್ತು, ಆದರೆ ಅದನ್ನು ಹೆಚ್.ಎಂ. ರೇವಣ್ಣನವರಿಗೆ ಬಿಟ್ಟುಕೊಟ್ಟರು. ಅದೇ ತ್ಯಾಗದ ಕಾರಣಕ್ಕೆ ಸಿದ್ದು ಈಗ ಪ್ರತಿಷ್ಠಿತ ನಿಗಮವೊಂದಕ್ಕೆ ನೇಮಿಸ ಬಯಸಿದ್ದಾರೆ.


ಹೆಚ್ಚೂ ಕಮ್ಮಿ ಇದೇ ಜಾಯಮಾನದ ಹುಚ್ಚಪ್ಪ ಸದ್ಯ ಕೆಪಿಸಿಸಿ ಕಾರ್ಯದರ್ಶಿ. ಈ ಹಿಂದೆ ಬೆಂಗಳೂರಿನ ಮೇಯರಾಗಿದ್ದರು. ಕಳೆದ ಬಾರಿಯೇ ರಾಜಾಜಿನಗರದ ಕಾಂಗ್ರೆಸ್ ಅಭ್ಯರ್ಥಿಯಾಗಬೇಕಿತ್ತು. ಅದು ತಪ್ಪಿದ್ದಕ್ಕೋ ಏನೋ ಈಗ ನಿಗಮ ಮಂಡಳಿಯ ಅವಕಾಶ ಕಾದು ಕೂತಿದೆ. ಪಿ.ಆರ್. ರಮೇಶ್ ಇದೇ ಸಾಲಿಗೆ ಸೇರಬಲ್ಲ ಮತ್ತೊಬ್ಬ ಮಾಜಿ ಮೇಯರ್. ಮುಮ್ತಾಜ್‌ಬೇಗಂ ಎಂಬ ಮತ್ತೊಬ್ಬ ಮಾಜಿ ಮೇಯರ್‌ಗೂ ನಿಗಮ ಮಂಡಳಿ ಅಧ್ಯಕ್ಷತೆಯ ಯೋಗವಿರಬೇಕು. ಇವರ ಪರವಾಗಿ ಜಾಫರ್ ಷರೀಫ್ ಲಾಬಿಗಿಳಿದಿದ್ದಾರೆ.

ಮಾಜಿ ನಟ ಮತ್ತು ಮಾಜಿ ಶಾಸಕ ಬಿ.ಸಿ. ಪಾಟೀಲ್, ಯಶವಂತಪುರದ ಹಾಲಿ ಶಾಸಕ ಎಸ್.ಟಿ. ಸೋಮಶೇಖರ್, ಕೆಪಿಸಿಸಿ ಕಾರ್ಯದರ್ಶಿ ವೆಂಕಟೇಶ್ವರಲು, ಮಂತ್ರಿ ಹೆಚ್.ಕೆ. ಪಾಟೀಲರ ತಮ್ಮ, ಮಹಿಳಾ ಕಾಂಗ್ರೆಸ್ ಮಾಜಿ ಅಧ್ಯಕ್ಷೆ ರಾಣಿ ಸತೀಶ್, ಮೋಟಮ್ಮ, ಕೊಂಡಜ್ಜಿ ಮೋಹನ್ ಇತ್ಯಾದಿ ಕಾಂಗ್ರೆಸ್ ನಾಯಕರೆಲ್ಲ ಮಂಡಳಿಗಳ ಪಟ್ಟಿಯಲ್ಲಿ ಇದ್ದಾರೆ. ಬಿ.ಸಿ. ಪಾಟೀಲ್‌ಗೆ ಕಳೆದ ಬಾರಿ ಕಾಂಗ್ರೆಸ್ ಟಿಕೆಟ್ ಸಿಕ್ಕಿತ್ತು, ಗೆಲ್ಲಲಾಗದ ಮೇಲೆ ಈಗ ಅಧ್ಯಕ್ಷಗಿರಿಗೆ ಪಟ್ಟು ಹಿಡಿದಿದ್ದಾರೆ. ಅದನ್ನು ಯಾರು ತಾನೇ ಒಪ್ಪಲು ಸಾಧ್ಯ? ಎಸ್.ಟಿ. ಸೋಮಶೇಖರ್ ಹಾಲಿ ಶಾಸಕರಾಗಿಯೂ ನಿಗಮದ ಪದವಿಗೆ ಪಟ್ಟು ಹಿಡಿದಿದ್ದಾರಂತೆ. ರಾಜಾಜಿನಗರದ ಮಾಜಿ ಶಾಸಕ ನೆ.ಲ. ನರೇಂದ್ರಬಾಬು ತನಗೂ ಮಂಡಳಿ ಬೇಕೆಂದು ಹಟಕ್ಕೆ ಬಿದ್ದಿದ್ದಾರಂತೆ. ಇದೇ ಮೊಂಡು ಪಟ್ಟನ್ನು ಸಿ.ವಿ. ರಾಮನ್ ನಗರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸೋತಿದ್ದ ರಮೇಶ್ ಕೂಡ ಹಾಕತೊಡಗಿದ್ದಾರೆ.

ಎಲ್ಲರಿಗೂ ಒಂದಲ್ಲ ಒಂದು ಅಧಿಕಾರ ಬೇಕು. ಆದರೆ ಯಾರೇ ನಾಯಕರು ಗಾಡ್‌ಫಾದರ್‌ಗಳಿಗೆ ಮಸ್ಕಾ ಹೊಡೆಯದೆ ತಮ್ಮ ಪಾಡಿಗೆ ನಿಷ್ಠಾವಂತ ಕಾಂಗ್ರೆಸ್ ಕಾರ್ಯಕರ್ತರಾಗಿದ್ದುಕೊಂಡೇ ಜೀವನ ಪರ್ಯಂತ ಹೆಣಗಾಡಿದ ಪ್ರಾಮಾಣಿಕ ಕಾರ್ಯಕರ್ತರ ಪಾಲಿಗೆ ಯಾರೂ ಇಲ್ಲ, ಏಕೆಂದರೆ ಅವರಿಗೆ ಬಲಾಢ್ಯ ನಾಯಕರ ನೆರಳಿಲ್ಲ, ದುಡ್ಡೂ ಇಲ್ಲ.


ರಮೇಶ್-ಹುಚ್ಚಪ್ಪ-ರಾಮಚಂದ್ರಪ್ಪ

## ಬಿ.ಕೆ. ಹರಿಪ್ರಸಾದ್‌ರ 'ಅಹಿಂದ' ಪಟ್...




**ಬಿ**ಜೆಪಿ ಆಳ್ವಿಕೆಯುದ್ದಕ್ಕೂ ಯಡ್ಡಿಯನ್ನು ಮುಂದಿಟ್ಟುಕೊಂಡೇ ಲಿಂಗಾ... ರಾಜಕೀಯ ಅಧಿಕಾರ ಹಿಡಿದಂತೆ ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿ... ಕಾಲ ಒಕ್ಕಲಿಗರದ್ದೇ ಪಾರುಪತ್ಯೆಯಿತ್ತಲ್ಲವೆ? ಈಗದು 'ಅಹಿಂದ' ... ಪಾಲಿಗೆ ಸುವರ್ಣಯುಗವಾಗಲೇಬೇಕೆಂಬುದು ಸಿ.ಎಂ. ಸಿದ್ದು ಬಯಕೆ...

ಹೇಳಹೆಸರಿಲ್ಲದ, ಸಂಖ್ಯಾ ಬಲವಿಲ್ಲದ ಸಣ್ಣಪುಟ್ಟ ಜಾತಿಗಳಿಗೆ ... ಮಂಡಳಿಗಳ ಅಧಿಕಾರ ವಹಿಸಲೇಬೇಕೆಂಬ ಸಿದ್ದು ಹಟಕ್ಕೆ ಕೈಜೋಡಿಸಿದ... ಒಬ್ಬ ಕಾಂಗ್ರೆಸ್ ವರಿಷ್ಠರೆಂದರೆ ಅದು ಬಿ.ಕೆ. ಹರಿಪ್ರಸಾದ್!

ನಿಗಮ ಮಂಡಳಿಗಳ ಅಧ್ಯಕ್ಷತೆಗೆಂದು ಪರಮೇಶ್ವರ್ ತಯಾರಿಸಿರುವ ... ಮಾಸ್ಟರುಗಳ ಪಟ್ಟಿ, ಟಿ.ಬಿ. ಜಯಚಂದ್ರರ ಒಕ್ಕಲಿಗ ನಾಯಕರ ಪಟ್ಟಿ, ... ಆಣತಿಗೆ ತಯಾರಾದ ಇನ್ನೊಂದು ಪಟ್ಟಿ, ಶಾಮನೂರು ದಣಿಗಳ ... ಪಟ್ಟಿ ಇತ್ಯಾದಿ ಪಟ್ಟಿಗಳಿಗಿಂತ ಮುಖ್ಯಮಂತ್ರಿ ಸಿದ್ದರಾಮಯ್ಯ... ಮುಂದಿಡುತ್ತಿರುವುದು ಬಿ.ಕೆ. ಹರಿಪ್ರಸಾದ್‌ರ ಪಟ್ಟಿಯನ್ನೇ!

ದಲಿತರು, ಕೆಳಜಾತಿಗಳು, ಮುಸ್ಲಿಮರೇ ಪ್ರಾಶಸ್ತ್ಯ ಗಳಿಸಿರುವ ಈ ಪಟ್ಟಿಯನ್ನು ಸಿದ್ದು ಮತ್ತು ಬಿ.ಕೆ. ಹರಿ... ಜಂಟಿಯಾಗಿ ರೂಪಿಸಿದ್ದಾರಂತೆ. ಜ್ಞಾನಪೀಠ ಪ್ರಶಸ್ತಿ ವಿಜೇತ ಕಂಬಾರರು, ಬರಗೂರು ರಾಮಚಂದ್ರಪ್ಪ, ... ಸಿದ್ದರಾಮಯ್ಯ, ದಲಿತ ನಾಯಕ ಮಾವಳ್ಳಿ ಶಂಕರ್ ಮಾತ್ರವಲ್ಲದೆ ಈಡಿಗ, ಕುರುಬ, ಬೆಸ್ತ, ವಾಲ್ಮೀಕಿ, ... ಗಾಣಿಗ, ಕುಂಬಾರ ಇತ್ಯಾದಿ ಅಹಿಂದ ವರ್ಗದ ಅಧಿಕಾರ ವಂಚಿತರದ್ದೇ ಹೆಸರುಗಳಿಂದ ತುಂಬಿದ ಈ ಪ... ಸಿದ್ದು ತನ್ನ ಅಧಿಕೃತ ಪಟ್ಟಿಯೆಂದು ಹೇಳಿಕೊಂಡಿದ್ದಾರಂತೆ.

ಅಂದರೆ ನೇರವಾಗಿ ತಾನೇ ಹೇಳುವ ಬದಲು ಅದನ್ನು ಬಿ.ಕೆ. ಹರಿಪ್ರಸಾದ್‌ರ ಬಾಯಿಂದ ಹೇ... ಹೈಕಮಾಂಡ್ ಬೆಂಬಲವೂ ಸಿಕ್ಕಿದಂತಾಯ್ತು; ಬೇರೆಲ್ಲ ನಾಯಕರ ಬಾಯನ್ನೂ ಮುಚ್ಚಿಸಿದಂತಾಯ್ತು, ಇದು ... ಕಾರ್ಯತಂತ್ರ.


ದಿಗ್ವಿಜಯ್ ಸಿಂಗ್

ಜಯ್ ಏಕಾಏಕಿ ತಾನೇ ನಿರ್ಧರಿಸುವಂತೆಯೂ ಇಲ್ಲ. ರ್ನಾಟಕದ ಪಾರುಪತ್ಯೆಯ ವಿಷಯದಲ್ಲಿ ಜಯ್‌ಗಿಂತಲೂ ಉದ್ದ ಕೈಯುಳ್ಳ ಆಸ್ಕರ್, ಮೊಯ್ಲಿ, ಮುನಿಯಪ್ಪ ರೆಹಮಾನ್ ಖಾನ್ ಇತ್ಯಾದಿ ಕೇಂದ್ರ ಟ್ಟದ ನಾಯಕರದ್ದೇ ಪ್ರತ್ಯೇಕ ಹಿತಾಸಕ್ತಿಗಳಿವೆ. ಇಲ್ಲಿ ರೊಬ್ಬರಿಗೆ ನಿರಾಶೆಯಾದರೂ ಅಂತಿಮವಾಗಿ ಅದಕ್ಕೆ ಕೊಡಬೇಕಿರುವುದು ಮುಖ್ಯಮಂತ್ರಿ ಸಿದ್ದುವೆ.

ಹೀಗಾಗಿ ಯಾರೊಬ್ಬರನ್ನೂ ಬಿಡದೆ ಎಲ್ಲರನ್ನೂ ಸಬೇಕಾದ ಅನಿವಾರ್ಯತೆಗೆ ಸಿಎಂ ಸಿದ್ದು ಬಂದಂತಿದೆ. ದರೆ ಇದೆಲ್ಲಕ್ಕಿಂತಲೂ ದೊಡ್ಡ ತಲೆನೋವಾಗಿ ಮಿಸಿರುವುದು ರಾಜ್ಯ ಕಾಂಗ್ರೆಸ್ ಅಧ್ಯಕ್ಷ ಪರಮೇಶ್ವರ್ ವರ ಅನುಯಾಯಿಗಳು. ಆಸ್ಟ್ರೇಲಿಯಾ ಪ್ರಕಾಶ್ ಎಂಬ ಮೇಶ್ವರ್ ಖಾಸಾ ವ್ಯವಹಾರಗಳ ಮ್ಯಾನೇಜರ್, ಜಿ.ಸಿ. ದ್ರಶೇಖರ್ ಎಂಬ ಪರಮೇಶ್ವರ್ ಚೇಲಾ, ಡಾಕ್ಟರ್ ನ್ ಆನಂದಕುಮಾರ್, ಎ.ಸಿ. ಶ್ರೀನಿವಾಸ್ ಎಂಬ ಯಲ್ ಎಸ್ಟೇಟ್ ಕುಳ; ಹೀಗೆ ಪರಮೇಶ್ವರ್ ಯಾಯಿಗಳದ್ದೇ ಪ್ರತ್ಯೇಕ ಪಡೆಯಿದೆ. ಪರಮೇಶ್ವರ್ ಬೇಡಗಳ ಡೆಲಿವರಿ ಬಾಯ್‌ಗಳಂತಿರುವ ಇವರ್‍ಯಾರು ಕ್ಕಾಗಿ ದುಡಿದವರಲ್ಲ ಅಥವಾ ನಿಷ್ಠಾವಂತ ಕಾಂಗ್ರೆಸ್ ರ್ಯಕರ್ತರೂ ಅಲ್ಲ.

ರಾಜ್ಯ ಕಾಂಗ್ರೆಸ್ ಅಧ್ಯಕ್ಷ ಗಾದಿಗೆ ಬರುತ್ತಿದ್ದಂತೆಯೇ ಸಿಸಿ ಪದಾಧಿಕಾರಿಗಳಾಗಿ ಪರಮೇಶ್ವರ್ ತಂದ ಇಂಥವರೆಲ್ಲ ಮಪಾಲು ರಿಯಲ್ ಎಸ್ಟೇಟ್ ಕುಳಗಳು ಅಥವಾ ಸ್ ಮಾಸ್ತರುಗಳೆ. ಕಾಂಗ್ರೆಸ್‌ಗೆ ಅಧಿಕಾರವಿಲ್ಲವೆಂದರೆ ವರ್‍ಯಾರೂ ಅಡ್ರೆಸ್ಸಿಗಿರುವುದಿಲ್ಲ. ಪರಮೇಶ್ವರ್ ಧ್ಯಕ್ಷರಾಗುವುದಕ್ಕೂ ಮುನ್ನ ಇವರೆಲ್ಲ ಎಲ್ಲಿದ್ದರು ಏನಾಗಿದ್ದರು ಯಾರಿಗೂ ಗೊತ್ತಿಲ್ಲ. ಈಗ ಇಂಥವರನ್ನೇ ಮ್ಮು ನಿಗಮ ಮಂಡಳಿಗಳಿಗೆ ಗಂಟು ಹಾಕುವುದು ರಮೇಶ್ವರ್ ದುರಾಶೆ. ಅಸಲಿಗೆ ನಿಗಮ ಮಂಡಳಿಗಳಿಗೆ ಕಾರದ ಹೊಗೆಯೆಬ್ಬಿಸಿದ್ದೂ ಅವರೇ.

ಮುಂಬರುವ ಜಿಲ್ಲಾ ಪಂಚಾಯಿತಿ, ಗ್ರಾಮ ಚಾಯಿತಿ ಚುನಾವಣೆಗಳ ನಂತರವೇ ನಿಗಮ ಮಂಡಳಿಗಳ ಯಕ್ಕೆ ಕೈ ಹಾಕುವುದು ಸಿದ್ದು ಉದ್ದೇಶವಾಗಿತ್ತು. ಹೊತ್ತಿಗೆ ಬೃಹತ್ ಬೆಂಗಳೂರು ಮಹಾನಗರ ಕೆ ಚುನಾವಣೆಯೂ ಬರುತ್ತದೆ. ಜೊತೆಗೆ ಕರ್ನಾಟಕದ ರೆ ಬೇರೆ ನಗರಪಾಲಿಕೆಗಳು, ಮುನ್ಸಿಪಾಲಿಟಿಗಳ ನಾವಣೆ ಎಲ್ಲವನ್ನೂ ನೋಡಿಕೊಂಡೇ ನಿಗಮಾಧಿಕಾರದ ಪ ಮಾಡುವ ದೂರದೃಷ್ಟಿಯಲ್ಲೇ ಸಿದ್ದು ಕಾರ್ಯತಂತ್ರ ಪಿಸಿದ್ದರು. ಆಗ ಕೌನ್ಸಿಲರ್‌ಗಳಾಗಿ, ಪಂಚಾಯ್ತಿ ಸ್ಯರಾಗಿ, ಜಿಲ್ಲಾ ಪಂಚಾಯ್ತಿ ಸದಸ್ಯರಾಗಿ ಅನೇಕ ಸ್ಥಾನಗಳು ಬಿಡವೆಂದರೆ ಅಧಿಕಾರಾಕಾಂಕ್ಷಿಗಳ ಸಂಖ್ಯೆಯೂ ಮಾಗುತ್ತದೆ. ಆ ನಂತರವೇ ನಿಗಮ-ಮಂಡಳಿಗಳನ್ನು ಬುವ ಸಿದ್ದು ಲೆಕ್ಕಾಚಾರಕ್ಕೆ ಬೇರೆಯದೇ ಕಾರಣವೂ ಲ್ಲ.

### ಬೊಕ್ಕಸಕ್ಕೆ ಹೊರೆ

ಅದು ಬೊಕ್ಕಸದ ಆರ್ಥಿಕ ಹೊರೆ. ಎಷ್ಟೊತ್ತಕ್ಕೂ ಅಧಿಕ ಮ ಮಂಡಳಿಗಳ ಪೈಕಿ ಬೆರಳೆಣಿಕೆಯಷ್ಟನ್ನು ಹೊರತುಪಡಿಸಿದರೆ ಮಿಕ್ಕೆಲ್ಲವೂ ಅನುತ್ಪಾದಕ ಆದಾಯದ ಳೆ. ಹಟ್ಟಿ ಚಿನ್ನದ ಗಣಿ ನಿಗಮ, ಮೈಸೂರು ಹಾನೀಯ ನಿಗಮ, ಜಲಮಂಡಳಿ, ಕೆಎಸ್ಆರ್ಟಿಸಿ, ಮತ್ತು ಮಾರ್ಜಕ ಕಾರ್ಖಾನೆ, ಬಿಡಿಎ, ಮುಡಾ ಗಳನ್ನು ಹೊರತುಪಡಿಸಿದರೆ ಬೇರೆಲ್ಲವೂ ನಷ್ಟದ ಗಳೆ. ಬೀಜ ನಿಗಮ, ಕೋಳಿ ಮತ್ತು ಮಾಂಸ ಮಂಡಳಿ, ಸುಗಂಧ ದ್ರವ್ಯ ಮಂಡಳಿ, ಪರಿಶಿಷ್ಟ ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮ, ಹಿಂದುಳಿದ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಮಂಡಳಿ,

ಮೀನುಗಾರಿಕೆ ಅಭಿವೃದ್ಧಿ ನಿಗಮ, ಕೆರೆ ಅಭಿವೃದ್ಧಿ ನಿಗಮ, ರಸ್ತೆ ಅಭಿವೃದ್ಧಿ ನಿಗಮ ಇತ್ಯಾದಿಗಳೆಲ್ಲ ಕೇವಲ ನಾಮಕಾವಸ್ಥೆಯ ರಾಜ್ಯ ಬೊಕ್ಕಸಕ್ಕೆ ಹೊರೆ ಮಾತ್ರವೆನಿಸುವಂಥ ಸಂಸ್ಥೆಗಳೆ.

ಇಂಥ ನಿಗಮ ಮಂಡಳಿಗಳಿಗೆ ಒಮ್ಮೆ ಅಧ್ಯಕ್ಷರಾದಿಗೋ, ನಿರ್ದೇಶಕರೆಂದೋ ಯಾರನ್ನಾದರೂ ಸರ್ಕಾರ ನೇಮಿಸಿತೆಂದರೆ ಅಲ್ಲಿಂದಾಚೆಗೆ ಆಟೋ ಮೀಟರಿನಂತೆ ಬೊಕ್ಕಸದ ಖರ್ಚು ವೆಚ್ಚವೂ ಏರತೊಡಗುತ್ತದೆ. ಮಾಮೂಲಿ ನಿರ್ದೇಶಕನೊಬ್ಬನಿಗೆ ಪ್ರತಿ ಮೀಟಿಂಗಿಗೆಂದು ಪ್ರಯಾಣ ಭತ್ಯೆ, ಮೀಟಿಂಗಿನಲ್ಲಿ ಕಾಫಿ ತಿಂಡಿಯ ಖರ್ಚು, ಉಳಿದುಕೊಳ್ಳಲು ಲಾಡ್ಜಿಂಗಿನ ಬಿಲ್ಲು, ಟೆಲಿಫೋನ್ ಬಿಲ್ಲು ಎಂದೆಲ್ಲ ತಿಂಗಳೊಂದಕ್ಕೆ ಅದೇ ಸಾವಿರಾರು ರೂಪಾಯಿಗಳ ಲೆಕ್ಕವಾಗುತ್ತದೆ. ಇನ್ನು ನಿಗಮ ಮಂಡಳಿಯ ಅಧ್ಯಕ್ಷನ ಖರ್ಚೆದೆಯಲ್ಲ ಅದು ಬಿಳಿಯಾನೆಗಿಂತಲೂ ಭಯಾನಕ ವೆಚ್ಚ, ಅಧ್ಯಕ್ಷನಿಗೆಂದೇ ಪ್ರತ್ಯೇಕ ಕಾರು ಕೊಡಬೇಕು. ಅದಕ್ಕೆ ಪ್ರತಿನಿತ್ಯ ಪೆಟ್ರೋಲು, ಅದಕ್ಕೊಬ್ಬ ಡ್ರೈವರ್, ಆತನ ಸಂಬಳ, ಕಾರಿನ ರಿಪೇರಿ, ಅಧ್ಯಕ್ಷನಿಗೆಂದೇ ಪ್ರತ್ಯೇಕ ಬಂಗಲೆ, ಅದರ ಬಾಡಿಗೆ, ಪೀಠೋಪಕರಣ, ಮನೆ ಕೆಲಸಗಾರರ ಸಂಬಳ, ವಿದ್ಯುತ್ ಬಿಲ್ಲು, ನೀರಿನ ಬಿಲ್ಲು, ಅಧ್ಯಕ್ಷನ ಟೆಲಿಫೋನ್ ಬಿಲ್ಲು, ಬಂದ ಅತಿಥಿಗಳ ಕಾಫಿ-ಟೀ ಖರ್ಚು, ಸಂಬಳ ಎಂದೆಲ್ಲ ಲೆಕ್ಕ ಹಾಕ ಹೊರಟರೆ ಇಡೀ ನಿಗಮವೊಂದರ ಅರ್ಧ ಬಜೆಟ್ಟನ್ನೇ ಅಧ್ಯಕ್ಷನಿಗಾಗಿ ಮೀಸಲಿಡಬೇಕಾಗುತ್ತದೆ.

ತಿಂಗಳೊಂದಕ್ಕೆ ಈ ರೀತಿ ನಿಗಮ ಮಂಡಳಿಗಳ ಅಧ್ಯಕ್ಷರು, ಅವರ ಮನೆ ಬಾಡಿಗೆ, ಕಾರು, ಸಂಬಳ ಎಂದು ರಾಜ್ಯ ಬೊಕ್ಕಸಕ್ಕೆ ಬರುವ ಹೊರೆಯೇ ಇನ್ನೂರು ಕೋಟಿಗೂ ಅಧಿಕ. ಈಗಾಗಲೇ ಈ ನಿಗಮ ಮಂಡಳಿಗಳದ್ದೇ ಕೆಲಸ ಮಾಡಲು ಆಯಾ ಇಲಾಖೆಗಳಿರುವಾಗ ಕೇವಲ ರಾಜಕೀಯದ ಅಧಿಕಾರದ ಕಾರಣಕ್ಕೆ ಸರ್ಕಾರವೊಂದು ಈ ಪಾಟ ಹೊರೆ ಹೊರುವುದು ಕೇವಲ ಮೂರ್ಖತನವಾಗಷ್ಟೇ ಕಾಣಿಸುತ್ತದೆ. ವರ್ಷವೊಂದಕ್ಕೆ ಈ ರೀತಿ ಸಾವಿರ ಕೋಟಿಯ ಹೊರೆ ಹೊತ್ತು ಸರ್ಕಾರವೊಂದು ಸಾಧಿಸುವುದಾದರೂ ಏನೆಂಬ ಪ್ರಶ್ನೆಗೂ ಉತ್ತರ ಸೊನ್ನೆಯೆ!

### ಹತಾಶ ತಂತ್ರ?

ಯಾವುದೇ ಸರ್ಕಾರ ಅಧಿಕಾರಕ್ಕೆ ಬಂದರೂ ನಿಗಮ ಮಂಡಳಿಗಳ ವಿಷಯವನ್ನು ಮುಂದೂಡಿಕೊಂಡೇ ಚುನಾವಣೆಗಿನ್ನೂ ವರ್ಷವೋ ಒಂದೂವರೆ ವರ್ಷವೋ ಇರುವಾಗಲಷ್ಟೇ ನೇಮಕಾತಿಗಿಳಿಯುತ್ತದೆ. ಹಿಂದಿದ್ದ ಬಿಜೆಪಿ, ಅದಕ್ಕೂ ಮುನ್ನ ಕುಮಾರಸ್ವಾಮಿ, ಅದಕ್ಕಿಂತಲೂ ಹಿಂದಿದ್ದ ಎಸ್.ಎಂ. ಕೃಷ್ಣರ ಸರ್ಕಾರಗಳೆಲ್ಲ ಪ್ರಾರಂಭದ ಎರಡೂವರೆ ವರ್ಷಗಳ ತನಕ ನಿಗಮ ಮಂಡಳಿಗಳ ಬಗ್ಗೆ ಚಕಾರವನ್ನೇ ಎತ್ತಿರಲಿಲ್ಲ, ಆದರೆ ಈಗ ವರ್ಷದ ಹೊಸ್ತಿಲಲ್ಲೇ ನಿಗಮ ಮಂಡಳಿಗಳ ನೇಮಕಾತಿಯ ಬೊಬ್ಬೆಯೆದ್ದಿದೆ. ದಿಗ್ವಿಜಯ್ ಸಿಂಗ್ ಬೆಂಗಳೂರಿಗೆ ಕಾಲಿಡುತ್ತಿದ್ದಂತೆಯೇ ನಿರ್ದಿಷ್ಟ ಟೀವಿ ವರದಿಗಾರರ ಗುಂಪೊಂದು ಈ ಬಗ್ಗೆ ಪ್ರಶ್ನೆಗಳ ಮೇಲೆ ಪ್ರಶ್ನೆ ಹಾಕುತ್ತದೆ. ಪತ್ರಿಕೆಗಳಲ್ಲೂ ಇದೇ ಪ್ರಮುಖ ಸುದ್ದಿಯಾಗಿ ರಾರಾಜಿಸುತ್ತದೆ.

ಅಷ್ಟಕ್ಕೂ ನಿಗಮ ಮಂಡಳಿಗಳಿಗೆ ನೇಮಿಸುವಂತೆ ಒತ್ತಾಯಿಸಿ ಕಾಂಗ್ರೆಸ್ ಕಾರ್ಯಕರ್ತರ್‍ಯಾರೂ ಬೀದಿಗಿಳಿದಿಲ್ಲ. ಒಂದಷ್ಟು ಶಾಸಕರು ಮತ್ತು ಸೋತ ಅಭ್ಯರ್ಥಿಗಳು ನಿಗಮಗಳಿಗಾಗಿ ಒತ್ತಾಯ ಹೇರಿದ್ದು ಬಿಟ್ಟರೆ ಪಕ್ಷದ ಮಟ್ಟದಲ್ಲಿ ಈ ಬಗ್ಗೆ ನಿರ್ಲಿಪ್ತ ಧೋರಣೆಯೇ ಇದೆ. ವಿಶೇಷವಾಗಿ ಕೆಪಿಸಿಸಿ ಅಧ್ಯಕ್ಷ ಪರಮೇಶ್ವರ್ ವಲಯದಿಂದಲೇ ಇದು ಹೊಗೆಯಾಡುತ್ತಿದೆಯೆಂದರೆ ಏನರ್ಥ?

ಅಂದರೆ ಇದರ ಹಿಂದಿರುವುದು ಪರಮೇಶ್ವರ್ ಹತಾಶೆ ಮತ್ತು ಅಧಿಕಾರ ದಾಹ. ಒಂದು ಮೂಲದ ಪ್ರಕಾರ ನಿಗಮ ಮಂಡಳಿಗಳ ನೇಮಕಾತಿ ವಿಷಯವನ್ನು ಪ್ರಸ್ತಾಪಿಸಲೆಂದೇ ಕೆಲ ಆಯ್ದ ಪತ್ರಕರ್ತರಿಗೆ ಪರಮೇಶ್ವರ್ ಬಳಗದಿಂದ ಭಕ್ಷೀಸುಗಳೂ ರವಾನೆಯಾಗುತ್ತಿವೆಯಂತೆ.


ಬಹುಶಃ ಇದು ಗೊತ್ತಾಗಿಯೋ ಇರಬೇಕು ಮುಖ್ಯಮಂತ್ರಿ ಸಿದ್ದು ಬಾಯಿಂದ ಬರಬೇಕಾಗಿದ್ದೆಲ್ಲ ಕಾಂಗ್ರೆಸ್ ವರಿಷ್ಠ ದಿಗ್ವಿಜಯ್ ಸಿಂಗ್ ಬಾಯಿಂದ ಬರುತ್ತಿದೆ. ಮೊದಲು ಶಾಸಕರಿಗೆ ನಿಗಮ ಸ್ಥಾನವಿಲ್ಲ ಎಂದರು. ಆನಂತರ ಸೋತವರಿಗೆ ಇಲ್ಲ ಎಂದರು. ಈಗ ಪಕ್ಷದ ಪದಾಧಿಕಾರಿಗಳಿಗೂ ಇಲ್ಲ ಎನ್ನುತ್ತಿದ್ದಾರೆ. ಹೀಗೆ ಮುಂದುವರಿದು ಇದು ಜಿಲ್ಲಾ ಪಂಚಾಯ್ತಿ ಚುನಾವಣೆಯ ನಂತರವೇ ಎಂಬ ನಿರ್ಧಾರಕ್ಕೆ ಬಂತೆಂದರೆ ಅಲ್ಲಿಗೆ ನಿಗಮ ಮಂಡಳಿಗಳ ಪುಕಾರೇ ತಣ್ಣಗಾಗುತ್ತದೆ.

ಸಿದ್ದರಾಮಯ್ಯನವರ ವರ್ತನೆ ಮತ್ತು ಹೇಳಿಕೆಗಳನ್ನೇ ಅಂದಾಜು ಮಾಡುವುದಾದರೆ ಏನೇ ಪಟ್ಟು, ಲಿಸ್ಟು ಎಂದೆಲ್ಲ ಯಾರೇ ಬೊಬ್ಬೆ ಹೊಡೆದರೂ ಸದ್ಯಕ್ಕಂತೂ ಅದೊಂದು ಊಹಾಪೋಹವೇ ಹೊರತು ವಾಸ್ತವವೂ ಅಲ್ಲ ಅಂಥಾ ಅನಿವಾರ್ಯತೆಯೂ ಇಲ್ಲ.

● ರಾ. ಸೋಮನಾಥ್

# ನಾವು ಪಕ್ಷ ಹೇಳಿದಾಗ ಪ್ರತಿಭಟಿಸೋ ಮಹಿಳೆಯರು

ತೀರ್ಥಹಳ್ಳಿಯಲ್ಲಿ ಮುಗ್ಧ ಹೆಣ್ಣು ಮಗುವಿನ ದಾರುಣ ಸಾವನ್ನು ಸಾಬರ ತಲೆಗೆ ಕಟ್ಟಲು ಚಡ್ಡಿ ಪಡೆ ಯತ್ನಿಸುತ್ತ ಮದರಸಾಗೆ ಬೆಂಕಿ ಇಡಲು ಯತ್ನಿಸುತ್ತಿರುವಾಗಲೇ ಅಬ್ದುಲ್ ಅಜೀಂ ಎಂಬ ಮಾಜಿ ಪೊಲೀಸ್ ಪೇದೆ ಬೆಂಗಳೂರಿನ ಬಿಜೆಪಿ ಕಚೇರಿಗೆ ನುಗ್ಗಿ ಮೋದಿಯನ್ನು ಹಿಗ್ಗಾಮುಗ್ಗಾ ಹೊಗಳಿದನಂತಲ್ಲಾ. ಇದರಿಂದ ತಬ್ಬಿಬ್ಬಾದ ಶೆಟ್ಟರ್, ಸೋಮಣ್ಣ, ಜೋಶಿ, ಎಡೂರ್ ದಂಪತಿಗಳು ಅಜೀಮನನ್ನು ಅಪ್ಪಿಕೊಂಡು, ಕಮಲ ಚಿತ್ರದ ಬಟ್ಟೆ ತೊಡಿಸಿದವಂತಲ್ಲಾ.



ಇದರಿಂದ ಇನ್ನೂ ಪುಳಕಿತನಾದ ಅಜೀಂ "ನೋಡಿ ಶಾರ್, ನಮ್ದು ಮೋದಿ ಇದಾರಲ್ಲ, ಅವರು ಮುಸ್ಲಿಂಗೆ ವಿರೋಧಿ ಅಲ್ಲ, ರಿಯಲಿ ಅವರು ಮುಸ್ಲಿಂಗೆ ಫ್ರೆಂಡ್. ಈ ಹಾಳು ಕಾಂಗ್ರೆಸ್‌ಗಳು ದುಶ್‌ಮನ್. ಅವ್ರುದ್ದು ಜೊತೆ ಇದ್ರೆ ಸಾಬರದು ಕತೆ ಕತಂ ಆಗ್ತದೆ ಅಂತ ನನ್ಗೆ ಗೊತ್ತು. ಅದ್ಕೆ ಮೋದಿದು ಪಾರ್ಟಿಗೆ ಬಂದೆ. ನಮ್ದು ಹಿಂದೂಸ್ತಾನ್‌ಗೆ ಭಕ್ತ ಅಂದ್ರೆ ಮೋದಿ. ಗುಜರಾತಲ್ಲಿ ಅವ್ರು ಸಾಬರ್‌ಗೆ ಎಷ್ಟು ಚೆನ್ನಾಗಿ ಮಡಿಕೊಂಡವ್ರೆ ಅಂದ್ರೆ, ಅಲ್ಲಿಂದ ಓಡಿಬಂದು ಸಿಟಿ ಮಾರ್ಕೆಟ್ ಹತ್ರ ಕುಳಿತಿರೊ ಮುಸ್ಲಿಂಗೆ ಮಾತಾಡ್ಸಿದ್ರೆ ಗೊತ್ತಾಗ್ತದೆ. ಅಷ್ಟು ಒಳ್ಳೆ ಆದ್ಮಿ ಮೋದಿ. ಮೋದಿನ ಕೋಮುವಾದಿ ಅಂತರಲ್ಲಾ ಈ ಕಾಂಗ್ರೆಸಿಗರು ನಿಜವಾಗ್ಲು ಅವ್ರುರೇ ಕೋಮುವಾದಿಗಳು ಶಾರ್. ಅದ್ಕೆ ಸಾಬರಿಗೆ ಒಲ್ಳೆಕೆ ಮಾಡ್ತಿದ್ರು. ಅವ್ರುರಿಂದ ಸಾಬರಿದು ಕತೆ ಮುಗದೋಗ್ತದೆ ಸಾರ್. ಅದ್ಕೆ ನಾನು ಬಿಜೆಪಿಗೆ ಬಂದಿದ್ದು" ಎಂದು ಭಾಷಣ ಬಿಗಿದು ಹೊರಡುವಾಗ ಶೆಟ್ಟರ್, ಜೋಷಿ, ಸೋಮಣ್ಣ, ಎಡೂರ್ ದಂಪತಿಗಳು ಅದೇನೇನೊ ಕಿವಿಯಲ್ಲಿ ಮಾತನಾಡಿಕೊಂಡರಂತಲ್ಲಾ, ಥೂತ್ತೇರಿ!

* * * *

ಕರ್ನಾಟಕದಲ್ಲಿ ಈವರೆಗೆ ನಿರಂತರವಾಗಿ ಅತ್ಯಾಚಾರಗಳು ನಡೆಯುತ್ತಿದ್ದಾಗ ಬಾಯಿ ಹೊಲಿದುಕೊಂಡಿದ್ದ ಬಿಜೆಪಿಯ ಬಾಯಿಬೇದಿ ಮಹಿಳೆಯರ ಪೈಕಿ ನಿತ್ಯಾನಂದನ ಗೆಳತಿ ಮಾಳವಿಕ ಮತ್ತು ಎಡೂರಪ್ಪನ ಗೆಳತಿ ಶೋಭಾ ಕರಂದ್ಲಾಜೆ ಇವರಿಬ್ಬರಲ್ಲಿ ಯಾರನ್ನಾದರೂ ಮಾತನಾಡಿಸಬೇಕೆನಿಸಿತಲ್ಲಾ. ಈ ಬಗ್ಗೆ ಶೋಭಾ ಕರಂದ್ಲಾಜೆಯೇ ಸೂಕ್ತ ಎನ್ನಿಸಿ ಫೋನ್ ಮಾಡಲಾಗಿ ರಿಂಗಾಯ್ತು,

ರಿಂಗ್ ಟೋನ್: "ದೂರದಿಂದ ಬಂದಂತ ಸುಂದರಾಂಗ ಜಾಣ, ನೋಟದಲ್ಲೇ ಸೂರೆಗೊಂಡ ಅಂತರಂಗ ಪ್ರಾಣ, ಈತನಂತರಾಳದಲ್ಲಿ....."

"ಹಲೋ ಯಾರು?"

"ನಾನು ಮೇಡಂ, ಪತ್ರಕರ್ತ ರಾಜು."

"ಹಿಂದೊಮ್ಮೆ ಕರೆ ಮಾಡಿದ್ರಲ್ಲಾ ನೀವು?"

"ಹೌದು ಮೇಡಂ, ಎಡೂರಪ್ಪನ ಕಾಲ್ದಲ್ಲಿ ಮಾಡಿದ್ದೆ, ಅವ್ರುರ ಕಾಲವೇ ಚೆನ್ನಾಗಿತ್ತು."

"ಹೌದು, ಅವರ ಕಾಲದಲ್ಲಿ ಇಷ್ಟೊಂದು ಅತ್ಯಾಚಾರಗಳು ನಡೆಯಲಿಲ್ಲ, ನಡೆದರೂ ಕಾಂಗ್ರೆಸ್ಸಿಗರು ಪ್ರತಿಭಟಿಸಲಿಲ್ಲ. ನಾವು ಹಾಗೆ ಕೈಕಟ್ಟಿ ಕೂರಲು ಬರುವುದಿಲ್ಲ, ಅಲ್ಲವಾ?"

"ನಿಜ ಮೇಡಂ. ಹೆಣ್ಣುಮಕ್ಕಳಾದ ನೀವು ಹೆಣ್ಣುಮಕ್ಕಳ ಮೇಲಿನ ದೌರ್ಜನ್ಯಗಳನ್ನು ಸಹಿಸಬಾರದು."

"ಅದಕ್ಕೆ ನಾವು ಮುಖ್ಯಮಂತ್ರಿಯ ಮನೆಗೆ ಮುತ್ತಿಗೆ ಹಾಕಿದ್ದೇವೆ."

"ನೀವು ಮುತ್ತಿಗೆ ಹಾಕಿದಾಗ ಯಾರೋ ಪೊಲೀಸ್ ನಿಮ್ಮನ್ನ ಮುಟ್ಟಿದನಂತಲ್ಲಾ ಮೇಡಂ?"

"ಹೌದು, ಒಬ್ಬ ಪೊಲೀಸ್ ಸ್ಪರ್ಶ ಸಹಜವಾಗಿರಲಿಲ್ಲ, ಅದಕ್ಕೆ ನನಗೆ ಕಂಡಾಪಟ್ಟೆ ಕೋಪ ಬಂದು ಸರೀಗೆ

## ಥೂತ್ತೇರಿ

ಬೈದಿದ್ದೇನೆ."

"ಎಡೂರಪ್ಪನೋರ ಕೈಲಿ ಆ ಪೊಲೀಸ್‌ಗೆ ಹೊಡೆಸಬೇಕಾಗಿತ್ತು ಮೇಡಂ."

"ಅವರಿದ್ದರೆ ಹಾಗೇ ಮಾಡುತ್ತಿದ್ದರು."

"ಯಾಕೆ ಮೇಡಂ ಈ ಹಿಂದಿನ ಅತ್ಯಾಚಾರ ಪ್ರಕರಣದಲ್ಲಿ ತಾವು ಸುಮ್ಮನಿದ್ರಿ?"

"ಯಾವ ಪ್ರಕರಣ ಹೇಳಿ?"

"ರೇಣುಕಾಚಾರಿ ಜಯಲಕ್ಷ್ಮಿಗೆ ಕಿರುಕುಳ ಕೊಟ್ಟು ಕಿಸ್ ಕೊಟ್ಟಾಗ ಸುಮ್ಮನಿದ್ರಿ?"

"ಜಯಲಕ್ಷ್ಮಿ ರೇಣುಕಾಚಾರಿ ಗೆಳೆಯರು. ಅವರ ವಿಷಯದಲ್ಲಿ ನಾವು ತಲೆ ಹಾಕಲಿಲ್ಲ."

"ಹಾಲಪ್ಪನ ಕೇಸಲ್ಲೂ ಬಾಯಿ ಬಿಡಲಿಲ್ಲ?"

"ಅದು ಅತ್ಯಾಚಾರ ಅಲ್ಲ, ಅವರಿಬ್ಬರು ಒಪ್ಪಿ ಸೇರಿದ ಪ್ರಸಂಗ. ಅದಕ್ಕಾಗಿ ಸುಮ್ಮನಿದ್ದೆವು."

"ರಾಘವಾಚಾರಿ ಕೇಸಲ್ಲೂ ಬಾಯಿ ಬಿಡಲಿಲ್ಲ?"

"ಅದೂ ಕೂಡ ಅತ್ಯಾಚಾರ ಅಲ್ಲ, ಭಕ್ತಿ ಭಜನೆಯಲ್ಲಿ ನಡೆದ ಸಮಾಗಮ."

"ಮತ್ತೆ ಆ ಹೆಣ್ಣುಮಗಳು ಅತ್ಯಾಚಾರ ಅಂದವ್ರುರೆ?"

"ಅತ್ಯಾಚಾರ ವರ್ಷಾನುಗಟ್ಟಲೆ ನಡೆಯುವುದಿಲ್ಲ, ಆಕಸ್ಮಾತ್ ನಡೆದಾಗ ಅದು ಅತ್ಯಾಚಾರವಾಗುತ್ತೆ, ಪದೇಪದೇ ಅತ್ಯಾಚಾರಕ್ಕೆ ಒಳಗಾಗುವವರು ಅದನ್ನು ಇಷ್ಟ ಪಡ್ತರೆ ಅಂತ ಆಯ್ತಲ್ಲ."

"ಇದೇನು ಮೇಡಂ ಅನುಭವದ ಮಾತಿನ ತರ ಹೇಳ್ತಿರಿ?"

"ಯಂತ ಹೇಳುವುದು ನೀವು?"

"ಒಬ್ಬರಿಗೆ ಇಷ್ಟ ಇರುತ್ತೆ ಇನ್ನೊಬ್ಬರಿಗೆ ಇಷ್ಟ ಇರಲ್ಲ, ಆದರೂ ಬದುಕಿಗೆ, ಮಾನ ಮರ್ಯಾದೆಗೆ, ಒಂದು ಸಮಾಜದ ಗೌರವ ಕಾಪಾಡೋದಕ್ಕೆ ಸಹಿಸಿಕೊಂಡಾಗ ಅದೂ ಅತ್ಯಾಚಾರ ಆಗಲ್ಲವೆ? ಅಂತದಕ್ಕೂ ನೀವು ಪ್ರತಿಭಟಿಸಬೇಕಿತ್ತು?"

"ನೋಡಿ, ಯಾವುದಕ್ಕೆ ಪ್ರತಿಭಟಿಸಬೇಕು, ಯಾವುದಕ್ಕೆ ಪ್ರತಿಭಟಿಸಬಾರದು ಅಂತ ನಮ್ಮ ಪಕ್ಷ ಹೇಳುತ್ತೆ, ಅದರಂತೆ ನಾವು ನಡೀತೇವೆ."

"ಅಂದರೆ ಬಿಜೆಪಿಗಳು ಮಾಡೋ ಅತ್ಯಾಚಾರಕ್ಕೆ ನಿಮ್ಮ ಪ್ರತಿಭಟನೆ ಇರಲ್ಲ?"

"ಹಾಗಲ್ಲ, ಎಲ್ಲ ಮಹಿಳೆಯರ ಪರ ನಾವು ಹೋರಾಡ್ತೇವೆ."

"ಫ್ರೂನು ಅದ್ನ ಹೇಳ್ತಿರಲ್ಲ ಮೇಡಂ! ನೀವು ಇದುವರೆಗೂ ಬಿಜೆಪಿಗಳ ರೇಪಿನ ವಿಷಯದಲ್ಲಿ ಸುಮ್ಮನಿದ್ದಿರಲ್ಲ ಯಾಕೆ?"

"ಪಕ್ಷ ಸುಮ್ಮನಿದ್ದಾಗ ನಾವೂ ಸುಮ್ಮನಿರಬೇಕಾಗುತ್ತೆ."

"ಅಲ್ಲಿಗೆ ನೀವು ಬಿಜೆಪಿ ಪಕ್ಷದ ಗುಲಾಮ ಮಹಿಳೆಯರಾಗ್ತಿರಿ?"

"ಹಾಗೇ ತಿಳಿದುಕೊಳ್ಳಿ."

"ಥೂತ್ತೇರಿ!!!"

# ಡಾಕ್ಟರ್‌ಗಳ ಮುಷ್ಕರ: ಗೆದ್ದವರಾರು? ಸೋತವರಾರು

ಡಾಕ್ಟರ್ ವೃತ್ತಿ ನಮ್ಮ ಸಮಾಜದಲ್ಲಿ ಅತ್ಯಂತ ಗೌರವಾನ್ವಿತ ಹಾಗೂ ಲಾಭದಾಯಕ ವೃತ್ತಿಯೆನಿಸಿಕೊಂಡಿದೆ. ಈ ಕಾರಣಕ್ಕಾಗಿಯೇ ಪಿಯುಸಿ ಹಂತದಲ್ಲಿ ಅತಿ ಹೆಚ್ಚಿನ ಅಂಕ ಗಳಿಸಿದ ವಿದ್ಯಾರ್ಥಿಗಳಲ್ಲಿ ಶೇಕಡ 90 ರಷ್ಟು ವಿದ್ಯಾರ್ಥಿಗಳು ಇಚ್ಛಿಸುವುದು ವೈದ್ಯಕೀಯ ಶಿಕ್ಷಣವನ್ನು. ಹೌದು, ಡಾಕ್ಟರ್‌ಗಳೆಂದರೆ ಹುಡುಗಾಟದ ಮಾತಲ್ಲ; ಅವರು ದೇವಮಾನವರಿದ್ದಂತೆ! ಬಹುಪಾಲು ವೈದ್ಯರು ಸಮಾಜದ ಇತರ ಯಾವುದೇ ವರ್ಗದ ಉಸಾಬರಿಗೂ ಹೋಗದೆ ತಮ್ಮದೇ 'ದಿಗ್ನಿಟಿ ಲೆವೆಲ್' ಮೈನ್‌ಟೈನ್ ಮಾಡುತ್ತಾ ತಮ್ಮ ಜೀವನವನ್ನು ಸಾರ್ಥಕಪಡಿಸಿಕೊಳ್ಳುತ್ತಿದ್ದಾರೆ. ಆ ಮಾತು ಹಾಗಿರಲಿ.

ಆದರೆ ಪರಿಸ್ಥಿತಿ ಏನಾಗಿದೆಯೆಂದರೆ, ಅತಿ ಪ್ರತಿಷ್ಠಿತ ವೃತ್ತಿಯ ಲ್ಲಿರುವ ವೈದ್ಯರು ಕೂಡ ಈಗ ಮುಷ್ಕರಕ್ಕಿಳಿಯ ಬೇಕಾಗಿ ಬಂದಿದೆ. ಕಳೆದ ವಾರ ಸರ್ಕಾರ ಮತ್ತು ವೈದ್ಯರ ನಡುವೆ ಜಟಾಪಟಿಯೇ ನಡೆಯಿತು.

ವೈದ್ಯರ ಮುಷ್ಕರದ ಹಿನ್ನೆಲೆಯನ್ನು ಕೆದಕುತ್ತಾ ಹೋದಂತೆ ನಮ್ಮ ರಾಜ್ಯದ ಆರೋಗ್ಯ ವ್ಯವಸ್ಥೆಯ ದುಸ್ಥಿತಿ ಹಾಗೂ ದಶಕಗಳಿಂದ ನಮ್ಮನ್ನಾಳುತ್ತಿರುವ ಸರ್ಕಾರಗಳ ಬೇಜವಾಬ್ದಾರಿತನಗಳ ದರ್ಶನವಾಗುತ್ತದೆ.

ಕೆಎಸ್‌ಜಿಎಂಒಎ (ಕರ್ನಾಟಕ ರಾಜ್ಯ ಸರ್ಕಾರ ವೈದ್ಯಾಧಿಕಾರಿಗಳ ಸಂಘ) ಹೆಸರಿನಲ್ಲಿ ಸಂಘಟಿತರಾದ ವೈದ್ಯರು ಸರ್ಕಾರದ ಮುಂದಿಟ್ಟಿದ್ದ ಬೇಡಿಕೆಗಳನ್ನು ಪರಿಶೀಲಿಸೋಣ.

- ಖಾಲಿಯಿರುವ ವೈದ್ಯ ಹುದ್ದೆಗಳನ್ನು ಭರ್ತಿ ಮಾಡಬೇಕು.
- ಔಷಧಿ ಹಾಗೂ ಉಪಕರಣಗಳನ್ನು ಸಮರ್ಪಕವಾಗಿ ಸರಬರಾಜು ಮಾಡಬೇಕು.
- ಪ್ರತಿ ತಿಂಗಳ 5 ರ ಒಳಗಾಗಿ ಸಂಬಳ ಪಾವತಿಯಾಗಬೇಕು.
- ಮೂರು ವರ್ಷಕ್ಕೂ ಹೆಚ್ಚುಕಾಲದಿಂದ ಗುತ್ತಿಗೆ ಆಧಾರದಲ್ಲಿ ಸೇವೆ ಸಲ್ಲಿಸುತ್ತಿರುವ ವೈದ್ಯರನ್ನು ಕಾಯಂಗೊಳಿಸಬೇಕು.
- ವೇತನ ತಾರತಮ್ಯ ನಿವಾರಣೆ ಮಾಡಬೇಕು.
- ಕೆಪಿಎಸ್‌ಸಿ ಮೂಲಕ ನೇಮಕಾತಿ ಬದಲಿಗೆ ನೇರ ನೇಮಕಾತಿ ಪ್ರಕ್ರಿಯೆ ಜಾರಿಗೆ ತರಬೇಕು ಇತ್ಯಾದಿ.

ಮೇಲುನೋಟಕ್ಕೆ ಕಾಣುವಂತೆ ಈ ಬೇಡಿಕೆಗಳು ನ್ಯಾಯಸಮ್ಮತವಾದುವು ಎಂಬುದರಲ್ಲಿ ಎರಡು ಮಾತಿಲ್ಲ. ಸಾಮಾಜಿಕ ಕಳಕಳಿಯಿರುವ ಯಾರೇ ಆಗಲಿ ಈ ಬೇಡಿಕೆಗಳನ್ನು ನಿರಾಕರಿಸುವುದು ಸಾಧ್ಯವೇ ಇಲ್ಲ. ಮೇಲಾಗಿ ಈ ಬೇಡಿಕೆಗಳು ನಮ್ಮ ಸಮಾಜದ ಆರೋಗ್ಯ ವ್ಯವಸ್ಥೆಯ ಸುಧಾರಣೆಗೆ ಪೂರಕವಾಗಿಯೇ ಇವೆ.

ಈ ಬೇಡಿಕೆಗಳನ್ನು ರೂಪಿಸಿದ ಸಂಘಟಕರು ಸಮಾಜದ ಸಿಂಪತಿ ಕಳೆದುಕೊಳ್ಳಬಾರದು ಎಂಬ ಎಚ್ಚರಿಕೆ ತೋರಿರುವುದು ಸ್ಪಷ್ಟವಾಗಿ ವ್ಯಕ್ತವಾಗಿದೆ.

ಸರ್ಕಾರಿ ಆಸ್ಪತ್ರೆಗಳನ್ನು ಪ್ರಧಾನವಾಗಿ ಕಾಡುತ್ತಿರುವುದು ವೈದ್ಯರು ಹಾಗೂ ಸಿಬ್ಬಂದಿಯ ಕೊರತೆ. ವಿಶ್ವ ಆರೋಗ್ಯ ಸಂಸ್ಥೆಯ ಮಾರ್ಗದರ್ಶಿ ಸೂತ್ರದ ಪ್ರಕಾರ ಪ್ರತಿ ಸಾವಿರ ಮಂದಿಗೆ ಒಬ್ಬರು ವೈದ್ಯರು ಇರಬೇಕು. ಆದರೆ ಕರ್ನಾಟಕದಲ್ಲಿ ಈ ಅನುಪಾತ 11,933ಕ್ಕೆ ಒಬ್ಬರು. ಹೃದಯರೋಗ, ನರರೋಗ, ಮೂಳೆ ರೋಗ, ಅರಿವಳಿಕೆ ಶಾಸ್ತ್ರ ಸ್ತ್ರೀರೋಗ ಶಾಸ್ತ್ರ ಇತ್ಯಾದಿಗಳಲ್ಲಿ ವಿಶೇಷ ಪರಿಣತಿ ಪಡೆದಿರುವ ವೈದ್ಯರ ಹುದ್ದೆಗಳು ಶೇಕಡ 70ರಷ್ಟು ಖಾಲಿ ಬಿದ್ದಿವೆ. ಸಾಮಾನ್ಯ ವೈದ್ಯರ ಹುದ್ದೆಗಳಲ್ಲೂ ಶೇಕಡ 35ರಷ್ಟು ಹುದ್ದೆಗಳು ಖಾಲಿ ಬಿದ್ದಿವೆ.

ರಾಜ್ಯದಲ್ಲಿ ಹಾಲಿ ಸುಮಾರು 4500 ವೈದ್ಯರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಜಿಲ್ಲಾ ವೈದ್ಯಾಧಿಕಾರಿ, ತಾಲೂಕು ವೈದ್ಯಾಧಿಕಾರಿ ಮುಂತಾದ ಹುದ್ದೆಗಳಿಗೆ ಸುಮಾರು 600 ಮಂದಿ ನಿಯೋಜನೆ ಯಾಗುತ್ತಾರೆ. ಸುಮಾರು 500 - 600 ಮಂದಿ ವೈದ್ಯರು ಉನ್ನತ ವ್ಯಾಸಂಗಕ್ಕಾಗಿ ರಜೆ ಮೇಲಿರುತ್ತಾರೆ. ಹೀಗಾಗಿ ವೈದ್ಯಕೀಯ ಸೇವೆಗಳಲ್ಲಿ ನಿಜವಾಗಿ ತೊಡಗಿಸಿ ಕೊಂಡಿರುವವರ ಸಂಖ್ಯೆ ಸುಮಾರು 3000 ಮಾತ್ರ!



12 ಮಂದಿ ವೈದ್ಯರು ಇರಬೇಕಾದ ತಾಲೂಕು ಆಸ್ಪತ್ರೆಗಳಲ್ಲಿ 5 ಅಥವಾ 6 ಮಂದಿ, 3 ಮಂದಿ ವೈದ್ಯರು ಇರಬೇಕಾದ ಕಡೆ ಕೇವಲ ಒಬ್ಬರೇ ವೈದ್ಯರು ಕೆಲಸ ಮಾಡಬೇಕಾದ ವಾತಾವರಣ ಇದೆ.

ಇದು ಮೊದಲ ಬಾರಿಯೇನಲ್ಲ. 2008ರಿಂದಲೂ ಆಗಾಗ್ಗೆ ಈ ಬೇಡಿಕೆಗಳಿಗಾಗಿ ಒತ್ತಾಯಿಸುತ್ತಲೇ ಬಂದಿದ್ದಾರೆ.

ಇಷ್ಟೆಲ್ಲ ಯಾಕೆಂದರೆ ಉದಾರೀಕರಣ, ಖಾಸಗೀಕರಣ ನೀತಿಗಳು ಜಾರಿಯಾದ ನಂತರ ಆರೋಗ್ಯ ಸೇವೆಯ ಮೇಲಿನ ವೆಚ್ಚವನ್ನು ಭಾರೀ ಪ್ರಮಾಣದಲ್ಲಿ ಕಡಿತಗೊಳಿಸಲಾಗಿದೆ. ಕರ್ನಾಟಕ ಸರ್ಕಾರ ಸಾರ್ವಜನಿಕ ಆರೋಗ್ಯ ವ್ಯವಸ್ಥೆಗೆ ಖರ್ಚು ಮಾಡುವ ಮೊತ್ತ ಎಷ್ಟು ಗೊತ್ತೆ? ನಮ್ಮ ಬಜೆಟ್ಟಿನ ಶೇಕಡ 1ಕ್ಕಿಂತಲೂ ಕಡಿಮೆ.

ನಾನಾ ಒತ್ತಡದಲ್ಲಿ ಕೆಲಸ ಮಾಡಬೇಕಾಗಿರುವ ವೈದ್ಯರು ಕೆಲವೊಮ್ಮೆ 24 ತಾಸುಗಳು ಆಸ್ಪತ್ರೆಯಲ್ಲೇ ಉಳಿಯಬೇಕಾದ ಅನಿವಾರ್ಯತೆಯನ್ನು ಅನುಭವಿಸಬೇಕಾಗುತ್ತದೆ. ದಿನಕ್ಕೆ 8 ತಾಸಿನ ಕೆಲಸ ಎಂಬ ನಿಯಮ ಹಲವು ವೈದ್ಯರಿಗೆ ಅನ್ವಯಿಸುವುದೇ ಇಲ್ಲ.



ಗುತ್ತಿಗೆ ವೈದ್ಯರ ಸಮಸ್ಯೆ ಮತ್ತೊಂದು ರೀತಿಯದು. ಸುಮಾರು 25 ಸಾವಿರ ರೂಪಾಯಿ ಸಂಬಳಕ್ಕೆ ಗುತ್ತಿಗೆ ಆಧಾರದಲ್ಲಿ ನೇಮಕವಾಗಿರುವ ಸುಮಾರು 300 ಮಂದಿ ವೈದ್ಯರನ್ನು ಆರೆಂಟು ವರ್ಷಗಳಾದರೂ ಕಾಯಂ ಮಾಡಿಲ್ಲ. ಇತರೆ ಸವಲತ್ತುಗಳಂತೂ ಗಗನಕುಸುಮ. ಇಂಥಾ ಪರಿಸ್ಥಿತಿಯಲ್ಲಿ ಉತ್ತಮ ಅವಕಾಶ ಸಿಕ್ಕ ಕೂಡಲೇ ಈ ವರ್ಗ ಬೇರೆಡೆಗೆ ಜಾರಿಕೊಳ್ಳುತ್ತದೆ.

ಸಾಲದ್ದಕ್ಕೆ ಪ್ಯಾರಾ ಮೆಡಿಕಲ್ ಸಿಬ್ಬಂದಿ, ಲ್ಯಾಬ್ ಟೆಕ್ನಿಷಿಯನ್, ಎಕ್ಸರೇ ಟೆಕ್ನಿಷಿಯನ್ ಮುಂತಾದ ತಾಂತ್ರಿಕ ಸಿಬ್ಬಂದಿಗಳ ಕೊರತೆಯಂತೂ ಬಗೆಹರಿಯಲಾಗದ ಮಾಮೂಲಿ ಸಂಗತಿ.

ಆರೋಗ್ಯ ಇಲಾಖೆಗೆ ಸಂಬಂಧಿಸಿ ಕೆಲವೇ ತಿಂಗಳುಗಳಲ್ಲಿ ಹಲವು ಮುಷ್ಕರಗಳು ನಡೆದಿವೆ. ಸ್ಟಾಫ್ ನರ್ಸ್‌ಗಳ ಮುಷ್ಕರ, 108 ಆಂಬುಲೆನ್ಸ್ ಡ್ರೈವರ್‌ಗಳ ಮುಷ್ಕರ, ಆರೋಗ್ಯ ಸಹಾಯಕರ ಮುಷ್ಕರ, ಇದೀಗ ವೈದ್ಯರ ಮುಷ್ಕರ. ವೈದ್ಯರು ಮುಷ್ಕರಕ್ಕೆ ಮುಂದಾಗಿದ್ದು

ಈ ಸಮಸ್ಯೆಯ ಜೊತೆಗೆ ವೇತನ ತಾರತಮ್ಯದ ಸಮಸ್ಯೆಯೂ ಒಂದು. ವೈದ್ಯಕೀಯ ಶಿಕ್ಷಣ ಇಲಾಖೆ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗಳಡಿ ಕೆಲಸ ಮಾಡುತ್ತಿರುವ ವೈದ್ಯರ ವೇತನದಲ್ಲಿ ಭಾರೀ ಅಂತರವಿದೆ. ಪ್ರಾಧ್ಯಾಪಕ ಹುದ್ದೆಗೆ ನೇಮಕಗೊಂಡ ವೈದ್ಯರು ಒಂದು ಲಕ್ಷಕ್ಕೂ ಹೆಚ್ಚಿನ ವೇತನ ಪಡೆಯುತ್ತಿದ್ದರೆ, ಅಷ್ಟೇ ಹಿರಿಯ ಶ್ರೇಣಿ ಹೊಂದಿರುವ ಸರ್ಕಾರಿ ಆಸ್ಪತ್ರೆ ವೈದ್ಯರು 60-70 ಸಾವಿರ ಸಂಬಳ ಪಡೆಯುತ್ತಿದ್ದಾರೆ. ಈ ತಾರತಮ್ಯ ಅವೈಜ್ಞಾನಿಕವಾಗಿದ್ದು ತಮಗೂ ಪ್ರಾಧ್ಯಾಪಕರಿಗೆ ನೀಡ… ಹೆಚ್ಚಿನ ಸಂಬಳ ನೀಡಬೇಕೆಂಬುದು ವೈದ್ಯರ ಮತ… ಬೇಡಿಕೆ.

ಇನ್ನು ಔಷಧಿ ಸರಬರಾಜಿನ ಸಂಗತಿಯಂತೂ ದೇ… ಪ್ರೀತಿ. ಅಗತ್ಯವಿರುವ ಜೀವರಕ್ಷಕ ಔಷಧಿಗಳ ದಾ… ಯಾವಾಗಲೂ ಖಾಲಿ. ಬದಲಿಗೆ ಅರಿವಳಿಕೆ … ಮದ್ದಿನಂಥಾ ಅಪರೂಪಕ್ಕೆ ಬಳಸುವ ಔಷಧಿಗಳು ರಾ… ಬಂದು ಬೀಳುತ್ತವೆ. ಬ್ಯಾಂಡೇಜು ಕ್ಲಾತ್, ಕಾಟನ್, ನಿ… ಮುಂತಾದವುಗಳು 'ರಾಶಿಗಟ್ಟಲೆ ಬಂದು … ಉದಾಹರಣೆಯೂ ಇದೆ. ಕಾರಣವೇನೆಂದರೆ … ಕಾಂಟ್ರಾಕ್ಟ್ ಪಡೆದಿರುವ ಕಂಪನಿಗಳ ಲಾಬಿಯೇ … ಪ್ರಮುಖ ಪಾತ್ರ ವಹಿಸುತ್ತದೆ ವಿನಃ ಸಾರ್ವಜನಿಕರ ಆ… ರಕ್ಷಣೆಯ ಕಾಳಜಿ ಅಲ್ಲವೇ ಅಲ್ಲ.

ಉಪಕರಣಗಳ ಸರಬರಾಜಿನದು ಮತ್ತೊಂದು… ಎಕ್ಸರೇ ಯಂತ್ರ ಇರುವ ಆಸ್ಪತ್ರೆಯಲ್ಲಿ ಎಕ್ಸರೇ ಟೆಕ್ನಿಷಿ… ಇರುವುದಿಲ್ಲ. ಟೆಲಿ ಮೆಡಿಸಿನ್ ಯಂತ್ರ ಇರುವ… ಅದಕ್ಕೆ ಸಂಬಂಧಿಸಿದ ನುರಿತ ವೈದ್ಯರೇ ಇರುವ… ಇಂಥಾ ದುರ್ವ್ಯವಸ್ಥೆಯಿಂದಾಗಿ ಸರ್ಕಾರದಿಂದ ಮಂಜ… ಗುವ ಸೀಮಿತ ಬಜೆಟ್ ಕೂಡಾ ನೀರು ಪಾಲಾಗ…

ಕಳೆದ ಹತ್ತಾರು ವರ್ಷಗಳಿಂದ ಈ ಇಲಾಖೆ… ಹೊಸ ನೇಮಕಾತಿ ಇಲ್ಲ. ನೇಮಕಾತಿ ಮಾಡಿಕೊ… ಸರ್ಕಾರ ಮುಂದಾದರೂ ಅರ್ಜಿ ಹಾಕಲು ವೈದ್ಯರೇ ಸಿ… ಕಳೆದ ವರ್ಷ ಖಾಲಿ ಇರುವ ತಜ್ಞ ವೈದ್ಯರ … ಹುದ್ದೆಗಳನ್ನು ಭರ್ತಿ ಮಾಡಲು ಅರ್ಜಿ ಆಹ್ವಾನಿ… ಬಂದ ಅರ್ಜಿಗಳು ಕೇವಲ 250 ಮಾತ್ರ! ಅ… ಸಂದರ್ಶನಕ್ಕೆ ಹಾಜರಾದವರು 150ರ ಆಜುಬಾಜು! … ಸರ್ಕಾರಿ ವೈದ್ಯ ಹುದ್ದೆಗೆ ಸೇರಿಕೊಂಡವರು ಕೇವಲ … ಅಂದರೆ ಅಗತ್ಯವಿದ್ದ ಹುದ್ದೆಗಳಲ್ಲಿ ಸುಮಾರು … 10ರಷ್ಟು ಮಾತ್ರ!

ಆದರೆ ಇದೇ ಸಂದರ್ಭದಲ್ಲಿ ಪ್ರತಿ ವರ್ಷ ಸಾವಿ… ಮಂದಿ ವೈದ್ಯಕೀಯ ಪದವಿಗಳನ್ನು ಪಡೆದುಕೊ… ಹೊರಬರುತ್ತಿದ್ದಾರೆ. ಸರ್ಕಾರ ಪ್ರತಿ ವೈದ್ಯಕೀಯ ವಿದ… ಯ ಮೇಲೆ ನಾಲ್ಕಾರು ಲಕ್ಷಗಳನ್ನು ವೆಚ್ಚ ಮಾಡು… ಇದೆ.

ಸಾರ್ವಜನಿಕ ಬೊಕ್ಕಸದ ಹಣವನ್ನು ಹಾಳು ಮಾ… ಕೈಂಕರ್ಯದಲ್ಲಿ ಇಲಾಖೆ ಎತ್ತಿದ ಕೈ. ಕಳೆದ … ತಿಂಗಳುಗಳ ಹಿಂದೆ ರಾಯಚೂರು ಜಿಲ್ಲೆಯ … ವೈದ್ಯಾಧಿಕಾರಿ ಡಾ. ನಾರಾಯಣ್ ಎಂಬುವವರು … ಸ್ಫೋಟಕ ಸುದ್ದಿಯನ್ನು ಹೊರಗೆ ಹಾಕಿದ್ದರು. ಲಕ್ಷ… ಬೆಲೆಬಾಳುವ ಉಪಯುಕ್ತ ಔಷಧಿಗಳು ಆ ಕಚೇ… ಗೋದಾಮಿನಲ್ಲೇ ಧೂಳು ಹಿಡಿದು ಎಕ್ಸ… ಆಗಿಹೋಗಿದ್ದವು. ಸರಿಯಾಗಿ ಅದೇ ಅವಧಿಯಲ್ಲಿ ಸ್ಥ… ಆಸ್ಪತ್ರೆಗಳಿಂದ ಔಷಧಿಗಳಿಗಾಗಿ ಬಂದಂತಹ ಇಂಡೆಂ… ಪಟ್ಟಿಯೂ ದೊಡ್ಡದಿತ್ತು. ಈ ಬಗ್ಗೆ ಜಿಲ್ಲಾ ಉಸ… ಹಾಗೂ ವೈದ್ಯಕೀಯ ಶಿಕ್ಷಣ ಸಚಿವ ಶರಣ … ಪಾಟೀಲರನ್ನು ಪ್ರಶ್ನಿಸಿದರೆ ಈ ನಾಚಿಕೆಗೇಡಿನ ಬೇಜವಾ… ಘಟನೆ ಬಗ್ಗೆ ಹಾರಿಕೆ ಉತ್ತರ ನೀಡಿ ನುಣುಚಿಕೊಂಡ… ಆರೋಗ್ಯ ಸಚಿವ ಯು.ಟಿ.ಖಾದರ್ ಅವರಿಗಂತೂ … ಬಗ್ಗೆ ಮಾಹಿತಿಯೇ ಕೊಡದಂತೆ ಮ್ಯಾನ್… ಮಾಡಲಾಗಿತ್ತು.

## ಪ್ರತಿಜ್ಞೆ ಮತ್ತು ಹಿಪೊಕ್ರಸಿ

ಪ್ರತಿಯೊಬ್ಬ/ಳು ವೈದ್ಯ ಪದವಿ ಪಡೆದುಕೊಂಡ ನಂತರ ಸಂಬಂಧಿಸಿದ ಸಂಸ್ಥೆಯೊಂದರಲ್ಲಿ ವೈದ್ಯಕೀಯ ವೃತ್ತಿಯ ನೋಂದಣಿ ಮಾಡಬೇಕಿರುತ್ತದೆ. ಹಾಗೆ ನೋಂದಣಿ ಮಾಡುವ ಪ್ರತಿ ವ್ಯಕ್ತಿಯೂ ಒಂದು ಪ್ರತಿಜ್ಞಾ ವಿಧಿಯನ್ನು ಸ್ವೀಕರಿಸುವುದು ಕಡ್ಡಾಯ.

"ನಾನು ವೈದ್ಯನಾಗಿ/ಳಾಗಿ ಮಾನವ ಕುಲದ ಸೇವೆಯಲ್ಲಿ ತೊಡಗಿಸಿಕೊಳ್ಳುತ್ತೇನೆ... ರೋಗಿಗಳ ಸೇವೆಯೇ ನನ್ನ ಜೀವನದ ಪರಮ ಗುರಿ... ರೋಗಿಗಳಿಗೆ ಯಾವುದೇ ರೀತಿಯ ಹಾನಿಯಾಗದಂತೆ ನೋಡಿಕೊಳ್ಳುತ್ತೇನೆ... ಮಾನವಕುಲಕ್ಕೆ ವ್ಯತಿರಿಕ್ತವಾದ ಉದ್ದೇಶಗಳಿಗೆ ನನ್ನ ವೈದ್ಯಕೀಯ ಜ್ಞಾನವನ್ನು ಎಂದಿಗೂ ಬಳಸುವುದಿಲ್ಲ..." ಉದಾತ್ತ ಧ್ಯೇಯಗಳನ್ನೊಳಗೊಂಡ ಪ್ರತಿಜ್ಞೆ ಹೀಗೇ ಮುಂದುವರೆಯುತ್ತದೆ.

ಈ ಪ್ರತಿಜ್ಞೆಗೆ 'ಹಿಪೋಕ್ರಟಿಕ್ ಓತ್' ಎನ್ನುತ್ತಾರೆ. ಸುಮಾರು 2400 ವರ್ಷಗಳ ಹಿಂದಿನ ಗ್ರೀಕ್ ದೇಶದ ಪ್ರಖ್ಯಾತ ವೈದ್ಯ, ತತ್ವಶಾಸ್ತ್ರಜ್ಞ, ಹಿಪೋಕ್ರಟಿಸ್‌ನ ಹೆಸರು ಈ ಪ್ರತಿಜ್ಞೆಗೆ ಅಂಟಿಕೊಂಡಿದೆ. ವೈದ್ಯನಾಗಿ, ದಾರ್ಶನಿಕನಾಗಿ ಮನುಕುಲಕ್ಕೆ ಅಪಾರ ಸೇವೆ ಸಲ್ಲಿಸಿದ ಮಹಾನುಭಾವನಾತ. ಆದ್ದರಿಂದಲೇ ಇದೀ ಜಗತ್ತು ಆತನನ್ನು 'ವೈದ್ಯ ವಿಜ್ಞಾನದ ಪಿತಾಮಹ' ಎಂದು ಗೌರವಿಸುತ್ತದೆ.

ಹಿಪೋಕ್ರಟಿಕ್ ಎಂಬ ಇಂಗ್ಲಿಷ್ ಪದಕ್ಕೆ 'ಆಷಾಢಭೂತಿತನದಿಂದ ಕೂಡಿದ' ಎಂಬ ಅರ್ಥವೂ ಇದೆ. ಬಹುಪಾಲು ವೈದ್ಯರ ಪಾಲಿಗೆ ಈ ಪ್ರತಿಜ್ಞೆ ಆಷಾಢಭೂತಿತನದ್ದಾಗಿ ಪರಿಣಮಿಸಿರುವುದೇ ಇಂದಿನ ವಿಪರ್ಯಾಸ.

## ವೈದ್ಯರಿಗೆ ಬೇಡವಾಗಿರುವ ಜಿಲ್ಲೆಗಳು

ಸರ್ಕಾರಿ ವೈದ್ಯ ಹುದ್ದೆಗೆ ಬರುವುದೇ ದುಸ್ತರ. ಬಂದರೂ ಗ್ರಾಮೀಣ ಪ್ರದೇಶಗಳ ಆಸ್ಪತ್ರೆಗೆ ಹೋಗಲು ಯಾವುದೇ ವೈದ್ಯರು ಸುತರಾಂ ಒಪ್ಪುವುದಿಲ್ಲ. ಅದರಲ್ಲೂ ಉತ್ತರ ಕರ್ನಾಟಕದ ಜಿಲ್ಲೆಗಳಂತೂ ಈ ವಿಷಯದಲ್ಲಿ ಶಾಪಗ್ರಸ್ತವಾದಂತೆ ಕಂಡು ಬರುತ್ತವೆ.

ಯಾವುದೋ ಅನಿವಾರ್ಯತೆಯಲ್ಲಿ ಈ ಜಿಲ್ಲೆಗಳಲ್ಲಿ ಕೆಲಸ ಮಾಡುತ್ತಿರುವ ವೈದ್ಯರು ಸದಾ ವರ್ಗಾವಣೆಗಾಗಿ ಪ್ರಯತ್ನಿಸುತ್ತಲೇ ಇರುತ್ತಾರೆ. ಈಗ ಚಾಲ್ತಿಯಲ್ಲಿರುವ ವರ್ಗಾವಣೆ ನೀತಿಯ ಪ್ರಕಾರ ಅಭ್ಯರ್ಥಿಯ ಆಯ್ಕೆಗೆ ಹಲವು ಆಪ್ಷನ್ಸ್ ಇರುತ್ತವೆ. ಎಲ್ಲರ ನೆಚ್ಚಿನ ಆಯ್ಕೆ ಬೆಂಗಳೂರು ನಗರ. ನಂತರ ಮೈಸೂರು, ಶಿವಮೊಗ್ಗ, ಮಂಗಳೂರು ಮುಂತಾದ ಜಿಲ್ಲೆಗಳೇ ಹೊರತು ಅಪ್ಪಿತಪ್ಪಿಯೂ ಯಾದಗಿರಿಯನ್ನೋ, ಬಳ್ಳಾರಿಯನ್ನೋ ಆಯ್ಕೆ ಮಾಡಿಕೊಳ್ಳುವ ವೈದ್ಯರೇ ಇಲ್ಲ. ಆಶ್ಚರ್ಯವೆಂದರೆ ಇದೇ ಜಿಲ್ಲೆಗಳ ಮೂಲದಿಂದ ಬಂದವರೂ ಕೂಡ ಮಹಾನಗರಗಳತ್ತ ವಲಸೆ ಹೊರಡಲು ತುದಿಗಾಲಲ್ಲಿ ನಿಂತಿರುತ್ತಾರೆಯೇ ವಿನಃ ತಮ್ಮದೇ ಜಿಲ್ಲೆಗಳ ಗ್ರಾಮೀಣ ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸಲು ಸಿದ್ಧರಿಲ್ಲ.

ಸರ್ಕಾರ ಪ್ರತಿ ವೈದ್ಯಕೀಯ ವಿದ್ಯಾರ್ಥಿಯ ಮೇಲೆ ಪ್ರತಿ ವರ್ಷ ಲಕ್ಷಾಂತರ ಹಣವನ್ನು ವೆಚ್ಚ ಮಾಡಿರ… ಸರ್ಕಾರಿ ಕೋಟಾದಲ್ಲಿ ಸೀಟು ಪಡೆದು ವ್ಯಾಸಂಗ ಮ… ವಿದ್ಯಾರ್ಥಿಗಳು ಕಡ್ಡಾಯವಾಗಿ ಗ್ರಾಮೀಣ ಪ್ರದೇ… ವೈದ್ಯಕೀಯ ಸೇವೆ ಸಲ್ಲಿಸಬೇಕೆಂಬ ನಿಯಮವೂ… ಈ ಬಗ್ಗೆ ಸೀಟು ಮಂಜೂರು ಮಾಡುವ ಅವಧಿ… ಬಾಂಡ್ ಪೇಪರ್ ಬರೆಸಿಕೊಳ್ಳುತ್ತಾರೆ. ಹಾಗೊಂದು… ಈ ಒಪ್ಪಂದವನ್ನು ಮುರಿದರೆ ಅಂಥವರಿಗೆ ದಂಡ ವಿ… ವ್ಯವಸ್ಥೆಯೂ ಇದೆ.

ಹೀಗೆ ನಿಗದಿಯಾಗಿರುವ ದಂಡ ಸಾಮಾನ್ಯ ವೈ… ಒಂದು ಲಕ್ಷ ಮತ್ತು ತಜ್ಞ ವೈದ್ಯರಿಗೆ ಐದು … ಸರ್ಕಾರಿ ಸವಲತ್ತನ್ನು ಬಳಸಿಕೊಂಡು ವೈದ್ಯ … ಪಡೆದುಕೊಂಡ ವೈದ್ಯರು ಸಲೀಸಾಗಿ ಈ ದಂಡ ಪಾ… ಖಾಸಗಿ ಆಸ್ಪತ್ರೆಗಳ ಕಡೆ ಮುಖ ಮಾಡುತ್ತಿದ್ದಾರೆ ಅ… ಸ್ವಂತ ನರ್ಸಿಂಗ್ ಹೋಂ ಅಥವಾ ಕ್ಲಿನಿಕ್ ತೆರೆಯ…

ಪರಿಸ್ಥಿತಿ ಹೀಗೆಯೇ ಮುಂದುವರೆದರೆ … ಗ್ರಾಮೀಣ ಭಾಗದಲ್ಲಿ ಹಾಗೂ ಇಡೀ ಉತ್ತರ ಕರ್ನಾ… ವಾಸಿಸುತ್ತಿರುವ ಕೋಟ್ಯಾನುಕೋಟಿ ಜನತೆಯ ಆರೋ… ಪಾಡೇನು? ಯಾವ ರೀತಿಯ ಮುಷ್ಕರ ಮಾಡಿದ… ಸಮಸ್ಯೆಯನ್ನು ಬಗೆಹರಿಸಬಹುದು?

ಈ ಎಲ್ಲಾ ದುರವಸ್ಥೆಯನ್ನು ಖಾಸಗಿ ಆಸ್ಪತ್ರೆಗಳು, ...ಬುಕೊಡೆಗಳಂತೆ ತಲೆಯೆತ್ತಿರುವ ನರ್ಸಿಂಗ್ ಹೋಂಗಳು ...ಳಕೆ ಮಾಡಿಕೊಂಡು ಜನರನ್ನು ಸುಲಿಗೆ ಮಾಡುತ್ತಿವೆ. ...ದಿಗೂ ಸಾವಿರಗಟ್ಟಳೆ ಬಿಲ್ ವಸೂಲು ಮಾಡುವ ...ದಾಹರಣೆಗಳಿವೆ.

...ತಮ್ಮ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ...ಂಗಳ ಹಿಂದೆಯೇ ವೈದ್ಯರ ಸಂಘಟನೆ ಸರ್ಕಾರಕ್ಕೆ ...ಟಿಸ್ ಕಳಿಸಿತ್ತು. ಸರ್ಕಾರವನ್ನು ಮಣಿಸಲು ಬ್ರಹ್ಮಾಸ್ತ್ರ ...ಬಳಸಿದ ವೈದ್ಯರ ಸಂಘವು ಮುಷ್ಕರ ಎಂಬ ಪದ ...ಮಾಡಲೇ ಇಲ್ಲ. ಬದಲಿಗೆ ಸಾಮೂಹಿಕ ...ಜೀನಾಮೆಯ ತಂತ್ರವನ್ನು ಹೂಡಿತು. ಈ ತಂತ್ರಕ್ಕೆ ...ಣವೂ ಇತ್ತು. ವೈದ್ಯರು ಮುಷ್ಕರದಲ್ಲಿ ತೊಡಗುವುದು ...ನೂನುಬಾಹಿರ ಎಂದು ಈ ಹಿಂದೆ 2 ಬಾರಿ ...ಕೋರ್ಟ್ ಆದೇಶ ನೀಡಿದೆ. ಹೀಗಾಗಿ ಕಾನೂನು ...ದಿಂದ ತಪ್ಪಿಸಿಕೊಳ್ಳಲು ಸಾಮೂಹಿಕ ರಾಜೀನಾಮೆಯ ...ತಂತ್ರವನ್ನು ಬಳಸಿದರು.

...ಇದಕ್ಕೆ ಆರೋಗ್ಯ ಮಂತ್ರಿ ಸಕಾರಾತ್ಮಕವಾಗಿ ...ಸಿದರೂ ಆರೋಗ್ಯ ಇಲಾಖೆಯ ಕಾರ್ಯದರ್ಶಿ ...ಲಿಂ ಎಂಬ ಅಧಿಕಾರಿ ಉದ್ದಕ್ಕೂ ಉದ್ಧಟತನದ ...ನೆ ತೋರಿದ. ಅಧಿಕಾರಿಗಳ ಚಿತಾವಣೆಯಿಂದಾಗಿ ...ಷ್ಕರನಿರತ ವೈದ್ಯರಿಗೆ ಶೋಕಾಸ್ ನೋಟಿಸ್ ಜಾರಿ ...ಡುತ್ತೇವೆಂದು ಹೇಳುತ್ತಾ ಮುಷ್ಕರ ಮುರಿಯಲು ...ರ ಅಗ್ಗದ ಪ್ರಯತ್ನ ನಡೆಸಿತು. ಆದರೆ "ಈಗಾಗಲೇ ...ದ್ಯರು ರಾಜೀನಾಮೆ ಕೊಟ್ಟಿರುವುದರಿಂದ ಸರ್ಕಾರದ ...ಕಾಸ್ ನೋಟಿಸ್‌ಗೆ ಯಾವುದೇ ಬೆಲೆಯಿಲ್ಲ. ಸರ್ಕಾರ ...ಗೇ ತಮ್ಮ ಉದ್ಧಟತನ ಮುಂದುವರೆಸಿದರೆ ನಾವು ...ಾರಿ ವೈದ್ಯಕೀಯ ಸೇವೆಯನ್ನು ರಾಜ್ಯಾದ್ಯಂತ ಪ್ರಾರಂಭಿಸಿ, ...ು ಮಾದರಿ ಆರೋಗ್ಯ ಸೇವೆ ಹೇಗಿರಬೇಕು ...ುದನ್ನು ಸರ್ಕಾರಕ್ಕೆ ತೋರಿಸಿಕೊಡುತ್ತೇವೆ" ಎಂದು ...ಎಚ್.ರವೀಂದ್ರ ಎಚ್ಚರಿಕೆ ನೀಡಿದ್ದರು.

...ಈ ಮಧ್ಯೆ ಅಮೃತೇಶ್ ಎಂಬ ವಕೀಲರೊಬ್ಬರು ...ಐಎಲ್ ದಾಖಲಿಸಿದ್ದರಿಂದ ಹೈಕೋರ್ಟ್ ಮಧ್ಯಪ್ರವೇಶ ...ಡಿತು. ಪರಿಸ್ಥಿತಿಯನ್ನು ನಿಭಾಯಿಸಲು ಎಸ್ಮಾ ...ುದೆಯನ್ನು ಬಳಸದಿರುವುದಕ್ಕೆ ಹಾಗೂ ವೈದ್ಯರ ...ಜೀನಾಮೆಯನ್ನು ಅಂಗೀಕಾರ ಮಾಡದೆ ಇರುವ ಸರ್ಕಾರದ ...ವನ್ನು ಪ್ರಶ್ನಿಸಿದ ಕೋರ್ಟ್, ವೈದ್ಯರು ಮುಷ್ಕರ ...ಡುವುದು ಈ ಹಿಂದಿನ ಹೈಕೋರ್ಟ್ ಆದೇಶಗಳ ...ಲ್ಲಂಘನೆಯಾಗುತ್ತದೆ ಎಂಬ ಅಂಶವನ್ನು ವೈದ್ಯರ ಗಮನಕ್ಕೆ ...ಬೇಕೆಂದು ಸೂಚಿಸಿತು.

...ಮತ್ತೊಂದೆಡೆ ವೈದ್ಯರ ಗೈರುಹಾಜರಿಯಿಂದ ...ಗಿಗಳಿಗೆ ಉಂಟಾಗಬಹುದಾದ ಅನಾನುಕೂಲಗಳನ್ನು ...ಿಸಲು ಮಾಧ್ಯಮಗಳು ಕಾತರದಿಂದ ಕಾಯುತ್ತಿದ್ದವು. ...ಬೇ ಅಂಥಾ ಒಂದೆರಡು ಸುದ್ದಿಗಳೂ ಹೊರಬಂದವು. ...ಹೀಗೆ ದಿನೇದಿನೇ ಪರಿಸ್ಥಿತಿ ಬಿಗಡಾಯಿಸುತ್ತಾ ...ುತ್ತಿದ್ದಂತೆ ಸಿಎಂ ಸಿದ್ದರಾಮಯ್ಯನವರೇ ನೇರವಾಗಿ ...ಮಧ್ಯ ಪ್ರವೇಶಿಸುವುದು ಅನಿವಾರ್ಯವಾಯಿತು. ಅವರು ಕೂಡ ...ಡಕ್ಕಳಿಯದೇ ಬೇರೆ ದಾರಿಯೇ ಇರಲಿಲ್ಲ. ಹೀಗಾಗಿ ...ದ್ಯರ ಸಂಘದ ಪದಾಧಿಕಾರಿಗಳೊಂದಿಗೆ ಸಭೆ ನಡೆಸಿದ ...ನೇತೃತ್ವದ ಸರ್ಕಾರಿ ತಂಡ ವೈದ್ಯರ ಬಹುಪಾಲು ...ಬೇಡಿಕೆಗಳಿಗೆ ಅಸ್ತು ಎಂದಿದೆ. ಕೆಲವೊಂದು ಬೇಡಿಕೆಗಳನ್ನು ...ಶೀಲನೆಗೆ ಒಳಪಡಿಸುವುದಾಗಿ ಹೇಳಿದೆ.

...ಅಂತೂ ವೈದ್ಯರ ರಾಜೀನಾಮೆ ತಂತ್ರ ಫಲ ಕೊಟ್ಟಿದೆ. ...ರೋಗ್ಯ ಸಚಿವ ಯು.ಟಿ.ಖಾದರ್ ಪ್ರಕಾರ ರಾಜೀನಾಮೆ ...ಟ್ಟಿದ್ದು 911 ಮಂದಿ ಮಾತ್ರ. ಆದರೆ ವೈದ್ಯರ ...ಘಟನೆಯ ಹೇಳಿಕೆ ಪ್ರಕಾರ 2800!


...ಈ ಅಂಕಿಅಂಶಗಳ ವ್ಯತ್ಯಾಸ ಏನೇ ಇರಲಿ, ವೈದ್ಯರ ...ಜೀನಾಮೆ ತಂತ್ರ ಅಂತಿಮವಾಗಿ ಸರ್ಕಾರಕ್ಕೆ ಬಿಸಿ ...ಟ್ಟಿಸಿದ್ದಂತೂ ನಿಜ.


...ಕರ್ನಾಟಕದ ಆರೋಗ್ಯ ಕ್ಷೇತ್ರದಲ್ಲಿ ಮತ್ತೊಂದು ...ುಖ ಸಮಸ್ಯೆಯೂ ಇದೆ. ಜಿಲ್ಲಾ/ತಾಲೂಕು ಆಸ್ಪತ್ರೆಗಳಲ್ಲಿ ...ರ್ಯ ನಿರ್ವಹಿಸುವ ಕೆಲವು ವೈದ್ಯರು ಆಸ್ಪತ್ರೆ ದಿನಚರಿಗೆ ...ಹಾಕಿ ತಮ್ಮ ಖಾಸಗಿ ನರ್ಸಿಂಗ್ ಹೋಮ್ ಅಥವಾ ...ಗಳಲ್ಲಿ ಬ್ಯುಸಿಯಾಗಿ ಆರೋಗ್ಯ ಸೇವೆಯಲ್ಲಿ ...ತೊಡಗಿಕೊಳ್ಳುತ್ತಿದ್ದಾರೆ. ಸರ್ಕಾರಿ ಆಸ್ಪತ್ರೆಗಳು ಇವರ ಪಾಲಿಗೆ ...ಗಿರಾಕಿಗಳನ್ನು ಸೆಳೆಯುವ ಅಡ್ಡೆಗಳು ಮಾತ್ರ. ಆರೋಗ್ಯ ...ಸೇವೆಯಲ್ಲಿ ಇಂಥಾ ಭೂಪರೂ ಅನೇಕ ಮಂದಿ ಇದ್ದಾರೆ. ...ಜಿಲ್ಲಾ ಆಸ್ಪತ್ರೆ ಇದಕ್ಕೆ ಒಂದು ಉದಾಹರಣೆ.


...ಈ ಎಲ್ಲಾ ಸಮಸ್ಯೆಗಳನ್ನು ಹಠಾತ್ತಾಗಿ ಒಂದೇ ದಿನದಲ್ಲಿ ...ರಿಸಲು ಹೇಗೂ ಸಾಧ್ಯವಿಲ್ಲ. ವೈದ್ಯರಲ್ಲಿ ಸೇವಾ ...ಮನೋಭಾವವನ್ನು ಮೂಡಿಸುವುದು ದುಸ್ಸಾಧ್ಯದ ಮಾತು. ...ಸಂಸ್ಥೆಗಳು ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಬೇಕು. ...ಕಠಿಣ ಕಾನೂನುಗಳನ್ನು ರಚಿಸುವುದು ಮಾತ್ರವಲ್ಲದೆ ...ಗಳನ್ನು ಕಟ್ಟುನಿಟ್ಟಾಗಿ ಜಾರಿ ಮಾಡುವ ಇಚ್ಛಾಶಕ್ತಿಯನ್ನು ...ಕ ತೋರಿಸುವಂತಾದರೆ ನಾನಾರೀತಿಯ ...ಗಳಿಂದ ನರಳುತ್ತಿರುವ ಆರೋಗ್ಯ ವ್ಯವಸ್ಥೆ ...ಮಟ್ಟಿಗಾಗಿ ಸುಧಾರಿಸಬಹುದು.

● ದೊಡ್ಡಿಪಾಳ್ಯ ನರಸಿಂಹಮೂರ್ತಿ

# ದಾವಣಗೆರೆ ಪಾಲಿಕೆಯ ದುಃಸ್ಥಿತಿ


ದಿನೇಶ್


ರಮೇಶ್ ಶಿವನಳ್ಳಿ


ನಾರಾಯಣಪ್ಪ


ರೇಣುಕಾಬಾಯಿ

ದಾವಣಗೆರೆ ಮಹಾನಗರ ಪಾಲಿಕೆಯ ದುಃಸ್ಥಿತಿಯ ಬಗ್ಗೆ ಎಷ್ಟು ಬರೆದರೂ ಸಾಲದು. ಅದೊಂದು ಕಾಲಕ್ಕೆ ಕರ್ನಾಟಕದ 'ಮಧ್ಯಮ ರಾಜಧಾನಿ'ಯಾಗಿ ಮಿಂಚಿದ್ದ ಈ ಕಾಟನ್ ಸಿಟಿ ಇವತ್ತು ಭ್ರಷ್ಟರಿಂದಾಗಿ ಕೊಳಚೆ ಗುಂಡಿಯಾಗುತ್ತಿದೆ. ಹಿಂದೆ ನಗರ ಪಾಲಿಕೆಯಲ್ಲಿ ಅಧಿಕಾರದಲ್ಲಿದ್ದ ಬಿಜೆಪಿಗಳ ತಿನ್ನಾಟವನ್ನು ಕಂಡು ಬೇಸ್ತು ಬಿದ್ದಿದ್ದ ದಾವಣಗೆರೆ ಮತದಾರ ಕಳೆದ ಚುನಾವಣೆಯಲ್ಲಿ ಚೆಡ್ಡಿಗಳನ್ನು ಸಾರಾಸಗಟಾಗಿ ಮನೆಗಟ್ಟಿ ಒಟ್ಟು 44 ಸದಸ್ಯ ಬಲದ ಪಾಲಿಕೆಯಲ್ಲಿ 39 ಕಾಂಗ್ರೆಸ್ ಕಾರ್ಪೋರೇಟಗರನ್ನು ಗೆಲ್ಲಿಸಿದ್ದ. ಎಸ್.ಎಸ್.ಮಲ್ಲಿಕಾರ್ಜುನ್ ನೇತೃತ್ವದಲ್ಲಿ ಹೊಸ ಟೀಮು ನಗರವನ್ನು ಉದ್ಧಾರ ಮಾಡಿಬಿಡುತ್ತದೆ ಎಂಬ ದಾವಣಗೆರಿಗರ ಕನಸು ಬರಬರುತ್ತಾ ಭ್ರಮೆ ಎನಿಸುತ್ತಿದೆ. ಶಾಮನೂರು ಶಿವಶಂಕರಪ್ಪ ಇಲ್ಲಿನ ಹಿರಿ ತಲೆಯಾಗಿದ್ದರೂ, ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದರೂ ಜನ ಭರವಸೆ ಇರಿಸಿದ್ದು ಅವರ ಮಗ ಮಲ್ಲಿಕಾರ್ಜುನ್ ಮೇಲೆ. ಎಸ್.ಎಂ.ಕೃಷ್ಣ ಮಂತ್ರಿಮಂಡಲದಲ್ಲಿ ಕ್ರೀಡಾ ಮತ್ತು ಯುವಜನ ಸಚಿವನಾಗಿ, ಜಿಲ್ಲೆಯ ಉಸ್ತುವಾರಿ ಹೊಣೆ ಹೊತ್ತಿದ್ದ ಮಲ್ಲಿಕಾರ್ಜುನ್‌ರ ಅಭಿವೃದ್ಧಿಯ ಕಾರ್ಯಗಳನ್ನು ಕಂಡು ಮೆಚ್ಚಿಕೊಂಡಿದ್ದ ಜನ ಅದೇ ಅಭಿವೃದ್ಧಿಯ ನಿರೀಕ್ಷೆಯಲ್ಲಿ ಕೈ ಕಾರ್ಪೋರೇಟರ್‌ಗಳಿಗೆ ಮತ ಹಾಕಿದ್ದರು. ಪಾಲಿಕೆ ಕೈ ತೆಕ್ಕೆಗೆ ಬಂದು ಎರಡು ವರ್ಷಗಳು ಹಾಳಾಗಿ ಹೋದರೂ ದೇವನಗರಿಯ ಕೊಳೆ ಮಾತ್ರ ಹಾಗೇ ಉಳಿದಿದೆ.

ಭ್ರಷ್ಟ ಅಧಿಕಾರಿ ವರ್ಗ, ಹೊಣೆಗೇಡಿ ಚುನಾಯಿತ ಕಾರ್ಪೋರೇಟರ್‌ಗಳಿಂದಾಗಿ ಪಾಲಿಕೆಯ ಬೊಕ್ಕಸ ಸೋರಿಹೋಗುತ್ತಿದೆ. ಇದನ್ನೆಲ್ಲಾ ಹದ್ದುಬಸ್ತಿನಲ್ಲಿಡಬೇಕಾಗಿದ್ದ ಎಸ್.ಎಸ್. ಮಲ್ಲಿಕಾರ್ಜುನ್ ಲೋಕಸಭಾ ಚುನಾವಣೆ ಸೋಲನ್ನೇ ತೀವ್ರವಾಗಿ ಮನಸ್ಸಿಗೆ ಹಾಕಿಕೊಂಡು ಮನೆ ಸೇರಿಬಿಟ್ಟಿದ್ದಾರೆ. ಭ್ರಷ್ಟರಿಗೆ ಮೇಯಲು ಇದು ಮತ್ತಷ್ಟು ಸುವರ್ಣಾವಕಾಶ ಒದಗಿಸಿದಂತಾಗಿದೆ.

## ಅಮ್ಮಾವ್ರ ಗಂಡಂದಿರ ದರ್ಬಾರು

'ಹುಚ್ಚನ ಮದ್ವೇಲಿ ಉಂಡೋನೆ ಜಾಣ' ಎನ್ನುವಂತ ಪರಿಸ್ಥಿತಿ ಇಲ್ಲಿ ನಿರ್ಮಾಣವಾಗಿದೆ. ಯಾಕೆಂದರೆ ಜನ ಮತ ಹಾಕಿ ಗೆಲ್ಲಿಸಿದ್ದು ಯಾರನ್ನೋ, ಇಲ್ಲಿ ಅಧಿಕಾರ ದರ್ಪ ಮೆರೆಯುತ್ತಿರೋದು ಮತ್ಯಾರೊ. ದಾವಣಗೆರೆ ಮಹಾನಗರ ಪಾಲಿಕೆಯಲ್ಲಿ 9 ಮಹಿಳಾ ಸದಸ್ಯರಿದ್ದಾರೆ. ಗೆದ್ದ ಹೊಸತರಲ್ಲಿ ಹಾರ ತುರಾಯಿ ಹಾಕಿಸಿಕೊಳ್ಳಲು ಈ ಮಹಿಳಾಮಣಿಗಳು ಪಾಲಿಕೆ ಕಚೇರಿಗೆ ಬಂದದ್ದು ಬಿಟ್ಟರೆ ಆಮೇಲೆ ಪಾಲಿಕೆಯ ಮುಖವನ್ನೇ ನೋಡಿಲ್ಲ. ಈ ಮಹಿಳಾ ಕಾರ್ಪೋರೇಟರುಗಳ ಗಂಡಂದಿರೇ ಕಾರ್ಪೋರೇಟರುಗಳಾಗಿ ಮೆರೆದಾಡುತ್ತಿದ್ದಾರೆ. ಅಸಲಿಗೆ ಈ 9 ಮಹಿಳಾ ಕಾರ್ಪೋರೇಟರುಗಳ ಗಂಡಂದಿರಲ್ಲಿ ಬಹುತೇಕರು ಮಾಜಿ ಸದಸ್ಯರೇ ಆಗಿದ್ದಾರೆ.

ಬೇರೆಯವರ ಮಾತು ಹಾಗಿರಲಿ, ಸ್ವತಃ ಮೇಯರ್ ವಿಚಾರದಲ್ಲೇ ಈ ಅಟಾರ್ಜಿ ಪೊಲಿಟಿಕ್ಸ್ ಭರ್ಜರಿಯಾಗಿ ನಡೆಯುತ್ತಿದೆ. ರೇಣುಕಾಬಾಯಿ ದಾವಣಗೆರೆ ಮಹಾನಗರ ಪಾಲಿಕೆಯ ಅಧಿಕೃತ ಮೇಯರಾಗಿದ್ದರೂ ಆಕೆಯ ಗಂಡ ವೆಂಕಟೇಶ್ವರ ನಾಯನದ್ದೇ ಕಾರುಬಾರು. ಹೆಂಡತಿಯ ಆಡಳಿತದಲ್ಲಿ ಗಂಡ ಹಸ್ತಕ್ಷೇಪ ಮಾಡಲು ಶುರು ಮಾಡಿದಂದಿನಿಂದಲೇ ಪಾಲಿಕೆಯ ಆಡಳಿತ ಕೆಟ್ಟು, ಕೆರಾ ಹಿಡಿಯಿತು. ವೆಂಕಟೇಶನಾಯ್ಕ ಅದೆಷ್ಟು ಹಸಿದಿದ್ದನೋ ಭಗದಂತನೇ ಬಲ್ಲ. ಕೈಗೆ ಸಿಕ್ಕಿದ್ದನ್ನೆಲ್ಲ ನುಂಗತೊಡಗಿದ. ವೆಂಕಟೇಶನ ನುಂಗಾಟಕ್ಕೆ ಪಾಲಿಕೆಯ ಆಡಳಿತವೂ ಸಾಥ್ ನೀಡಿತು. ಹಾಗಾಗಿಯೇ ವೆಂಕಟೇಶನಾಯ್ಕ ಮೇಯರ್ ಕಚೇರಿಯಲ್ಲಿ ಕುಳಿತೇ ಆಡಳಿತ ಚಲಾಯಿಸತೊಡಗಿದ.

## 'ಕಮೀಶನ್' ನಾರಾಯಣಪ್ಪ

ದಾವಣಗೆರೆ ಮಹಾನಗರ ಪಾಲಿಕೆಗೆ ನಾರಾಯಣಪ್ಪ ಎಂಬ ಆಸಾಮಿಯೇ ಕಮೀಷನರ್. ಆದರೆ ಜನ ಈತನನ್ನು ಕಮೀಷನರ್ ನಾರಾಯಣಪ್ಪ ಎನ್ನುವ ಬದಲು ಕಮೀಶನ್ ನಾರಾಯಣಪ್ಪ ಎಂದು ಕರೆಯುವಂತಾಗಿದೆ. ಈತ ಅದ್ಯಾವಾಗ ಪಾಲಿಕೆಗೆ ವಕ್ಕರಿಸಿದನೋ, ಆಗಿಂದಲೇ ಪಾಲಿಕೆಯ ಇದ್ದಬದ್ದ ಮಾನ ಮರ್ಯಾದೆಯೆಲ್ಲ ಬೀದಿಗೆ ಬಂತು. ತನ್ನ ಕೈ ಕೆಳಗಿನ ಭ್ರಷ್ಟ ಅಧಿಕಾರಿಗಳು-ಗುಮಾಸ್ತರುಗಳಿಗೆಲ್ಲಾ ಬಾಸಾಗಿ ಹೋದ. ಪಾಲಿಕೆಯ ಆಯಕಟ್ಟಿನ ಜಾಗಗಳಿಗೆಲ್ಲ ಹಫ್ತಾ ನೀಡುವ ಹಾದಾಳಿ ಭ್ರಷ್ಟ ಅಧಿಕಾರಿ ಗುಮಾಸ್ತರುಗಳನ್ನು ತಂದು ಕೂರಿಸಿದ್ದೇ ಇವನ ಮಹಾನ್ ಸಾಧನೆ. ಅವರಿಂದ ಕಮೀಶನ್ ಪೀಕುವುದು ಈತನ ನಿತ್ಯ ಕಾಯಕ.

ಪಾಲಿಕೆಯ ನಿವೇಶನ ಶಾಖೆಗೆ ಕೃಷ್ಣ ಎನ್ನುವ ಹಗಲು ದರೋಡೆಕೋರನನ್ನು ಪ್ರತಿಷ್ಠಾಪಿಸಿದ್ದು ಕೂಡಾ ಇದೇ ನಾರಾಯಣಪ್ಪ. ಪಾಲಿಕೆಯ ಆಸ್ತಿ ಎಲ್ಲೆಲ್ಲಿದೆ ಎನ್ನುವ ಪಕ್ಕಾ ಮಾಹಿತಿ ಇರುವ ಕೃಷ್ಣ ಅವೆಲ್ಲವನ್ನು ಕೃಷ್ಣನ ಲೆಕ್ಕದಲ್ಲಿ ಮುಂಡಾಮೋಚುತ್ತಿದ್ದಾನೆ. ಡೋರ್ ನಂಬರ್ ನೀಡುವ ಮಹತ್ವದ ಜವಾಬ್ದಾರಿ ಹೆಗಲಿಗೇರಿಸಿಕೊಂಡಿರುವ ಕೃಷ್ಣ ನಕಲಿ ಡೋರ್ ನಂಬರ್ ನೀಡುವ ಬಹುದೊಡ್ಡ ಭ್ರಷ್ಟ ಪರಂಪರೆಯ ಹರಿಕಾರ ಎಂದರೂ ತಪ್ಪಾಗಲಿಕ್ಕಿಲ್ಲ. ಕೆಲ ವರ್ಷಗಳ ಹಿಂದೆ ಏನೂ ಅಲ್ಲದ ಕೃಷ್ಣ ಇವತ್ತು ಕೋಟಿಗಳ ಲೆಕ್ಕಕ್ಕೆ ತೂಗುತ್ತಾನೆಂದರೆ ಅವನ ಕೈಚಳಕ ಅದಿನ್ನೆಂತದ್ದಿರಬೇಡ.

ಇನ್ನು ಶಾಮನೂರು ಬಸವರಾಜ ಎನ್ನುವ ಮತ್ತೊಬ್ಬ ಗುಮಾಸ್ತ ಪಾಲಿಕೆಯ ಕಂದಾಯ ಇಲಾಖೆಯನ್ನೇ ಕುಲಗೆಡಿಸಿಬಿಟ್ಟಿದ್ದಾನೆ. ಪಾಲಿಕೆಯ ವ್ಯವಸ್ಥಾಪಕ ಹುದ್ದೆಗೆ ವಕ್ಕರಿಸಿಕೊಂಡಿರುವ ಮತ್ತೊಂದು ಕ್ರಿಮಿ ರಮೇಶ್ ಬೊಕ್ಕಸವನ್ನು ಬರಿದು ಮಾಡುತ್ತಿದ್ದಾನೆ. ಈ ರಮೇಶ್ ಹಿಂದೆ ಭದ್ರಾವತಿಯಲ್ಲಿದ್ದಾಗ ಕೂಲಿಗಾಗಿ ಕಾಳು ಯೋಜನೆಯ ಒಂದು ಲೋಡು ಅಕ್ಕಿ ಕದ್ದು ಸಿಕ್ಕಿಬಿದ್ದು ಕ್ರಿಮಿನಲ್ ಕೇಸು ಜಡಿಸಿಕೊಂಡಿದ್ದ. ಸಸ್ಪೆಂಡ್ ಆಗಿ ಮನೆ ಸೇರಬೇಕಾಗಿದ್ದ ಈತ ರಾಜಕಾರಣಿಗಳ ಶಿಫಾರಸ್ಸಿನ ಮರೆಯಲ್ಲಿ ದಾವಣಗೆರೆ ಪಾಲಿಕೆಗೆ ವಕ್ಕರಿಸಿದ್ದಾನೆ. ತಪ್ಪಿನಿಂದ ಪಾಠ ಕಲಿಯದ ಈತ ತನ್ನ ಹಾಳೆಯ ಚಾಳಿಗೆ ಹೊಸ ಹುರುಪು ತಂದುಕೊಂಡವನು ಉಗ್ರಾಣಕ್ಕೆ ಮುತ್ತಿದ ಹೆಗ್ಗಣದಂತೆ ಮೇಯುತ್ತಲೇ ಇದ್ದಾನೆ. ಅದೇರೀತಿ ಜಾಫರ್ ಎನ್ನುವ ಪರಿಸರ ಅಭಿಯಂತರನಂತೂ ನೀರು ಕುಡಿದಂಗೆ ಡೀಸೆಲ್ ಕುಡಿದರೆ, ಉದಯ ಕುಮಾರ್ ಎನ್ನುವ ವಿದ್ಯುತ್ ವಿಭಾಗದ ಜೇಇ ಖಜಾನೆಯನ್ನು ಕತ್ತಲೆಗೆ ತಳ್ಳುತ್ತಿದ್ದಾನೆ.

ಬಿಲ್ಡಿಂಗ್ ಲೈಸೆನ್ಸ್ ವಿಭಾಗದ ಚೀಫ್ ಆಗಿರುವ ಬಸವರಾಜಯ್ಯನಿಗೆ, ಮಾಜಿ ಸಚೇತಕ ಡಾ.ಶಿವಯೋಗಿ ಸ್ವಾಮಿಯ ಸಂಬಂಧಿ ಎನ್ನುವುದೊಂದೇ ಐಡೆಂಟಿಟಿ. ರಾಜಕೀಯ ಬೆಂಬಲ ಇರುವ ಬಸವರಾಜಯ್ಯ ಕಾಸು ಪೀಕಿದರೆ ಸಾಕು ಎಂಥಾ ಅಪಾಯಕಾರಿ, ಅಕ್ರಮ ಕಟ್ಟಡಗಳಿಗೂ ಮುದ್ರೆಯೊತ್ತಿಬಿಡುತ್ತಾನೆ. ಒಂದು ಲೈಸನ್ಸಿಗೆ ಇಪ್ಪತ್ತೈದು ಸಾವಿರ ಕೈಸೇರಿದರೆ ಮುಗಿಯಿತು ಪಾಲಿಕೆಯ ನಿಯಮಗಳು ಗಟಾರ ಸೇರಿಬಿಡುತ್ತವೆ. ಅಷ್ಟಿಲ್ಲದಿದ್ದರೆ ದಾವಣಗೆರೆಯಂತ ಸಿಟಿಯಲ್ಲಿ ಶಾಸಕ ಮಲ್ಲಿಕಾರ್ಜುನ್‌ರ ಮನೆಯೇ ನಾಚುವಂತಾ ಬಂಗಲೆಯನ್ನು ಬಸವರಾಜಯ್ಯ ಕಟ್ಟಿಸುತ್ತಿದ್ದಾನೆ?

ಇನ್ನು ಕಂದಾಯ ಇಲಾಖೆಯ ಪಾಡಂತೂ ಹೇಳತೀರದು. ಕಂದಾಯಾಧಿಕಾರಿ ವಾಸಣ್ಣನಂತಹ ಸಭ್ಯಸ್ಥನ್ನೇ ದಾಳವಾಗಿ ಬಳಸಿಕೊಂಡ ಗುಮಾಸ್ತರು ಖಾತಾ ಬದಲಾವಣೆಯಲ್ಲಿ ಲೂಟಿ ಹೊಡೆಯುವುದೇ ತಮ್ಮ ಕುಲ ಕಸುಬೆಂದು ಭಾವಿಸಿರುವಂತಿದೆ. ಶಂಕರಗೌಡ-ಶಾಮನೂರು ಬಸವರಾಜರಂತಹ 25 ಜನ ಗುಮಾಸ್ತರದ್ದು ಕಡುಭ್ರಷ್ಟರ ಕೂಟವಾಗಿಬಿಟ್ಟಿದೆ.

## ಮುಸುಕಿನ ಗುದ್ದಾಟ

ಇತ್ತ ಅಧಿಕಾರಶಾಹಿವರ್ಗ ಪಾಲಿಕೆಯನ್ನು ಮುಕ್ಕುತ್ತಿದ್ದರೆ ಅತ್ತ ಚುನಾಯಿತ ವರ್ಗ ಸ್ಥಾಯಿ ಸಮಿತಿ ಅಧ್ಯಕ್ಷಗಿರಿಗಾಗಿ ಕಚ್ಚಾಡುವುದನ್ನು ಇಂದಿಗೂ ನಿಲ್ಲಿಸಿಲ್ಲ. ಶಾಸಕ ಮಲ್ಲಿಕಾರ್ಜುನ್‌ರ ಕಟ್ಟಾ ಬೆಂಬಲಿಗ ಕಾರ್ಪೋರೇಟರ್ ದಿನೇಶ್ ಶೆಟ್ಟಿ ಸಾರ್ವಜನಿಕ ಆರೋಗ್ಯ ಶಿಕ್ಷಣ ಮತ್ತು ಸಾಮಾಜಿಕ ನ್ಯಾಯ ಸಮಿತಿಯ ಅಧ್ಯಕ್ಷನಾಗಿದ್ದರೂ ನಾಲಾಯಕ್ಕು; ಪ್ರಚಾರಪ್ರಿಯ. ಪಾಲಿಕೆಯಲ್ಲಿ ಪ್ರಭಾವವಿರದಿದ್ದರೂ ಮಲ್ಲಿಕಾರ್ಜುನರ ಹೆಸರಿನ ಬಲದಲ್ಲೇ ಶಿವನಹಳ್ಳಿ ರಮೇಶ್ ನಗರ ಯೋಜನಾ ಸಮಿತಿಗೆ ಅಧ್ಯಕ್ಷನಾಗಿದ್ದಾನೆ. ಇದ್ದುದರಲ್ಲಿ ಸಾರ್ವಜನಿಕರ ನಡುವೆ ದಕ್ಷನೆನ್ನುವ ಹೆಸರಿಟ್ಟುಕೊಂಡಿರೋದು ನಗರಸಭೆಯ ಮಾಜಿ ಅಧ್ಯಕ್ಷ ರಮೇಶ್. ಆತ ಸ್ವಚ್ಛ ಆಡಳಿತ ನೀಡಲು ಮುಂದಾದರೆ, ತನ್ನ ಸ್ಥಾಯಿ ಅಧ್ಯಕ್ಷಗಿರಿಗೇ ಸಂಚಕಾರ ತರಬಹುದೆನ್ನುವ ದೂರಾಲೋಚನೆಯಲ್ಲಿ ದಿನೇಶ್ ಶೆಟ್ಟಿ ಅಡ್ಡಗಾಲಾಕುತ್ತಾನೆ. ಈ ಇಬ್ಬರ ನಡುವಿನ ಮುಸುಕಿನ ಗುದ್ದಾಟ ಪಾಲಿಕೆಯ ಆಡಳಿತಕ್ಕೆ ಮಾರಕವಾಗಿದೆ.

ಪಾಲಿಕೆ ಇಷ್ಟೆಲ್ಲಾ ಅಧ್ವಾನವಾಗಿದ್ದರೂ ಶಾಸಕ ಮಲ್ಲಿಕಾರ್ಜುನ್ ಎಚ್ಚರವಾದಾಗ ಅದೇ ಕುಂದುವಾಡ ಕೆರೆ ಅಭಿವೃದ್ಧಿಯ ಬಗ್ಗೆ ಜಪಮಾಡುತ್ತಿರುವುದೇ ಹಾಸ್ಯಾಸ್ಪದವಾಗಿ ಕಾಣುತ್ತದೆ. 1500 ಕೋಟಿ ಅನುದಾನ ತಂದು ನಗರ ಅಭಿವೃದ್ಧಿಗೆ ಚಾಲನೆ ನೀಡುವ ಮಾತುಗಳನ್ನು ಮತದಾರ ನಂಬದಂತಾಗಿದೆ.

ಮಲ್ಲಿಕಾರ್ಜುನ್ ಮಹತ್ವಾಕಾಂಕ್ಷಿಯ ಶಾಸಕ, ನಗರಾಭಿವೃದ್ಧಿಗೆ ಹೆಚ್ಚು ಗಮನ ನೀಡುವ ಚತುರ ಎನ್ನುತ್ತಿದ್ದ ಜನರೇ ಈಗ ಭರವಸೆ ಕಳೆದುಕೊಳ್ಳುತ್ತಿದ್ದಾರೆ. ಮುಖ್ಯಮಂತ್ರಿ ನಿಧಿಯಿಂದ ಬಂದಿರುವ 100 ಕೋಟಿ ಅನುದಾನ ಸರಿಯಾಗಿ ಬಳಕೆಯಾಗುವ ಕುರಿತು ಜನರಲ್ಲಿ ವಿಶ್ವಾಸವೇ ಇಲ್ಲದಂತಾಗಿಹೋಗಿದೆ. ಅಧಿಕಾರಾವಧಿಯ ಎರಡು ವರ್ಷ ನಿರರ್ಥಕವಾಗಿ ಕಳೆದಿರುವ ಮಲ್ಲಿಕಾರ್ಜುನ್ ಇನ್ನಾದರೂ ಎಚ್ಚೆತ್ತುಕೊಳ್ಳಬೇಕಿದೆ.


ಕುಂದುವಾಡದ ಕೆರೆಯೊಂದೇ ದಾವಣಗೆರೆ ಅಭಿವೃದ್ಧಿ ಸಂಕೇತವಾಗುವ ಬದಲು ಮಹಾನಗರದ ಸಮಗ್ರ ಅಭಿವೃದ್ಧಿಗೆ ಹೆಚ್ಚು ಗಮನ ಹರಿಸಬೇಕಿದೆ. ಮಲ್ಲಿಕಾರ್ಜುನ್ ತಮ್ಮ ಇಚ್ಛಾಶಕ್ತಿ ಮೆರೆಯಬೇಕೆಂದರೆ ಉಳಿದ ಮೂರು ವರ್ಷದ ಅವಧಿಗಾದರೂ ದಿನೇಶ್ ಶೆಟ್ಟಿ, ಎ. ನಾಗರಾಜ, ಅರವಿಂದರಂತಹ ಪಟಾಲಂಗಳನ್ನು ದೂರವಿಡಬೇಕು. ನಿರ್ಮಿತಿ ಕೇಂದ್ರದಂಥಾ ಹಗಲು ದರೋಡೆಯ ಬೋರೆ ರಾಜಪ್ಪನಂಥಾ ಭ್ರಷ್ಟನ ಕೈಗೆ ಕೋಟ್ಯಾಂತರ ರೂಪಾಯಿ ಕಾಮಗಾರಿ ನೀಡುವುದನ್ನು ತಪ್ಪಿಸಬೇಕು. ಇಲ್ಲವೇ ಹೋದಲ್ಲಿ ಮುಂದೊಂದು ದಿನ ರಾಜಕೀಯ ಅಧಃಪತನದ ಪಶ್ಚಾತ್ತಾಪ ಅನುಭವಿಸಬೇಕಾಗುವುದು ಗ್ಯಾರಂಟಿ.

● ಟಿ.ಎನ್.ಷಣ್ಮುಖ



# ನಂದಿತಾ ಸಾವು ಮರ್ಯಾದಾ ಹತ್ಯೆಯೇ?

# ದೊಂಬಿ ಹಿಂದಿನ ಕೇಸರಿ ಬಣ್ಣ!!



ಉತ್ತರ ಸಿಕ್ಕದೋದ ಮೇಲೆ ಪ್ರಶ್ನೆಗಳದ್ದೇ ತಾಂಡವ! ನಂದಿತಾ ಸಾವಿನ ಪ್ರಕರಣದಲ್ಲಿ ನಡೆಯುತ್ತಿರೋದೇ ಇದು. ತಲೆಗೊಂದು ಪ್ರಶ್ನೆ, ದಿನಕ್ಕೊಂದು ಗೊಂದಲಗಳು ತೀರ್ಥಹಳ್ಳಿಯ ಆ ಮುಗ್ಧ ಹುಡುಗಿಯ ಸಾವನ್ನು ನಿಗೂಢವಾಗಿಸುತ್ತಲೇ ಇವೆ. ಸತ್ಯ ಹೊರಗೆಡವಬೇಕಾದ ಪೊಲೀಸರಿಗೆ ಚಡ್ಡಿಗಳ ದಾಂಧಲೆ ನಿಯಂತ್ರಿಸಿದರೆ ಸಾಕುಸಾಕೆನಿಸಿದೆ. ನಿಜ ಹೇಳಬೇಕೆಂದರೆ ಪ್ರತಿಭಟನೆಯ ನೆಪದಲ್ಲಿ ತೀರ್ಥಹಳ್ಳಿಯನ್ನು ಕೋಮುದಳ್ಳುರಿಯ ಕಿನ್ನಾಲಿಗೆಗೆ ನೂಕಿರುವ ಕೇಸರಿ ಪಡೆಗೆ ಸತ್ಯಾಂಶ ಬೆಳಕಿಗೆ ಬರುವುದು ಬೇಕಾಗಿಯೇ ಇಲ್ಲ ಎನಿಸುತ್ತೆ. ಇಲ್ಲದೇ ಹೋಗಿದ್ದರೆ ಪೊಲೀಸರ ತನಿಖೆಗೆ ಆರಂಭದಲ್ಲೇ ಅಡ್ಡ ಬರುತ್ತಿರಲಿಲ್ಲ. ನೋ ಡೌಟ್, ಇದೀ ಪ್ರಕರಣವನ್ನು ದಿಕ್ಕು ತಪ್ಪಿಸುತ್ತಿರುವುದರ ಹಿಂದೆ ಬಿಜೆಪಿಗಳ ಪೊಲಿಟಿಕ್ಸ್ ಮತ್ತು ಭಜರಂಗಿಗಳ ಕೋಮು ಕಿತಾಪತಿ ಖಂಡಿತ ಎದ್ದು ಕಾಣುತ್ತದೆ. ಕಳೆದ ಎರಡು ವಿಧಾನಸಭಾ ಚುನಾವಣೆಗಳಲ್ಲಿ ಸೋತು ಮಕಾಡೆ ಮಲಗಿರುವ ಕಮಲದ ಆರಗ ಜ್ಞಾನೇಂದ್ರನಿಗೆ ಜರೂರತ್ತಾಗಿ ಒಂದು 'ಇಶ್ಯೂ' ಬೇಕಾಗಿತ್ತೆನ್ನುವುದು ಎಷ್ಟು ಸತ್ಯವೋ ಸತತ ಹದಿನೈದು ವರ್ಷಗಳಿಂದಲೂ ತೀರ್ಥಹಳ್ಳಿಯಲ್ಲಿ ನೆಲೆ ಹರಡಿಕೊಳ್ಳಲು ಹಪಾಹಪಿಸುತ್ತಲೇ ಇದ್ದ ಭಜರಂಗಿ ದಳಕ್ಕೆ ಒಂದು ನೆಪ ಬೇಕಾಗಿತ್ತೆನ್ನುವುದೂ ಅಷ್ಟೇ ಸತ್ಯ. ಅಕ್ಕಪಕ್ಕದ ಕೊಪ್ಪ ಎನ್.ಆರ್.ಪುರ, ಹೆಬ್ರಿ, ಉಡುಪಿಗಳಲ್ಲಿ ಭಜರಂಗಿಗಳು ಹುಲುಸಾಗಿ ಬೆಳೆದುಕೊಂಡಿದ್ದರೂ ತೀರ್ಥಹಳಿಯನ್ನು ಆವರಿಸಲು ಅವರಿಗೆ ಸಾಧ್ಯವಾಗಿರಲಿಲ್ಲ. ಇಲ್ಲಿನ ಜನರ ಸಾಮರಸ್ಯ ಘಾತುಕಶಕ್ತಿಗಳಿಗೆ ಆ ಅವಕಾಶವನ್ನೇ ಕೊಟ್ಟಿರಲಿಲ್ಲ. ಆದರೆ ಈಗ ನಂದಿತಾ ಸಾವಿನ ರೂಪದಲ್ಲಿ ಅಂತಹ ಅವಕಾಶ ಲಭಿಸಿದ ಮೇಲೆ ಸುಮ್ಮನೆ ಬಿಟ್ಟಾರೆಯೇ? ಅದರ ಪ್ರತಿಫಲವೇ ಈ ದಳ್ಳುರಿ!

ನಂದಿತಾ ಸಾವು ಮತ್ತು ಆದಾದ ನಂತರದಲ್ಲಿ ವ್ಯವಸ್ಥಿತವಾಗಿ ಭುಗಿಲೆದ್ದ ಕೋಮುಗಲಭೆಯನ್ನು ಸೂಕ್ಷ್ಮವಾಗಿ ಕೆದಕುತ್ತಾ ಹೋದರೆ ಅಚ್ಚರಿ ಹುಟ್ಟಿಸುವ ಒಂದೊಂದೇ ಮಗ್ಗಲುಗಳು ಅನಾವರಣಗೊಳ್ಳುತ್ತಾ ಸಾಗುತ್ತವೆ. ಬಿಜೆಪಿ, ಭಜರಂಗಿಗಳು ಬೊಬ್ಬಿರಿಯುತ್ತಿರುವಂತೆ ಅಲ್ಲಿ ಅತ್ಯಾಚಾರ ನಡೆದಿಲ್ಲ ಎನ್ನುವುದು ವೈದ್ಯಕೀಯ ವರದಿಯಿಂದಲೇ ಸಾಬೀತಾಗಿಹೋಗಿದೆ. ಇನ್ನು ಗೊಂದಲ ಇರುವುದು ಆಕೆಯ ಸಾವಿಗೆ ಕಾರಣವಾಗಿರುವ ವಿಷ ಪ್ರಾಶನದ ಕುರಿತಂತೆ. ಅದೂ ಕೂಡ ಚಡ್ಡಿಗಳ ಆರೋಪಗಳಿಂದ ದೂರ ಸರಿಯುತ್ತಲೇ ಇದೆ. ಈಗಾಗಲೇ ತನಿಖೆ ಆರಂಭಿಸಿರುವ ಪ್ರಣವ್ ಮೊಹಾಂತಿಯವರ ಸಿಐಡಿ ತಂಡಕ್ಕೂ ಇಂತಹುದೇ ಸುಳಿವುಗಳು ಸಿಗುತ್ತಿವೆ.

## ಸುಳ್ಳುಗಳ ಹಿಂದಿನ ಸತ್ಯ!

ಅಪಹರಣ..... ಅತ್ಯಾಚಾರ..... ಕೊಲೆಯತ್ನ..... ಹೀಗೆ ಹಲವು ತಿರುವುಗಳನ್ನು ಪಡೆಯುತ್ತಲೇ ಬಂದ ನಂದಿತಾ ಸಾವು ಇದೀಗ ಬೇರೆಯದೇ ಸತ್ಯದತ್ತ ಹೊರಳುತ್ತಿದೆ. ನಂದಿತಾ ಸಾವನ್ನು ರಾಜಕೀಯ ದುರುದ್ದೇಶಕ್ಕಾಗಿ ಬಳಸಿಕೊಳ್ಳಲು ಹವಣಿಸಿದ ಚಡ್ಡಿಗಳ ಅಸ್ತ್ರಗಳು ಒಂದೊಂದಾಗಿ ಠುಸ್ಸೆನ್ನುತ್ತಿವೆ.

ಮೊದಲನೆಯದಾಗಿ ಅಲ್ಲೊಂದು ಅಪಹರಣವೇ ನಡೆದಿಲ್ಲ! ಈಗ ಹುಯಿಲೆಬ್ಬಿಸುತ್ತಿರುವಂತೆ ಅಕ್ಟೋಬರ್ 29ನೇ ತಾರೀಖು ಶಾಲೆಗೆಂದು ಹೊರಟು ಬಾಳೇಬೈಲಿನ ಬಸ್ ನಿಲ್ದಾಣದಲ್ಲಿ ನಿಂತಿದ್ದ ನಂದಿತಾಳನ್ನು ಕೆಂಪು ಮಾರುತಿ ಕಾರಿನಲ್ಲಿ ಬಂದ ಮೂವರು ಹುಡುಗರು ಅಪಹರಿಸಿಕೊಂಡು ಹೋಗಿದ್ದರಂತೆ. ಆ ಕಾರಿನ ಹಿಂದೆ ಉರ್ದುವಿನಲ್ಲಿ ಬರೆಯಲಾಗಿತ್ತಂತೆ. ಈ 'ಅಂತೆ'ಗಳನ್ನು ಕಂಡವರು ಇದುವರೆಗೂ ಎಲ್ಲಿಯೂ ನೇರವಾಗಿ ಒಪ್ಪಿಕೊಂಡಿಲ್ಲ. ಅಲ್ಲದೇ, ಬಾಳೇಬೈಲಿನಿಂದ ಆನಂದಗಿರಿ ಗುಡ್ಡಕ್ಕೆ ಹೋಗಬೇಕೆಂದರೆ ತೀರ್ಥಹಳ್ಳಿ ಬಸ್ ನಿಲ್ದಾಣವನ್ನು ಹಾದು ಹೋಗಬೇಕು. ಅಲ್ಲೊಂದು ಸಿಸಿ ಟಿವಿಯನ್ನು ಹಾಕಲಾಗಿದೆ. ಅಕ್ಟೋಬರ್ 29ನೇ ತಾರೀಖಿನ ಇಡೀ ಫೂಟೇಜ್‌ನಲ್ಲಿ ಕೆಂಪು ಬಣ್ಣದ, ಹಿಂದುಗಡೆ ಉರ್ದು ಬರಹವಿರುವ ಕಾರು ಅಲ್ಲೆಲ್ಲೂ ಕಾಣಿಸಿಕೊಂಡೇ ಇಲ್ಲ, ಇದನ್ನು ಸ್ವತಃ ತೀರ್ಥಹಳ್ಳಿ ಪೊಲೀಸರೇ ನೇರವಾಗಿ ಹೇಳಿಕೊಂಡಿದ್ದಾರೆ.

ಇನ್ನು ಮರಣೋತ್ತರ ವೈದ್ಯಕೀಯ ವರದಿಯು ನಂದಿತಾ ದೇಹದಲ್ಲಿ ವಿಷ ಇರುವುದನ್ನು ಖಾತ್ರಿಪಡಿಸುತ್ತದೆ. ಆದರೆ ಆ ವಿಷ ಹೇಗೆ ಆಕೆಯ ದೇಹ ಸೇರಿತೆನ್ನುವುದೇ ಸದ್ಯದ ಪ್ರಶ್ನೆ. ಚಡ್ಡಿಗಳು ತುಂಬಾ ಸಲೀಸಾಗಿ 'ಅತ್ಯಾಚಾರ ಮಾಡಲು ಹೊತ್ತೊಯ್ದಿದ್ದ ಆ ಸಾಬರ ಹುಡುಗರೇ ಆಕೆಗೆ ವಾಟರ್ ಬಾಟಲ್‌ನಲ್ಲಿ ವಿಷ ಬೆರೆಸಿ ಕುಡಿಸಿದ್ದಾರೆ' ಎಂಬುದಾಗಿ ಪ್ರಚಾರ ಮಾಡುತ್ತಿದ್ದಾರೆ. ಹಾಗೇ ಆಗಿದೆ ಎಂದಿಟ್ಟುಕೊಳ್ಳೋಣ; ಆದರೆ, ಘಟನೆ ನಡೆದದ್ದು ಅಕ್ಟೋಬರ್ 29ನೇ ತಾರೀಖು, ನಂದಿತಾ ಸಾವನ್ನಪ್ಪಿದ್ದು ಅಕ್ಟೋಬರ್ 31ನೇ ತಾರೀಖು. ವಿಷ ಕುಡಿದ ಯಾವುದೇ ವ್ಯಕ್ತಿ ಎರಡೆರಡು ದಿನ ಬದುಕಲಿಕ್ಕೆ ಸಾಧ್ಯವೇ?

ಹೋಗಲಿ, ಅದೇ ಹುಡುಗರು ಆನಂದಗಿರಿ ಗುಡ್ಡದ ಘಟನೆಯ ನಂತರ ಅದೇಗೋ ಬಂದು ಆಕೆಯ ಮನೆಯಲ್ಲೇ ವಿಷ ಕುಡಿಸಿರಬಹುದು ಅಥವಾ ಮತ್ತೊಮ್ಮೆ ಬೇರೆಲ್ಲಿಗೊ ಹೊತ್ತೊಯ್ದು ವಿಷ ಕುಡಿಸಿದ್ದಾರೆ ಅಂದುಕೊಳ್ಳೋಣ. ಆದರೆ ಅದೂ ಸಾಧ್ಯವಿಲ್ಲದ ಮಾತು. ಏಕೆಂದರೆ ಆಕೆಯನ್ನು ಮನೆಗೆ ವಾಪಾಸ್ ಕರೆತಂದ ನಂತರ ಆಕೆ ಮನೆಯನ್ನು ಬಿಟ್ಟು ಹೊರಗೇ ಹೋಗಿಲ್ಲ, ಅಂದರೆ ಬೇರೆಯವರು ವಿಷ ಕುಡಿಸುವ ಸಾಧ್ಯತೆ ಇರೋದು ಆನಂದಗಿರಿ ಗುಡ್ಡದಲ್ಲಿ ಮಾತ್ರ. ಹಾಗಾಗಿದ್ದರೆ ವಿಷ ಕುಡಿದ ನಂತರವೂ ನಂದಿತಾ ಎರಡು ದಿನ ಬದುಕಿದ್ದು ಹೇಗೆ? ಅದೂ ಯಾವ ಪರಿಣಾಮಕಾರಿ ಚಿಕಿತ್ಸೆಯೂ ಇಲ್ಲದೆ!

ಈಗ ಡೆತ್‌ನೋಟ್ ವಿಷಯಕ್ಕೆ ಬರುವುದಾದರೆ ಅದು ಆಕೆ ಬರೆದದ್ದೇ ಅಲ್ಲ ಎಂದು ಆಕೆಯ ಹೆತ್ತವರಿಂದಲೇ ಹೇಳಿಸಲಾಗುತ್ತಿದೆ. ಸರಿ, ಈ ವಿಷಯವನ್ನಾದರು ಆಕೆಯ ತಂದೆ ಕೃಷ್ಣಮೂರ್ತಿ ಖಡಾಖಂಡಿತವಾಗಿ ಒಪ್ಪಿಕೊಳ್ಳುತ್ತಾರಾ.... ಟೀವಿ ಚಾನೆಲ್‌ಗಳಲ್ಲಿ ಅವರ ಹೇಳಿಕೆಯನ್ನು ಗಮನಿಸಿದ್ದವರಿಗೆ ಈ ಬಗ್ಗೆ ಈಗಾಗಲೇ ಅನುಮಾನ ಮೂಡಿಯೇ ಇರುತ್ತೆ. ಒಂದು ಬಾರಿ ಅದು ತನ್ನ ಮಗಳ ಕೈ ಬರಹವೇ ಅಲ್ಲ ಎಂದೇಳುವ ಕೃಷ್ಣಮೂರ್ತಿ, ಮರುಕ್ಷಣವೇ ಅದು ನನ್ನ ಮಗಳದ್ದಾಗಿದ್ದರೂ ಆಕೆಗೆ ಬೆದರಿಸಿ ಬರೆಸಿರುವ ಸಾಧ್ಯತೆಯೂ ಇದೆ ಎಂದು ಗೊಂದಲ ಮೂಡಿಸುತ್ತಾರೆ. ಅಲ್ಲಿಗೆ ಕೈ ಬರಹ ತನ್ನ ಮಗಳದ್ದಲ್ಲ ಎಂದು ಖಂಡತುಂಡವಾಗಿ ಧಿಕ್ಕರಿಸುವ ವಿಶ್ವಾಸ ಅವರಿಗೂ ಇಲ್ಲ ಎಂದಾಯಿತು. ಮತ್ತೂ ಮುಂದುವರೆಯುವ ಕೃಷ್ಣಮೂರ್ತಿ ತನ್ನ ಮಗಳು ರೆಡ್ ಇಂಕ್ ಬಳಸುವುದೇ ಇಲ್ಲ, ಆದರೆ ಡೆತ್ ನೋಟ್ ರೆಡ್ ಇಂಕ್‌ನಲ್ಲಿದೆ ಎನ್ನುವ ಅನುಮಾನ ವ್ಯಕ್ತಪಡಿಸಿದ್ದಾರೆ. ಅದು ಅಂಥಾ ಗಂಭೀರ ಆಪಾದನೆ ಎನಿಸುತ್ತದೆಯೇ? ಸಾಮಾನ್ಯವಾಗಿ ಶಾಲೆಯಲ್ಲಿ ಮಕ್ಕಳು ಪ್ರಶ್ನೆ ಬರೆಯುವುದಕ್ಕಷ್ಟೇ ರೆಡ್ ಇಂಕ್ ಉಪಯೋಗಿಸುತ್ತಾರೆ. ಹಾಗಾಗಿ ರೆಡ್ ಇಂಕ್ ಪೆನ್‌ಗಳನ್ನು ತುಂಬಾ ಕಡಿಮೆ ಉಪಯೋಗಿಸುತ್ತಾರೆ. ಹಾಗಂತ ಅವರು ರೆಡ್ ಇಂಕ್‌ನಲ್ಲಿ ಬರೆಯುವುದೇ ಇಲ್ಲ ಎನ್ನಲಿಕ್ಕೆ ಆಗುತ್ತದೆಯೇ. ತಾನು ಬರೆದಿಟ್ಟ ಕಾಗದ ಕಸದ ಹಾಳೆಯಂತೆ ಮನೆಯವರ ನಿರ್ಲಕ್ಷ್ಯಕ್ಕೆ ತುತ್ತಾಗದೆ ಅವರ ಗಮನ ಸೆಳೆಯುವಂತಿರಲಿ ಎಂಬ ಯೋಚನೆಯಲ್ಲಿ ಆಕೆ ರೆಡ್ ಇಂಕ್ ಬಳಸಿರುವ ಸಾಧ್ಯತೆಯೂ ಇರಬಹುದಲ್ಲವೇ? ಅದೇನೆ



ನಂದಿತಾಳ ತಂದೆ-ತಾಯಿ


ಇರಲಿ, ಕೇವಲ ಇಂಕ್ ಬಣ್ಣದ ಕಾರಣಕ್ಕೆ ಡೆತ್ ನೋ[...] ಆಕೆಯದ್ದಲ್ಲ ಎನ್ನುವುದನ್ನು ಯಾರೂ ಒಪ್ಪಲಿಕ್ಕೆ ಸಾಧ್[...] ಎಲ್ಲದಕ್ಕೂ, ಲ್ಯಾಬ್ ರಿಪೋರ್ಟ್ ಉತ್ತರ ನೀಡಲಿದೆ.

ಇನ್ನು ನಂದಿತಾ ಹೆತ್ತವರು ಹೇಳುವಂತೆ 'ಒತ್ತಾಯ'ದಿ[...] ಆಕೆಯಿಂದ ಅದನ್ನು ಬರೆಸಿದ್ದಾರೆ ಎಂದಾದರೆ, ಆ ಸಾ[...] ಇರೋದು ಮನೆಯಲ್ಲಿ ಮಾತ್ರ! ಆನಂದಗಿರಿಯ ಗುಡ್ಡ[...] ಅತ್ಯಾಚಾರವನ್ನು ಮತ್ತು ವಿಷ ಪ್ರಾಶನವನ್ನು (ಚಡ್[...] ಲಾಜಿಕ್ ಪ್ರಕಾರ) ಅರ್ಧಕ್ಕೇ ಬಿಟ್ಟೋಡಿದ ಆ ಹುಡುಗ[...] ಒತ್ತಾಯಿಸಿ ಡೆತ್‌ನೋಟ್ ಬರೆಸುವ ವ್ಯವಧಾನವಾದ[...] ಎಲ್ಲಿಂದ ಬಂದೀತು?


ಬಹು ಮುಖ್ಯವಾದ ಸಂಗತಿಗೆ ಬರುವುದಾದರೆ, ಬ[...] ಉಸ್ತುವಾರಿ ಮಂತ್ರಿಯೂ ಆಗಿರುವ ತೀರ್ಥಹಳ್ಳಿಯ ಶ[...] ಕಿಮ್ಮನೆ ರತ್ನಾಕರ್ ಆರೋಪಿಗಳನ್ನು ರಕ್ಷಿಸುತ್ತಿದ್ದಾರೆ ಮ[...] ಪೊಲೀಸರು ಪ್ರಕರಣವನ್ನು ಮುಚ್ಚಿಹಾಕಲು ಯತ್ನಿಸುತ್ತಿ[...] ಎಂಬುದೇ ಕೇಸರಿ ಪಡೆಯ ಮುಖ್ಯ ಆರೋಪ. ಒ[...] ಸಣ್ಣ ಕಾಮನ್‌ಸೆನ್ಸ್ ಇದ್ದ ಎಂತವರಿಗೇ ಆದರೂ ಇಲ್ಲೊ[...] ಪ್ರಶ್ನೆ ಕಾಡಲೇಬೇಕು. ಸಚಿವ ಸ್ಥಾನದಲ್ಲಿರುವ ಯಾವು[...] ವ್ಯಕ್ತಿ ಮತ್ತು ಪೊಲೀಸ್ ವ್ಯವಸ್ಥೆ ಒಂದು ಪ್ರಕರಣ[...] ಮುಚ್ಚಿ ಹಾಕಲು ಯತ್ನಿಸುತ್ತಾರೆಂದರೆ ಆಪಾದಿತರು ಬಲ[...] ಹಿನ್ನೆಲೆಯುವರಾಗಿರುತ್ತಾರೆ. ಅಂದರೆ ಮಿನಿಸ್ಟರ್ ಮಗನ[...] ಎಂಪಿಯ ಸಂಬಂಧಿಕನೋ, ದೊಡ್ಡ ಬಂಡವಾಳಶಾಹಿ[...] ಬೀಗನೊ, ಕಡೇಪಕ್ಷ ಪೊಲೀಸ್ ಉನ್ನತಾಧಿಕಾರಿ[...] ಕುಡಿಯೋ ಆಗಿರುತ್ತಾರೆ. ಆದರೆ ನಂದಿತಾ ಪ್ರಕರಣ[...] 'ಸಾಬರ ಹುಡುಗರು' ಎನ್ನುವ ಆರೋಪ ಬಿಟ್ಟು ಅ[...] ಯಾರೆನ್ನುವ ಸುಳಿವು ಖುದ್ದೂ ಭಜರಂಗಿಗಳಿಗೇ ಸಿ[...] **Atleast,** ಅನುಮಾನದಲ್ಲಾದರೂ ಇಂತಹ ಘಟ[...] ಘಟಿಯ ಮಗನೆಂಬ ಉಸಿರು ಅವರ ಬಾಯಿಂದ ಹೊ[...] ತ್ತಿಲ್ಲ. ಅಲ್ಲಿಗೆ ಚಡ್ಡಿ ಸೃಷ್ಟಿತ ಅತ್ಯಾಚಾರಿಗಳ್ಯಾರೂ ಬ[...] ಬುಲೆಟ್‌ಗಳಲ್ಲ ಎನ್ನುವುದು ಸಾಬೀತಾಗುತ್ತದೆ. ನಂದಿ[...] ಕುಟುಂಬದ ಪಕ್ಕದ ಮನೆಯವ, ಅವರ ಕುಟು[...] ದೊಂದಿಗೂ ಸಲುಗೆಯಿಂದಿದ್ದ, ಆಕೆಯನ್ನು ಆಗಾಗ್ಗೆ [...] ಬೈಕ್‌ನಲ್ಲಿ ಸ್ಕೂಲಿಗೂ ಬಿಟ್ಟು ಬರುತ್ತಿದ್ದ ಎನ್ನುವ ಕಾರಣ[...] ಪ್ರಕರಣದಲ್ಲಿ ಚಡ್ಡಿಗಳಿಂದ ಫಿಟ್ ಮಾಡಲ್ಪಟ್ಟಿರುವ ಪರ್ವೇ[...] ಎಂಬಾತನಾದರು ಸರ್ವೇ ಸಾಧಾರಣ ಮೆಕ್ಯಾನಿಕ್ ಅ[...] ಅವನನ್ನು ಕರೆಸಿ ವಿಚಾರಣೆ ನಡೆಸಿದ ಪೊಲೀಸ[...] ಪ್ರಕರಣದಲ್ಲಿ ಆವನ ಪಾತ್ರವಿಲ್ಲ ಎಂದರಿತು ಮ[...] ಕಳುಹಿಸಿದ್ದಾರೆ. ಕಿವಿಗೆ ಹೆಡ್‌ಫೋನ್ ಸಿಕ್ಕಿಸಿಕೊಂಡಿರ[...] ಇಮ್ರಾನ್ ಎನ್ನುವ ಹುಡುಗನ ಫೋಟೋವನ್ನು ನಂದಿ[...] ಫೋಟೋ ಪಕ್ಕ ಅಂಟಿಸಿ ಈತನೇ ನಂದಿತಾಳನ್ನು ರೇ[...] ಮಾಡಿದ್ದು ಎಂಬುದಾಗಿ ಫೇಸ್‌ಬುಕ್‌ನಲ್ಲಿ ಚಡ್ಡಿ ವೀರ[...] ಪ್ರಚಾರ ಮಾಡುತ್ತಿದ್ದಾರೆ. ಆ ಹುಡುಗನಾದರೂ ಯ[...] ಎಂಬುದು ಸಹ ನಿಗೂಢ. ಆದರೆ ಅತ್ಯಾಚಾರಕ್ಕೆ ಯತ್ನಿ[...] ಹುಡುಗರು ತೀರ್ಥಹಳ್ಳಿಯ ದೊಡ್ಡ ವ್ಯಾಪಾರಿ ನ್ಯಾಶ[...] ಪರೀಫ್‌ರ ಮಗನ ದೋಸ್ತ್‌ಗಳು ಎಂದು ಇತ್ತೀ[...] ಚಡ್ಡಿಗಳು ಫೇಸ್‌ಬುಕ್‌ನಲ್ಲಿ ಬಿತ್ತರಿಸುತ್ತಿದ್ದಾರೆ. ಸಚಿವ ಕಿ[...] ರತ್ನಾಕರ್‌ಗೆ ಆಪ್ತರಾಗಿರುವ ಪರೀಫ್ ಮೇ[...] ಆಪಾದನೆಯನ್ನು ಕೊಂಚಮಟ್ಟಿಗೆ ಅನುಮಾನಿಸಬಹುದಾ[...] ಇದರ ಹಿಂದಿರುವ ಪೊಲಿಟಿಕಲ್ ಮತ್ತು ವ್ಯವಹಾ[...] ಮೋಟಿವೇಶನ್ ಗಮನಿಸಿದಾಗ ಅದು ಕೂಡಾ ಎ[...] ಕಪೋಲಕಲ್ಪಿತ ಎನ್ನುವುದು ಸಾಬೀತಾಗುತ್ತದೆ. ಅದ[...] ಮುಂದೆ ಗಮನಿಸೋಣ. ಆದರೆ ಮಗನ ಫ್ರೆಂಡ್ಸ್ ಎ[...] ಕಾರಣಕ್ಕೆ ಪರೀಫರಾಗಲಿ, ತಮ್ಮ ಆಪ್ತನ ಮಗನ ಫ್ರೆ[...] ಎನ್ನುವ ಮರ್ಜಿಗೆ ಕಿಮ್ಮನೆಯಾಗಲಿ ತಮ್ಮ ಕುತ್ತಿ[...] ನೇಣು ಬಿಗಿದುಕೊಳ್ಳುತ್ತಾರೆಂಬುದನ್ನು ಯಾವ ಲಾಜಿ[...] ಒಪ್ಪುವುದಿಲ್ಲ.

ಒಟ್ಟನಲ್ಲಿ ಬಿಜೆಪಿ, ಭಜರಂಗಿಗಳು ಯಾವ[...] ಆರೋಪಗಳನ್ನಿಟ್ಟುಕೊಂಡು ತೀರ್ಥಹಳ್ಳಿಯ ನೆಮ್ಮ[...] ಬೆಂಕಿ ಇಟ್ಟು ಅಬ್ಬರಿಸಿದ್ದರೂ ಅವೆಲ್ಲಾ ಸುಳ್ಳು ಎನ್ನುವ[...] ಮಾತ್ರ ಸತ್ಯ. ಹೇಗೆ ಮೋದಿಯನ್ನು ಪ್ರಧಾನಿಯನ್ನಾಗಿಸ[...] ದೆಹಲಿಯ ನಿರ್ಭಯಾ ಅತ್ಯಾಚಾರ ಹೋರಾಟವ[...] ಕಾಂಗ್ರೆಸ್ ವಿರೋಧಿ ಮೆಟ್ಟಿಲನ್ನಾಗಿ ಬಳಸಿಕೊಳ್ಳಲಾಯಿ[...] ಅದೇರೀತಿ ನಂದಿತಾ ಸಾವಿನ ಪ್ರಾಮಾಣಿಕ ಪ್ರತಿಭಟನೆಯ[...] ಕಿಮ್ಮನೆ ರತ್ನಾಕರ್ ಹಾಗೂ ಕಾಂಗ್ರೆಸ್ ರಾಜ್ಯ ಸರ್ಕಾ[...] ಮಸಿ ಬಳಿಯಲು ಬಳಸಿಕೊಳ್ಳುವ ಇರಾದೆಯ[...] ದೊಂಬಿಕಾರರಿಗೆ ಇದ್ದದ್ದು.


ನಂದಿತಾ ಪ್ರಕರಣ ಮೊದಮೊದಲು ಸಾರ್ವಜ[...] ಚರ್ಚೆಗೆ ಬಂದಾಗ ತೀರ್ಥಹಳ್ಳಿಯ ಎಲ್ಲಾ ಪ್ರಜ್ಞಾವ[...] ಪ್ರಗತಿಪರ, ಜಾತ್ಯತೀತ ಮನಸ್ಸಿನವರೂ ಪ್ರತಿಭಟನೆಯ[...] ಪಾಲ್ಗೊಂಡಿದ್ದುಂಟು. ಅನ್ಯಾಯವಾದ ಆ ಹುಡುಗಿಗೆ ನ್ಯಾ[...] ದೊರಕಬೇಕು, ಅತ್ಯಾಚಾರದ ಯತ್ನ ನಡೆದಿದ್ದರೆ ಅಂತವ[...] ಶಿಕ್ಷೆಯಾಗಬೇಕು ಎನ್ನುವ ಪ್ರಾಮಾಣಿಕ ಕೂಗು ಮೊಳ[...] ಆದರೆ ಭಜರಂಗಿ ಮತ್ತು ಬಿಜೆಪಿಗಳ ಎಂಟ್ರಿಯಿಂದ ಅ[...] ನಿಧಾನಕ್ಕೆ ಕೋಮು ರೂಪ ತಳೆಯುತ್ತಿದ್ದಂತೆ[...] ಪ್ರಜ್ಞಾವಂತರೆಲ್ಲಾ ಹಿಂದೆ ಸರಿದಿದ್ದರು. ಆಗಲೇ ಭಜರಂಗಿ[...] ಕೊಪ್ಪ, ಎನ್.ಆರ್.ಪುರ, ಹೆಬ್ರಿ, ಉಡುಪಿಗಳ[...] ಕಾರ್ಯಕರ್ತರನ್ನು ತೀರ್ಥಹಳ್ಳಿಗೆ ಆಮದು ಮಾಡಿಕೊ[...] ಗಲಾಟೆ ನಡೆಸಿದ್ದು, ತೀರ್ಥಹಳ್ಳಿಯ ಭಜರಂಗಿ ದ[...]



ಬಜ್ಪೆಯ ಕೋಮು ಪ್ರಚೋದನಾಕಾರಿ ಬ್ಯಾನರ್




ಚೆಡ್ಡಿಗಳ ಫೇಸ್‌ಬುಕ್ ವಿಕೃತಿ




ಷರೀಫ್ ವಿರುದ್ಧ ಫೇಸ್‌ಬುಕ್‌ನಲ್ಲಿ ಅಪಪ್ರಚಾರ



...ಂಡ ಬಾಳೆಬೈಲು ಸಂತೋಷ್ ಎಂಬಾತನೇ ಈ ...ವನ್ನು ವ್ಯವಸ್ಥೆ ಮಾಡಿದ್ದು ಎನ್ನಲಾಗುತ್ತಿದೆ. ಅಕ್ಕಪಕ್ಕದ ...ಲ್ಲೂಕುಗಳಿಂದ ಕಾರ್ಯಕರ್ತರನ್ನು ತೀರ್ಥಹಳ್ಳಿಗೆ ...ರುವ ಸಲುವಾಗಿ ಭಜರಂಗಿ ದಳ, ವಿಹಿಂಪ, ...ಪಿಗಳು ಜಂಟಿಯಾಗಿ ಹಂಚಿದ ಕರಪತ್ರವೇ ಇದಕ್ಕೆ ...ಪ್ರತಿಬಂಧಕಾಜ್ಞೆ ಧಿಕ್ಕರಿಸಿ ಪ್ರತಿಭಟನೆ ನಡೆಸುತ್ತಿದ್ದ ...ಬಿಜೆಪಿ ಮಹಿಳಾ ಮುಖಂಡರನ್ನು ಪೊಲೀಸರು ...ಸಿದರು ಎಂಬುದಾಗಿ ನಮ್ಮ ಮಾಧ್ಯಮಗಳು ...ದವಲ್ಲ, ಅವರ್‍ಯಾರೂ ತೀರ್ಥಹಳ್ಳಿಯವರೇ ಅಲ್ಲ; ... ಉಡುಪಿಯಿಂದ ಬಂದಿದ್ದವರು! ಬಿಜೆಪಿಗಳಿಗೆ, ...ಗಿಗಳಿಗೆ ನಿಜಕ್ಕೂ ನಂದಿತಾ ಸಾವಿನ ಆಕ್ರೋಶವಿದ್ದಿದ್ದರೆ ...ಹೊರಗೆಲ್ಲಿಂದಲೋ ಜನರನ್ನು ಕರೆತಂದು ಪ್ರತಿಭಟನೆ ...ವ ಜರೂರತ್ತಾದರು ಏನಿತ್ತು? ಇಲ್ಲಿರುವ ನಾಗರಿಕರ ...ಕೂಡಿ ಶಾಂತಿಯುತವಾಗಿ ಪ್ರತಿಭಟಿಸಬಹುದಿತ್ತಲ್ಲವೆ..

## ...ಗಾದರೆ ನಂದಿತಾ ಸತ್ತದ್ದು ಹೇಗೆ?

...ಕೆ, ನಂದಿತಾ ಸಾವಿಗೆ ಚೆಡ್ಡಿಗಳು ಮಾಡುವ ...ಪಗಳು ಕಾರಣವಲ್ಲದಿದ್ದರೆ ಆಕೆ ಸತ್ತದ್ದಾದರು ಹೇಗೆ? ...ಶ್ನೆಗೆ ಸಿಐಡಿ ತನಿಖಾ ತಂಡವೇ ಅಧಿಕೃತ ಉತ್ತರ ...ಬೇಕು. ಆದರೆ ತನಿಖೆಯನ್ನು ಸೂಕ್ಷ್ಮವಾಗಿ ಗಮನಿಸು... ಪತ್ರಿಕೆಗೆ ಕೆಲವೊಂದಷ್ಟು ಸುಳಿವು ಸಿಕ್ಕಿವೆ. ಆ ...ಗಳು ಇದುವರೆಗೂ ಕಾಣದ ಹೊಸ ಸತ್ಯದತ್ತ ...ವನ್ನು ಕರೆದೊಯ್ಯುತ್ತವೆ. ದಿನಕ್ಕೊಂದು ಟ್ವಿಸ್ಟ್ ...ಪಡೆದುಕೊಳ್ಳುತ್ತಲೇ ಬಂದ ನಂದಿತಾ ಕೇಸು ಇದೀಗ ...ನಂದಿತಾ ಮರ್ಯಾದಾ ಹತ್ಯೆಯಾ ಎನ್ನುವ ತಿರುವಿಗೆ ... ನಿಲ್ಲುತ್ತಿದೆ.

...ನಂದಿತಾ ಮೂಲತಃ ಮುಗ್ಧ ಹುಡುಗಿ. ಪರಿಚಯ... ...ರಿಗೆ ಬಲು ಬೇಗನೆ ಶರಣಾಗಿ ಬಿಡುತ್ತಿದ್ದಳು. ... ಆಕೆಗೆ ಮತ್ತೊಂದು ಕೋಮಿನ ಹುಡುಗ... ...ನ ಸ್ನೇಹವೂ ಬೆಳೆದಿತ್ತು, ಹಾಗಂತ ಆಕೆಯ ಸ್ನೇಹ ...ಲ್ಲೆ ಮೀರಿರಲಿಲ್ಲ, ಇದು ಆಕೆಯ ಹೆತ್ತವರಿಗೆ ... ಆತನಿಂದ ದೂರ ಇರುವಂತೆ ಎಚ್ಚರಿಕೆಯನ್ನೂ ... ಘಟನೆ ನಡೆದ ಅಕ್ಟೋಬರ್ 29 ರಂದು ...ಗೆ ಹೊರಟಿದ್ದ ನಂದಿತಾಗೆ ಆ ಹುಡುಗ ...ಮಾಡಿದ್ದಾನೆ. ನಂತರ ಇಬ್ಬರೂ ಆನಂದಗಿರಿ ಗುಡ್ಡಕ್ಕೆ ...ದ್ದಾರೆ. ಅಲ್ಲಿ ನಂದಿತಾಗೆ ಕೂಲ್ ಡ್ರಿಂಕ್ಸ್ ಕುಡಿಯಲು ...ಕೊಟ್ಟಿದ್ದಾನೆ. ಪೊಲೀಸರು ಅನುಮಾನಿಸುತ್ತಿರುವಂತೆ ... ಮತ್ತು ಬರಿಸುವ ಔಷಧಿಯನ್ನು ಬೆರೆಸಲಾಗಿತ್ತು, ...ಅದಕ್ಕೂ ಮೊದಲೇ ಆರೋಗ್ಯದ ಉದ್ದೇಶದಿಂದ ಸೇವಿಸಿದ್ದ ... ದೇಹದೊಳಗಿದ್ದ ಔಷಧಿಯೊಂದಿಗೆ ರಿಯಾಕ್ಟ್ ... ಮತ್ತಿನ ಔಷಧ ಆಕೆ ಮೇಲೆ ವ್ಯತಿರಿಕ್ತ ಪರಿಣಾಮ ...ಲೆ ಸುತ್ತು ಬರುವಂತೆ ಮಾಡಿತ್ತು, ಆಗ ಹುಡುಗ ... ಹೆದರಿದ್ದಾನೆ. ಕೂಡಲೇ ತನ್ನಿಬ್ಬರು ಸ್ನೇಹಿತರಿಗೆ ... ಮಾಡಿ ಸ್ಥಳಕ್ಕೆ ಕರೆಸಿಕೊಂಡು ಆಕೆಯನ್ನು ... ಯತ್ನದಲ್ಲಿದ್ದಾಗಲೆ ನಂದಿತಾಳ ನರಳಾಟ ... ಹುಲ್ಲು ಕೊಯ್ಯುವ ಹೆಂಗಸು ಬಂದಿದ್ದಾಳೆ. ... ನೋಡಿದ ಹುಡುಗರು ಅಲ್ಲಿಂದ ಓಡಿಹೋಗಿದ್ದಾರೆ. ಅದೇ ಹೆಂಗಸು ನಂದಿತಾ ಮನೆಯವರಿಗೆ ಸುದ್ದಿ ಮುಟ್ಟಿಸಿ ಮನೆಗೆ ತಲುಪಿಸಿದ್ದಾಳೆ.

ಹೆತ್ತವರಿಗೆ ನಡೆದದ್ದನ್ನೆಲ್ಲಾ ನಂದಿತಾ ವಿವರವಾಗಿ ಹೇಳಿದ್ದಾಳೆ. ಆಗ ಸಿಟ್ಟಿಗೆದ್ದ ಮನೆಯವರು ಮೊದಲೇ ಆ ಹುಡುಗನ ಸ್ನೇಹ ಬಿಡುವಂತೆ ತಾಕೀತು ಮಾಡಿದ್ದರೂ ಅವನ ಜೊತೆ ಹೋಗಿದ್ದಕ್ಕೆ ನಂದಿತಾಳಿಗೆ ಚೆನ್ನಾಗಿ ಬೈದಿದ್ದಾರೆ. ಅಸ್ವಸ್ಥತೆಯಿಂದ ಬಳಲುತ್ತಿದ್ದ ನಂದಿತಾಳಿಗೆ ಹೆತ್ತವರ ನಿಂದನೆ ದೊಡ್ಡ ಘಾಸಿಯನ್ನೇ ಮಾಡಿದೆ. ಖಿನ್ನತೆಗೆ ಒಳಗಾದ ಆಕೆ ತಾನು ಆತ್ಮಹತ್ಯೆ ಮಾಡಿಕೊಳ್ಳುವುದೇ ಸರಿ ಎನ್ನುವ ನಿರ್ಧಾರಕ್ಕೆ ಬಂದಿದ್ದಾಳೆ. ಪೊಲೀಸರ ಅಂದಾಜಿನ ಪ್ರಕಾರ ರಾತ್ರಿ ಊಟವಾದ ನಂತರ ಆಕೆ ಮನೆಯಲ್ಲಿದ್ದ ವಿಷ ಸೇವಿಸಿ ಆತ್ಮಹತ್ಯೆಗೆ ಮುಂದಾಗಿದ್ದಾಳೆ. ಕೂಡಲೇ ಆಕೆಗೆ ವಾಂತಿಯಾಗಿದೆ. ಆದರೆ ಬೆಳಗ್ಗೆ ನಡೆದ ಘಟನೆಯಿಂದ ಹೆದರಿ ಹೀಗಾಗುತ್ತಿದೆ ಎಂದೇ ತಂದೆತಾಯಿ ನಿರ್ಲಕ್ಷ್ಯ ಮಾಡಿದ್ದರು. ಯಾವಾಗ ಆಕೆ ಹತ್ತರಿಂದ ಹನ್ನೆರಡು ಬಾರಿ ಮೇಲಿಂದ ಮೇಲೆ ವಾಂತಿ ಮಾಡಿಕೊಂಡು ನಿತ್ರಾಣಳಾದಳೊ ಆಗಲೇ ಅವರು ಅವಳನ್ನು ಜಯಚಾಮರಾಜೇಂದ್ರ ಆಸ್ಪತ್ರೆಗೆ ಕರೆತಂದದ್ದು. ಅಷ್ಟರಲ್ಲಾಗಲೆ ವಿಪರೀತ ವಾಂತಿಯಿಂದಾಗಿ ಆಕೆಯ ದೇಹ ನಿರ್ಜಲೀಕರಣ ಸ್ಥಿತಿಗೆ ಬಂದು ತಲುಪಿತ್ತು.



ನಂದಿತಾಳ ಮನೆಯ...

ದೇಹದಲ್ಲಿ ನೀರೇ ಇಲ್ಲವಾದ್ದರಿಂದ ಬಿಪಿ ಕೂಡಾ ಇಳಿಮುಖವಾಗಿತ್ತು, ಹಾಗಾಗಿಯೇ ಅವಳನ್ನು ಹೆಚ್ಚಿನ ಚಿಕಿತ್ಸೆಗೆ ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ಕರೆದೊಯ್ಯುವಂತೆ ವೈದ್ಯರು ಹೇಳಿದ್ದು. ಶಿವಮೊಗ್ಗಕ್ಕೆ ಬರುವ ವೇಳೆಗಾಗಲೆ ನಂದಿತಾ ಸ್ಥಿತಿ ಮತ್ತಷ್ಟು ಬಿಗಡಾಯಿಸಿದ್ದರಿಂದ ಅಲ್ಲಿಂದಲೂ ಅವಳನ್ನು ಮಣಿಪಾಲ್ ಆಸ್ಪತ್ರೆಗೆ ಕರೆತಂದಿದ್ದಾರೆ. ಆದರೆ ವಿಧಿವಶಾತ್ ನಂದಿತಾ ಬದುಕಿ ಬರಲೇ ಇಲ್ಲ.

ಪ್ರಕರಣ ಇಷ್ಟು ಸರಳವಾಗಿದ್ದುದರಿಂದಲೇ ತೀರ್ಥಹಳ್ಳಿಯ ಪ್ರಜ್ಞಾವಂತ ಮಂದಿ ಆರಂಭದಲ್ಲೇ ನಂದಿತಾಳ ಸಾವಿಗೆ ನ್ಯಾಯ ಕೇಳಿ ಪ್ರತಿಭಟನೆಗೆ ಇಳಿದದ್ದು. ಆದರೆ ಚೆಡ್ಡಿಗಳಿಗೆ ಪ್ರಕರಣ ಇಷ್ಟು ಸಲೀಸಾಗಿ ಸಾಗುವುದು ಬೇಕಾಗಿರಲಿಲ್ಲ. ತಮ್ಮ ಕೇಸರಿ ಅಡಿಪಾಯವನ್ನು ತೀರ್ಥಹಳ್ಳಿಯಲ್ಲಿ ಊರುವಂತ ಕೋಮುದಳ್ಳುರಿಯಾಗಿ ಅದು ಬದಲಾಗಬೇಕಿತ್ತು. ಹಾಗಾಗಿಯೇ ಇಲ್ಲಸಲ್ಲದ ಅಪಹರಣ, ಅತ್ಯಾಚಾರ, ಕೊಲೆಯಂತಹ ತಿರುವುಗಳನ್ನು ಘಟನೆಗೆ ಸೇರಿಸಿ ಇಷ್ಟು ಎಳೆದಾಡಿದ್ದಾರೆ.

## ಕಿಮ್ಮನೆ, ಷರೀಫ್ ಮತ್ತು ಚೆಡ್ಡಿಗಳು

ಬಿಜೆಪಿ ಮತ್ತು ಭಜರಂಗಿ ದಳ ನಂದಿತಾ ಸಾವನ್ನು ತಮ್ಮ ರಾಜಕೀಯ ತೆವಲಿಗೋಸ್ಕರ ಬಳಸಿಕೊಂಡಿ ರೋದು ನೂರಕ್ಕೆ ನೂರರಷ್ಟು ಸತ್ಯ. ಆರಗ ಜ್ಞಾನೇಂದ್ರನಿಗೆ ಕಿಮ್ಮನೆ ರತ್ನಾಕರ್ ವರ್ಚಸ್ಸು ಕುಗ್ಗಿಸಬೇಕೆನ್ನುವ ತುಡಿತವಿತ್ತು; ಭಜರಂಗಿಗಳಿಗೆ ತೀರ್ಥಹಳ್ಳಿಯಲ್ಲಿ ಬೇರೂರಬೇಕೆನ್ನುವ ಇರಾದೆ ಇತ್ತು, ಆದರೆ ಈ ಇಬ್ಬರಿಗೂ ಅಡ್ಡವಾಗಿ ನಿಂತಿದ್ದು ಇಬ್ರಾಹಿಂ ಷರೀಫ್!

ತೀರ್ಥಹಳ್ಳಿಯ ಮಟ್ಟಿಗೆ ನ್ಯಾಷನಲ್ ಷರೀಫ್ ಎಂತಲೇ ಪರಿಚಿತವಾಗಿರುವ ಇವರು ವ್ಯಾಪಾರಸ್ಥ ಜೊತೆಗೆ ಇಂಜಿನಿಯರಿಂಗ್ ಓದು ಮುಗಿಸಿರುವ ಕಾಂಟ್ರ್ಯಾಕ್ಟರ್ ಕೂಡಾ ಹೌದು. ಪ್ರಾಮಾಣಿಕ ಎನ್ನಬಹುದಾದ, ಮನುಷ್ಯ ಸಂಬಂಧಗಳ ಬಗ್ಗೆ ಗೌರವ ಇಟ್ಟುಕೊಂಡಿರುವ ವ್ಯಕ್ತಿತ್ವ ಷರೀಫ್‌ರದ್ದು. ಇವರ ತಂದೆ ಶೇಕ್ ಅಹಮದ್ ಷರೀಫ್ ಮಲೆನಾಡಿನ ಕಮ್ಯುನಿಸ್ಟ್ ಮುಖಂಡ ಅಪ್ಪಣ್ಣ ಹೆಗಡೆಯವರ ಹತ್ತಿರದ ಒಡನಾಡಿ ಆಗಿದ್ದರು. ಅಂತಹ ಷರೀಫ್ ಕುಟುಂಬದ ಮೇಲೆ ಕೋಮುವಾದಿಗಳ ಕಣ್ಣು ಬೀಳುವುದಕ್ಕೂ ಒಂದು ಕಾರಣವಿದೆ.

ತೀರ್ಥಹಳ್ಳಿ ಎಷ್ಟು ಸರಳ ಸಾಮಾಜಿಕ ಸಂರಚನೆಯನ್ನು ಹೊಂದಿದೆಯೊ ಅಷ್ಟೇ ಸಂಕೀರ್ಣ ಆರ್ಥಿಕ ಜಾಲವನ್ನೂ ಹೊಂದಿದೆ. ಕಂಟ್ರ್ಯಾಕ್ಟು ಮತ್ತು ಸಣ್ಣಪುಟ್ಟ ಬಿಸಿನೆಸ್‌ಗಳು ಬ್ಯಾರೀ ಮುಸ್ಲಿಮರ ಕೈಯಲ್ಲಿದ್ದರೆ ದಿನಸಿ ವ್ಯಾಪಾರ ಸಂಪೂರ್ಣವಾಗಿ ಗೌಡ ಸಾರಸ್ವತ ಬ್ರಾಹ್ಮಣರ ಸುಪರ್ದಿಯಲ್ಲಿತ್ತು. ಈ ನಡುವೆ ಇಬ್ರಾಹಿಂ ಷರೀಫ್‌ರು 'ನ್ಯಾಶನಲ್' ಬ್ರ್ಯಾಂಡ್ ಹೆಸರಿನಡಿಯಲ್ಲಿ ಅತ್ಯಾಧುನಿಕ ನ್ಯಾಶನಲ್ ಸೂಪರ್ ಮಾರ್ಕೆಟ್, ನ್ಯಾಶನಲ್ ಗೋಲ್ಡ್ ಪ್ಯಾಲೇಸ್ ಮತ್ತು ನ್ಯಾಶನಲ್ ಸ್ಟೋರ್ಸ್‌ಗಳನ್ನು ತೆರೆದಿದ್ದರು. ಆ ಕಾರಣಕ್ಕೇ ಅವರಿಗೆ ನ್ಯಾಶನಲ್ ಷರೀಫ್ ಎನ್ನುವ ಹೆಸರು ಬಂದದ್ದು. ಸೂಪರ್ ಬಜಾರ್ ಮತ್ತು ನ್ಯಾಶನಲ್ ಸ್ಟೋರ್ಸ್‌ಗಳು ದಿನಸಿ ವ್ಯಾಪಾರದ ಮೇಲೆ ಅಧಿಪತ್ಯ ಹೊಂದಿದ್ದ ಸಾರಸ್ವತ ಬ್ರಾಹ್ಮಣರಿಗೆ ಭರ್ಜರಿ ಹೊಡೆತವನ್ನೇ ನೀಡಿದ್ದವು. ಹಳೇ ಕಾಲದ ಅಂಗಡಿಗಳತ್ತ ಮುಖ ಮಾಡದ ಜನ ಷರೀಫರ ನ್ಯಾಶನಲ್ ಸ್ಟೋರ್‌ಗಳತ್ತ ಬರಲಾರಂಭಿಸಿದ್ದರು. ಅಲ್ಲಿಯವರೆಗೂ ಮುಸ್ಲಿಮನೆಂಬ ಕಾರಣಕ್ಕೆ ಮಾತ್ರ ಷರೀಫ್ ಮೇಲೆ ಕಣ್ಣಿಟ್ಟಿದ್ದ ಚೆಡ್ಡಿಗಳಿಗೆ ಈಗ ನಿಜಕ್ಕೂ ತಳ ಉರಿದು ಹೋಗಿತ್ತು.

ಜೊತೆಗೆ ಇಬ್ರಾಹಿಂ ಷರೀಫ್‌ರು ಕಿಮ್ಮನೆ ರತ್ನಾಕರ್‌ರ ಪರಮಾಪ್ತ ಬೇರೆ. ಷರೀಫ್ ಆರ್ಥಿಕವಾಗಿ ಚೇತರಿಸಿಕೊಂಡಷ್ಟೂ ಕಿಮ್ಮನೆ ರಾಜಕೀಯವಾಗಿ ಬೆಳೆಯುತ್ತಾರೆನ್ನುವ ಲೆಕ್ಕಾಚಾರ ಚೆಡ್ಡಿಗಳ ಆಳದಲ್ಲಿ ಶುರುವಾಯಿತು. ಕಳೆದ ವಿಧಾನಸಭಾ ಚುನಾವಣೆಯಲ್ಲೂ ಕಿಮ್ಮನೆ ಕೇವಲ 1343 ಮತಗಳ ಮಾರ್ಜಿನ್ ಗೆಲುವು ದಾಖಲಿಸಿದ್ದಾರೆಂದರೆ ಅದರಲ್ಲಿ ಷರೀಫ್‌ರ ಪಾತ್ರವೇ ದೊಡ್ಡದು. ಕೊನೆಯವರೆಗೂ ಸೋಲಿನ ದವಡೆಯಲ್ಲೇ ಇದ್ದ ಕಿಮ್ಮನೆ ರತ್ನಾಕರ್ ಗೆಲುವಿನ ಅಂತರ ದಕ್ಕಿಸಿಕೊಂಡದ್ದು ಷರೀಫ್‌ರ ಪ್ರಾಬಲ್ಯವಿರುವ ಬಾಳೇಬೈಲು ಬೂತ್‌ಗಳ ಮತ ಎಣಿಕೆಯಿಂದ. ಈ ಸಿಟ್ಟು ಬಿಜೆಪಿಯಿಂದ ನಿಂತು ಮೂರನೇ ಸ್ಥಾನಕ್ಕೆ ಕುಸಿದಿದ್ದ ಆರಗ ಜ್ಞಾನೇಂದ್ರಗೂ ಇತ್ತು, ಕೆಜೆಪಿಯಿಂದ ಸ್ಪರ್ಧಿಸಿ ಕಿಮ್ಮನೆಗೆ ಭರ್ಜರಿ ಪೈಪೋಟಿ ನೀಡಿದ್ದ ಆರ್. ಮಂಜುನಾಥ್ ಗೌಡನಿಗೂ ಇತ್ತು. ಎಲ್ಲಕ್ಕಿಂತ ಹೆಚ್ಚಾಗಿ ಮುಸ್ಲಿಂ ವ್ಯಕ್ತಿಯೊಬ್ಬ ಆರ್ಥಿಕವಾಗಿ ಬೆಳೆದು ಬೀಗುವುದು ಭಜರಂಗಿಗಳಿಗೆ ಬೇಕಾಗಿರಲಿಲ್ಲ. ಇಷ್ಟೂ ಶಕ್ತಿಗಳು ಷರೀಫ್‌ರನ್ನು ಹಣಿಯಲು ಸಮಯಕ್ಕಾಗಿ ಕಾದು ಕುಳಿತಿದ್ದವು.

ಮೊನ್ನೆ ನಡೆದ ಕೇಸರಿ ಪಡೆಗಳ ಪ್ರತಿಭಟನೆ, ದೊಂಬಿ, ಕೋಮುದಳ್ಳುರಿ ಎಲ್ಲವೂ ಕೇಂದ್ರಿತವಾದದ್ದು ಇದೇ ಷರೀಫ್ ಮೇಲೆ. ಬಹುಶಃ ಸೂಕ್ಷ್ಮವಾಗಿ ಗಮನಿಸಿದ್ದರೆ ಗಲಾಟೆಯ ಪ್ರಮಾಣ ಹೆಚ್ಚಾಗಿದ್ದದ್ದು ತೀರ್ಥಹಳ್ಳಿಯ ಆಜಾದ್ ರಸ್ತೆಯಲ್ಲಿ ಎಂಬುದು ನಿಮ್ಮ ಗಮನಕ್ಕೆ ಬಂದಿರಬಹುದು. ಇದೇ ಆಜಾದ್ ರಸ್ತೆಯಲ್ಲೇ ಷರೀಫರ ಆ ಮೂರೂ ಬೃಹತ್ ಮಳಿಗೆಗಳು ಇರುವುದು. ದೊಂಬಿಯ ಸಮಯದಲ್ಲಿ ಹೆಚ್ಚು ಹಾನಿಯಾದದ್ದು, ಬೆಂಕಿ ಹಚ್ಚಿದ್ದು ಷರೀಫ್‌ರ ನ್ಯಾಶನಲ್ ಮಳಿಗೆಗಳಿಗೇ. ಸ್ಟೋರ್‌ನ ಜನರೇಟರನ್ನೇ ಎಳೆದು ಸುಟ್ಟು ಷರೀಫ್ ಮೇಲಿನ ಆಕ್ರೋಶವನ್ನು ಚೆಡ್ಡಿಗಳು ಹೊರಹಾಕಿದ್ದಾರೆ.

ಅಷ್ಟಕ್ಕೆ ಬಿಟ್ಟಿಲ್ಲ, ನಂದಿತಾಳ ಅತ್ಯಾಚಾರಿಗಳಿಗೆ ರಕ್ಷಣೆ ಕೊಡುತ್ತಿರೋದೆ ಷರೀಫ್ ಎನ್ನುವಂತೆ ಬಿಂಬಿಸಲಾಗುತ್ತಿದೆ. ನಂದಿತಾ ಸತ್ತ ದಿನ ಖುದ್ದು ಕಿಮ್ಮನೆ ರತ್ನಾಕರ್, ಷರೀಫ್ ಮನೆಯಲ್ಲಿ ಕುಳಿತು ಕೇಸನ್ನು ಹೇಗೆ ಮುಚ್ಚಿ ಹಾಕಬೇಕೆಂದು ಚರ್ಚಿಸಿದ್ದರು ಎಂಬ ಮತ್ತೊಂದು ಗಾಳಿ ಸುದ್ದಿ ಈಗಲೂ ತೀರ್ಥಹಳ್ಳಿಯಲ್ಲಿ ಹರಿದಾಡುತ್ತಿದೆ. ಹಾಗಂತ ಷರೀಫ್‌ರ ಮಕ್ಕಳೇನಾದರು ಅಥವಾ ಅವರ ಕುಟುಂಬ ಬೇರೆ ಯಾರಾದರು ಈ ಪ್ರಕರಣದಲ್ಲಿ ಭಾಗಿಯಾಗಿದ್ದಾರಾ ಅಂತ ನೋಡಿದರೆ ಅದೂ ಇಲ್ಲ, ಅದಕ್ಕಾಗೆ ರೇಪ್ ಮಾಡಿದವರು ಷರೀಫ್ ಮಕ್ಕಳ ಸ್ನೇಹಿತರು ಎಂದು ಲಿಂಕ್ ಕೊಡುವ ಯತ್ನವೂ ನಡೆಯುತ್ತಿದೆ. ಒಟ್ಟಿನಲ್ಲಿ ನಂದಿತಾ ಕೇಸಿನಲ್ಲಿ ಷರೀಫ್ ಮೆತ್ತಗಾಗಬೇಕು ಎನ್ನುವುದಷ್ಟೇ ಅವರ ಉದ್ದೇಶ.


ಫೇಸ್‌ಬುಕ್ ಚೆಡ್ಡಿ ಪ್ರತಾಪಿಗಳಂತೂ ಇಬ್ರಾಹಿಂ ಷರೀಫ್‌ರನ್ನು ಪಾಕಿಸ್ತಾನದ ಏಜೆಂಟ್ ಎನ್ನುವುದೊಂದು ಬಾಕಿ. ಅಷ್ಟರಮಟ್ಟಿಗೆ ಅವರ ವಿರುದ್ಧ ಕಾರಿಕೊಂಡಿದ್ದಾರೆ. ಷರೀಫ್‌ಗೆ ಡ್ರಗ್ಸ್ ಮಾಫಿಯಾದೊಂದಿಗೆ ನಂಟಿದೆ, ಆತ ಲವ್ ಜಿಹಾದ್ ನಡೆಸಲು ಕುಮ್ಮಕ್ಕು ನೀಡುತ್ತಿದ್ದಾನೆ, ತೀರ್ಥಹಳ್ಳಿಯನ್ನು ತುರ್ಕಹಳ್ಳಿ ಮಾಡಲು ಹೊರಟಿದ್ದಾನೆ..... ಹೀಗೆಲ್ಲಾ ತಮ್ಮ ಮೂರನೇ ದರ್ಜೆ ಭಾಷೆಯಲ್ಲಿ ಅಪಪ್ರಚಾರ ನಡೆಸುತ್ತಿದ್ದಾರೆ. ಸಿಐಡಿ ತನಿಖೆ ಈಗಷ್ಟೇ ಆರಂಭವಾಗಿದೆ. ಅದು ಮುಗಿದ ನಂತರವಷ್ಟೆ ನಿಜ ಏನು, ಆರೋಪಿಗಳು ಯಾರೆನ್ನುವ ಸತ್ಯಾಂಶ ಹೊರಬರಲಿದೆ. ಆದರೆ ಚೆಡ್ಡಿಗಳು ತನಿಖೆಗೂ ಮುನ್ನವೇ ತೀರ್ಪು ನೀಡಿ ಬಿಟ್ಟಿದ್ದಾರೆ. ಅವರ ದೃಷ್ಟಿಯಲ್ಲಿ ತಕ್ಷಣವೇ ಷರೀಫ್‌ರನ್ನು ಬಂಧಿಸಬೇಕಿತ್ತು. ಪೊಲೀಸರು ಅವರಿಷ್ಟದಂತೆ ನಡೆದುಕೊಳ್ಳಲಿಲ್ಲ, ಆ ಕಾರಣಕ್ಕೇ ಕಿಮ್ಮನೆ ರತ್ನಾಕರ್ ಅದನ್ನು ಮುಚ್ಚಿಹಾಕುತ್ತಿದ್ದಾರೆಂಬ ಗುಲ್ಲೆಬ್ಬಿಸಿದ್ದು.

ಚೆಡ್ಡಿಗಳ ಜಾಯಮಾನವೇ ಅಷ್ಟು ಬಿಡಿ; ಅಲ್ಲಿ ನೀರಿಗಿಂತ ನೊರೆಯೇ ಜಾಸ್ತಿ. ನೊರೆ ಕರಗಿಹೋದ ಮೇಲೆ ಸತ್ಯ ಜನರಿಗೇ ತಿಳಿಯುತ್ತೆ. ಆದರೆ, ತಮ್ಮ ಸ್ವಾರ್ಥಕ್ಕೋಸ್ಕರ ಇಡೀ ವಿಶ್ವಕ್ಕೆ ವಿಶ್ವಮಾನವ ಸಂದೇಶ ಸಾರಿದ ಚೇತನ ಕುವೆಂಪು ಹುಟ್ಟಿದ ತೀರ್ಥಹಳ್ಳಿಯ ಸಾಮರಸ್ಯವನ್ನೇ ನಾಶ ಮಾಡಿದರಲ್ಲ; ಆ ಕೃತ್ಯಕ್ಕೆ ಏನು ಶಿಕ್ಷೆ.....

■ ಗಿರೀಶ್ ತಾಳಿಕಟ್ಟೆ



ಕಿಮ್ಮನೆ ರತ್ನಾಕರ್



ನ್ಯಾಷನಲ್ ಷರೀಫ್

# ತಳಒಡೆದ ಕನ್ನಡದ ದೋಣಿ

ಕನ್ನಡ ಭಾಷೆಗೆ ತನ್ನದೇ ಆದ ಇತಿಹಾಸವಿದೆ. ಹಳೆ, ನಡು, ಹೊಸಗನ್ನಡ ಕಾಲಘಟ್ಟದ ಮೂಲಕ ಬೆಳೆದುಬಂದ ಕನ್ನಡ ಭಾಷೆ ಇಂದು ಹೆಮ್ಮರವಾಗಿದೆ. ಕವಿಗಳು, ಸಾಹಿತಿಗಳು, ನಾಟಕಕಾರರು, ಶಿಲ್ಪಿಗಳು, ರಾಜರು ಹೀಗೆ ಎಲ್ಲ ವರ್ಗದ ಜನರೂ ಈ ಭಾಷೆಯನ್ನ ಶ್ರೀಮಂತಗೊಳಿಸಿದ್ದಾರೆ. ಸಂಸ್ಕೃತ ಸೇರಿದಂತೆ ಇತರ ದ್ರಾವಿಡ ಭಾಷೆಗಳು ಮತ್ತು ಇತ್ತೀಚೆಗೆ ಇಂಗ್ಲಿಷ್ ಕನ್ನಡದ ಮೇಲೆ ತುಂಬಾ ಪರಿಣಾಮ ಬೀರಿವೆ. ಎಷ್ಟೋ ಭಾಷೆಗಳ ಪದಗಳನ್ನು ತನ್ನ ಮಡಿಲಲ್ಲಿ ಹಾಕಿಕೊಂಡು, ಹಡೆದವ್ವನ ರೀತಿ ಪ್ರೀತಿ ತೋರುತ್ತಿದೆ ಕನ್ನಡ.

ಇಂತಹ ಕನ್ನಡ ಭಾಷೆಗೀಗ ದುರ್ಗತಿ ಬಂದಿದೆ. ಕನ್ನಡದ ಒಟ್ಟು ಸಾಂಸ್ಕೃತಿಕ ಲೋಕ ಬಲಹೀನವಾಗುತ್ತಾ ಹೋಗುತ್ತಿದೆ. ಜಾಗತೀಕರಣ, ಖಾಸಗೀಕರಣ, ಉದಾರೀಕರಣ, ನಗರೀಕರಣ ಎಲ್ಲಕ್ಕಿಂತ ಹೆಚ್ಚಾಗಿ ಇಂಗ್ಲಿಷೀಕರಣದಿಂದಾಗಿ ಭಾಷೆ ನಲುಗುತ್ತಿದೆ. ನಾಡಿನ ಹಳ್ಳಕೊಳ್ಳಗಳು, ಪ್ರಾಣಿಪಕ್ಷಿಗಳು, ಕಾಡು... ಹೀಗೆ ಎಲ್ಲವೂ ನಾಶವಾಗುತ್ತಾ ಸಾಗುತ್ತಿರುವಾಗಲೇ ಕನ್ನಡ ಪದಗಳಿಗೂ ಕುತ್ತು ಬಂದಿದೆ. ಇಂಗ್ಲಿಷ್ ಎಂಬ ದೆವ್ವ ಕನ್ನಡವನ್ನ ಗದರಿಸುತ್ತಿದೆ. ಕನ್ನಡದ ಶಾಲೆ, ಕನ್ನಡದ ಕಂದ, ಕನ್ನಡದ ಆಡಳಿತ, ಕನ್ನಡದ ಅನ್ನ ಎಲ್ಲವೂ ಅಪಾಯಕ್ಕೆ ಸಿಲುಕಿವೆ. ಸರ್ಕಾರದ ತೀರ್ಮಾನಗಳು, ನ್ಯಾಯಾಲಯದ ಅರ್ಥವಿಲ್ಲದ ಆದೇಶಗಳು ಗಾಯಕ್ಕೆ ಮತ್ತಷ್ಟು ಉಪ್ಪು ಸುರಿಯುತ್ತಿವೆ.


ಆದರೆ, ಇದೆಲ್ಲದರ ಮಧ್ಯೆ ಕನ್ನಡವನ್ನ ಉಳಿಸುತ್ತಾ ಬೆಳೆಸುತ್ತಾ ಬಂದವರು ಮಾತ್ರ ನಮ್ಮ ಗ್ರಾಮೀಣರು. ಜಗತ್ತಿನಲ್ಲಿ ಏನೇ ನಡೆಯಲಿ ಭಾಷೆಯನ್ನ ಅವರು ಬಿಟ್ಟುಕೊಟ್ಟಿಲ್ಲ. ಗ್ರಾಮೀಣರ ಬದುಕಲ್ಲಿ ಹಾಸುಹೊಕ್ಕಾಗಿದ್ದ ಮನೆಮಾತಾಗಿದ್ದ ಆಡುಭಾಷೆಯೇ ಆಗಿದ್ದ ಲಕ್ಷಾಂತರ ಪದಗಳು ಇಂದು ಅಳಿವಿನ ಅಂಚಿನಲ್ಲಿರುವುದು ಮಾತ್ರ ವಿಷಾದ. ತೀರಾ ಹತ್ತಿರದ ಅಡುಗೆ ಮನೆ, ರೈತಾಪಿ ಬದುಕು, ಜನಪದ, ಧಾರ್ಮಿಕ ಕ್ಷೇತ್ರ, ಕುಲಕಸುಬು, ಕಲೆ, ಸಂಸ್ಕೃತಿ ಮುಂತಾದ ಎಲ್ಲ ಕಡೆಗಳಲ್ಲಿಯೂ ವಿಜೃಂಭಿಸುತ್ತಿದ್ದ ದೇಸಿ ಪದಗಳ ಕಣಜ ನಿಧಾನವಾಗಿ ಖಾಲಿಯಾಗುತ್ತಿದೆ.

ಇಂತಹ ಕೆಲವು ಪದಗಳನ್ನ ಪರಿಚಯಿಸುವುದು ಈ ಲೇಖನದ ಮುಖ್ಯ ಉದ್ದೇಶ. ಹಾಗಾಗಿಯೇ ಈ ಪುಟ್ಟ ಲೇಖನವನ್ನ ಆರಂಭಿಸುತ್ತಾ ಓದುಗರಿಗೆ ಬಹುದೊಡ್ಡ ಚರ್ಚೆಯನ್ನ ಬಿಡುತ್ತೇನೆ. ಈ ಲೇಖನ ಓದಿದ ಮೇಲೆ ತಮಗೆ ತಿಳಿದಿರುವ ಇಂತಹ ಪದಗಳ ಪಟ್ಟಿ ಮಾಡಿಕೊಂಡು ಮತ್ತಷ್ಟು ವಿಸ್ತರಿಸಬೇಕೆಂಬುದು ನನ್ನ ಆಸೆ. ಇದಕ್ಕೂ ಮೊದಲು ಈ ಲೇಖನ ಬರೆಯಲು ಸ್ಫೂರ್ತಿ ಕೆಲವು ಗೆಳೆಯರಿಂದ ಬಂದಿದ್ದನ್ನು ನೆನೆಯುತ್ತೇನೆ. ಡಾ. ಕುಂಸಿ ಉಮೇಶ್, ಪ್ರಾಧ್ಯಾಪಕ ಆರ್.ಕೆ. ವಿನಯ್ ಅನೇಕ ಸಂದರ್ಭಗಳಲ್ಲಿ ನಾನು ಮಾತನಾಡುವಾಗ ಬಳಸುತ್ತಿದ್ದ ದೇಸಿ ಪದಗಳನ್ನು ಕಂಡು ಈ ಪದಗಳು ಈಗ ಹೆಚ್ಚಾಗಿ ಬಳಕೆಯಲ್ಲಿಲ್ಲ. ಇವುಗಳು ನಶಿಸುತ್ತಿರುವ ಬಗ್ಗೆ ಲೇಖನವೊಂದನ್ನು ಬರೆದು, ಓದುಗರಿಗೆ ಪರಿಚಯಿಸಬಾರದೇಕೆ ಎಂದು ಸಲಹೆ ನೀಡಿದ್ದರು. ಅವರ ಸಲಹೆ ನನಗೂ ಸರಿ ಎನಿಸಿತು. ಹಾಗಾಗಿ ಈ ಲೇಖನ.

ಒಂದು ಅಡುಗೆ ಮನೆ ಆಧುನೀಕರಣಗೊಂಡರೆ ಏನೆಲ್ಲಾ ದೇಸಿ ಪದಗಳು ಕಣ್ಮರೆಯಾಗುತ್ತವೆ ಎನ್ನುವುದಕ್ಕೆ ಈ ಪದಗಳೇ ಸಾಕ್ಷಿ. ಕೈಬಟ್ಟಲು, ಕೊಳಪೆ, ಕೊಣಗೆ, ಚುಂಚುಕ, ಚಿಬ್ಬಲು, ಲತೋಡಿ, ಮಣೆ, ಕಡಗೋಲು, ನೆಲ್ಲಿ, ಕುಟಾಣಿ, ಒಳಕಲ್ಲು, ಒನಕೆ, ಕೆಂಡ, ಒಲೆ ಹೀಗೆ ನೂರಾರು ಪದಗಳು ಕಣ್ಮರೆಯಾಗುತ್ತವೆ. ಹಾಗೆಯೇ ಒಂದು ಎತ್ತಿನ ಬಂಡಿ ಬದಲು ಟೈರ್ ಗಾಡಿಯೋ, ಟ್ರ್ಯಾಕ್ಟರೋ ಬಂದರೆ ಅದಕ್ಕೆ ಸಂಬಂಧಿಸಿದ ಪದಗಳಾದ ಎತ್ತು ಜೂಲು, ಕಣಿಗೆ, ಅಡ್ಡೆಪಟ್ಟಿ, ಕೀಲು, ಕೀಲೆಣ್ಣೆ, ಒಳಬಂಡಿ, ಮೂಕು, ನೊಗ, ಮಿಣೆ, ಹಳಿ, ದಿಬ್ಬಣ, ಕಮಾನು, ಗುಮ್ಮಿ, ಗ್ವಾರೆ ಪದಗಳು ಮಾಯವಾಗುತ್ತವೆ. ಕುಂಬಾರರು, ಬಡಗಿಯವರು, ಅಕ್ಕಸಾಲಿಗರು, ಹಲ್ಲೆ ಕಟ್ಟುವವರು ಹೀಗೆ ಕುಲಕಸುಬು ಮಾಡುವವರು ಇಲ್ಲವಾದರೆ, ಅವರ ಜೊತೆಗೆ ಸಾವಿರಾರು ಪದಗಳು ಕಣ್ಮರೆಯಾಗುತ್ತವೆ. ಊರಿನ ಬಾವಿಗಳು ಮುಚ್ಚಿದರೆ ಗಡಗ, ಮೇಲಗ್ಗ, ಕೊಡಪಾನ, ಹರವಿ, ಚಿಲಕಣಿ, ಪಾತಾಳಗರುಡ (ಪಾತಾಳ ಗಡಗ) ಮುಂತಾದ ಪದಗಳು ಕಾಣೆಯಾಗುತ್ತವೆ.


ಕೃಷಿ ಕ್ಷೇತ್ರದಲ್ಲಿ ಆಧುನೀಕರಣದಿಂದಾಗಿ ಅನೇಕ ಪರಿಕರಗಳೇ ಇಲ್ಲವಾಗಿವೆ. ಯಂತ್ರೋಪಕರಣ ಹಲವು ದೇಸಿ ಪರಿಕರಗಳನ್ನು ನುಂಗಿಹಾಕಿದ್ದು, ಅವುಗಳ ಜೊತೆಗೆ ಪದಗಳೂ ಇಲ್ಲವಾಗಿವೆ. ಸೇರು, ಅಚ್ಚೇರು, ಪಾವು, ಚಟಾಕು, ಚಿಟ್ಟಿ, ಹಲ್ಲಚೀಲ, ಕುಳ, ಎಡೆಕುಂಟೆ, ಕೊಲ್ಕು, ನೇಗ್ಲು, ಕೂರಿಗೆ, ಪಟಗಣಿ, ಬಾಯಿಕುಕ್ಕೆ, ತೆವೈ, ಕಂದ್ಲಿ, ರೋಣ್ಗಲ್ಲು, ಮುಗುದಾಣ. ಕೃಷಿ ಬೆಳೆಗಳಾದ ಸಾವೆ, ನವಣೆ, ಸಜ್ಜೆ ಅಜ್ವಾನ ಮುಂತಾದ ಬೆಳೆಗಳು ಇಲ್ಲವಾಗುತ್ತಿವೆ.


ಆಧುನೀಕರಣದ ಅಬ್ಬರದಲ್ಲಿ ಎಲ್ಲ ಕಳೆದುಕೊಳ್ಳುತ್ತಿದ್ದೇವೆ. ಬದಲಾವಣೆ ಅನಿವಾರ್ಯ ನಿಜ. ಆದರೆ, ಕನ್ನಡದ ಲಕ್ಷಾಂತರ ಪದಗಳು ಈ ಬದಲಾವಣೆಯ ಬಿರುಗಾಳಿಗೆ ಸಿಕ್ಕಿ ನಾಶವಾಗುತ್ತಿರುವುದು ಮಾತ್ರ ವಿಪರ್ಯಾಸವೇ ಸರಿ.




ಹೀಗಾಗಿ ಮರೆಯಾಗುತ್ತಿರುವ ಕೆಲವು ಕನ್ನಡ ಪದಗಳನ್ನ ಇಲ್ಲಿ ಪರಿಚಯಿಸುವ ಪ್ರಯತ್ನ ಮಾಡಲಾಗಿದೆ.

* ಎಸಟ್ಟಗೆ (Yes, It.): ಹೋಗಲಿ ಬಿಡು ಎನ್ನುವುದಕ್ಕೆ ಬಳಸುವ ಭಾಷೆ ಇದು. ಯಾವುದೋ ತಪ್ಪೆಸಗಿದ ಒಬ್ಬ ವ್ಯಕ್ತಿಗೆ ಹೆಚ್ಚಿನ ಶಿಕ್ಷೆ ನೀಡದೆ ತಾತ್ಕಾಲಿಕವಾದ ಕ್ಷಮಾದಾನ ನೀಡಿ ಅವನನ್ನು ತಪ್ಪಿನಿಂದ ಬಿಡುಗಡೆಗೊಳಿಸಿ ಎಚ್ಚರಿಕೆ ನೀಡಬೇಕಾದ ಪದವಿದು.
* ಉರ್ದು ಉರ್ದು ಉಪ್ಪಿನಕಾಯಿ: ಸಾಮಾಜಿಕ ವ್ಯವಸ್ಥೆಗೆ ವಿರುದ್ಧವಾದ ಕೆಲಸ ಮಾಡುತ್ತಾ ಅಹಂಕಾರದಿಂದ ಮೆರೆಯುವ ವ್ಯಕ್ತಿಗೆ ಉಪ್ಪಿನ ಕಾಯಿಯಂತೆ ಛಿದ್ರಛಿದ್ರವಾಗಿ ಬದಲಾವಣೆಗೊಂಡು ಮೂಲೆಗುಂಪಾಗುತ್ತಾನೆಂಬ ಅರ್ಥ ಬರುವ ಪದವಿದು. ಇಂತಹ ಅಹಂಕಾರದ ವ್ಯಕ್ತಿಯನ್ನು ಹದ್ದುಬಸ್ತಿನಲ್ಲಿಡಲು ಕೆಲವೊಮ್ಮೆ ಅವನ ಕೊರಳಿಗೆ ಗುದ್ದಿಗೆ ಕಟ್ಟು ಎನ್ನುತ್ತಾರೆ.
* ನೆಗೆದುಬಿದ್ದು ಹೋಗಾ: ಒಬ್ಬ ವ್ಯಕ್ತಿ ಯಾವ ರೀತಿಯಲ್ಲೂ ಬದಲಾವಣೆ ಆಗದೇ ಇದ್ದಾಗ ಅವನ ವೈರಿಗಳು ಅವನಿಗೆ ಕೊಡುವ ಸಾವಿನ ಶಾಪದ ಪದ.
* ತಲೆಹಿಡುಕ: ಉತ್ತಮ ಪರಿಸರದ ಮಧ್ಯೆ ತನ್ನ ಸ್ವಾರ್ಥಸಾಧನೆಗಾಗಿ ಮತ್ತೊಬ್ಬರ ಜೀವನದಲ್ಲಿ ನುಸುಳಿ ಪರಸ್ಪರ ವೈರಿಗಳಾಗುವಂತಹ ವಿನಾಶಕಾರಿ ಯೋಜನೆಗಳನ್ನು ಇನ್ನೊಬ್ಬರ ಮನಸ್ಸಿನಲ್ಲಿ ತುಂಬುವಂತಹ ವ್ಯಕ್ತಿಯನ್ನು ಕುರಿತು ಹೇಳುವ ಪದ.
* ಮೂಗ್‌ದಾಣ: ಸುಲಭವಾಗಿ ಹತೋಟಿಗೆ ಬಾರದೆ ಇರುವ ಪ್ರಾಣಿಗಳಿಗೆ ಮೂಗಿನ ಮೂಲಕ ಒಂದು ಹುರಿಯನ್ನು ತುರುಕಿ ಕುತ್ತಿಗೆಗೆ ಕಟ್ಟುವುದು. ಇದರಿಂದ ಆ ಪ್ರಾಣಿಯ ಒರಟುತನ ಕಡಿಮೆಯಾಗುತ್ತದೆ. ಇದನ್ನು ಒಬ್ಬ ಯುವಕನನ್ನು ಸರಿದಾರಿಗೆ ತರಲು ನಿನಗೆ ಮೂಗ್‌ದಾಣ (ಮದುವೆ ಮಾಡಿದಾಗ) ಹಾಕಿದಾಗಲೇ ಸರಿಯಾಗಿ ಬರುತ್ತೀಯ ಎಂಬ ಸಲಹೆ ಕೊಡುವ ಪದ.
* ಮಿಣೆ: ಸುಲಭವಾಗಿ ತುಂಡಾಗದಂತೆ ರಚನೆಯಾಗಿರುವ ದಪ್ಪ ಹಗ್ಗ. ಇದರ ಮೂಲಕ ಭಾರವಾದ ವಸ್ತುಗಳನ್ನು ಕಟ್ಟಬಹುದು. ರೋಪ ಎಂಬ ಇಂಗ್ಲಿಷ್ ಪದ ಬಂದು ಇಂತಹ ನೂರಾರು ಪದಗಳನ್ನ ತಿಂದು ಹಾಕಿದೆ.
* ಕಲ್ಲಿಗೊಲೆ: ಭದ್ರತೆಗಾಗಿ ಯಾವುದೇ ಹುರಿ ಹಗ್ಗದಿಂದ ಬಿಗಿಗೊಳಿಸುವಾಗ ಸುಲಭವಾಗಿ ಕಳಚಲು ಸಾಧ್ಯವಾಗದ ರೀತಿಯಲ್ಲಿ ಗಂಟು ಹಾಕುವುದೇ ಈ ಗೊಲೆ. ಸುಲಭವಾಗಿ ಬಿಚ್ಚುವಂತೆ ಹಾಕುವ ಗಂಟನ್ನು ಸುರಗಂಟು ಎನ್ನುತ್ತಾರೆ.
* ನೆಕ್‌ನೆಲಬಳಿ: ಇರುವುದೆಲ್ಲವನ್ನೂ ಹಾಳುಮಾಡಿ, ತಿಂದು ಮಜಾಮಾಡಿ ಕೊನೆಗೆ ಯಾವ ಆಧಾರವೂ ಇಲ್ಲದಂತೆ ಮಾಡಿ ಹಾಳಾದ ವ್ಯಕ್ತಿಗೆ ಕೊನೆಯಲ್ಲಿ ಕೊಡುವ ಸಲಹೆ ಅಥವಾ ಶಾಪ ಇದು. ಹಾಗೆಯೇ ಗುಡಿಸಿ ಗುಂಡಾಂತರ ಮಾಡು, ತೊಳೆದು ಸಾರಿಸು ಎನ್ನುವ ಪದಗಳನ್ನು ಹೆಸರಿಸಬಹುದಾಗಿದೆ.
* ಸೈ ಬಿಡು: ಒಬ್ಬ ವ್ಯಕ್ತಿ ಇನ್ನೊಬ್ಬ ವ್ಯಕ್ತಿಯೊಡನೆ ಯಾವುದೇ ಸಮಸ್ಯೆಗಳನ್ನಾದರೂ ತಿಳಿಸಿ ಪರಿಹಾರಕ್ಕೆ ಕೋರಿದಾಗ ಪರಸ್ಪರ ಚರ್ಚಿಸಿ ಇಬ್ಬರಿಗೂ ಒಪ್ಪಿಗೆಯಾಗುವ ಪರಿಹಾರ ಸಿಕ್ಕಾಗ ಇನ್ನು ಸರಿ ಯಾವುದೇ ಯೋಚನೆ ಬೇಡ ಎಂದು ಅಂತಿಮ ತೀರ್ಮಾನದ ಮಾತು. ಮತ್ತು ಏನನ್ನೂ ಒಪ್ಪದಿದ್ದಾಗ ಮಾತು ಮುರಿದು ಎದ್ದುಹೋಗುವಾಗ ಈ ಪದ ಬಳಸುತ್ತಾರೆ.
* ಘನಂದಾರಿ ಕೆಲ್ಸ: ಒಬ್ಬ ವ್ಯಕ್ತಿಯ ಕರೆಗೆ ಸ್ಪಂದಿಸದೆ ಏನೇನೋ ನೆಪ ಹೇಳಿ ಅಸಮಾಧಾನ ಪಡಿಸುವ ಇನ್ನೊಬ್ಬ ವ್ಯಕ್ತಿಗೆ ಕರೆ ನೀಡಿದ ವ್ಯಕ್ತಿ ಬಳಸುವ ಪದ ಇದು. ಮಹತ್ವದ ಕೆಲಸ ಏನಿತ್ತು ಎಂಬ ಅರ್ಥದಲ್ಲಿ ಬಳಸುತ್ತಾರೆ.
* ಗಯ್ಯಾಳಿ: ಒಂದು ಕುಟುಂಬ ಅಥವಾ ಸಮಾಜದಲ್ಲಿ ವಾಸಿಸುವ ಒಬ್ಬ ಹೆಣ್ಣು ಇನ್ನೊಬ್ಬರನ್ನು ಮೆಚ್ಚಿಸಲು ಕೃತಕ ಅಭಿನಯದ ಮಾತುಗಳನ್ನ ಹೇಳುತ್ತಾ ಅಥವಾ ಜಗಳದ ರೀತಿ ಕಾಲುಕೆರೆದುಕೊಂಡು ಬರುವುದಕ್ಕೆ ಕೊಡುವ ಬಿರುದು ಗಯ್ಯಾಳಿ.
* ಅಡ್ನಾಡಿ: ಯಾರಾದರೂ ಮಾತನಾಡುವಾಗ ವಿವೇಚನೆಯಿಲ್ಲದೆ ಮನಬಂದಂತೆ ತನ್ನ ವಿಧ... ಪ್ರಕಟಿಸಿದಾಗ ಮತ್ತೊಬ್ಬ ವಿಚಾರವಂತರು ... ಮಾತಿನ ಬಗ್ಗೆ ಹೇಳುವಂತಹದ್ದು. (ಏಡಿ ... ಪ್ರಾಣಿಗಳಂತೆ ಮುಂದೆ ಚಲಿಸದೆ ಅಡ್ಡವಾಗಿ ಚಲಿಸು...
* ಸೋಗಲಾಡಿ: ಯಾರಾದರೂ ತಮ್ಮ ನಡವಳಿಕೆ... ನೈಜತೆ ಮರೆಮಾಚಿ ಕೃತಕವಾಗಿ ಯಾರನ್ನೋ ಮೆಚ್ಚಿ... ನಡೆದುಕೊಳ್ಳುವವರನ್ನು ಕುರಿತು ಹೇಳುವ ಮಾತು...
* ಗಮ್ಮತ್ತು: ಸಾರ್ವಜನಿಕ ಜೀವನದಲ್ಲಿ ಸಹಜವಾ... ಎಲ್ಲರ ಗಮನ ಸೆಳೆಯಲು ತ... ಜೀವನಶೈಲಿಯನ್ನು ವೈಭವವಾಗಿ ನಡೆಸುವವ... ಕಂಡು ಹೇಳುವ ಮಾತಿದು. ಉದಾಹರ... ಇರುವ ಹತ್ತು ಬೆರಳುಗಳಲ್ಲಿ ಎಂಟು ಬೆರಳು... ಉಂಗುರ ಹಾಕಿಕೊಂಡವರಿಗೆ ಈ ಮ... ಅನ್ವಯಿಸುತ್ತದೆ.
* ನೆಗ್‌ಬಿದ್ ನೆಲ್ಲಿಕಾಯಿಯಾಗು: ಒಬ್ಬ... ಮೋಸ ಮಾಡಿದಾಗ ಅಥವಾ ಚಾಡಿ ಹೇಳಿ... ಸಿಟ್ಟಿನಿಂದ ಶಾಪ ಹಾಕುವ ಮಾತಿದು. ... ಅರ್ಥ ಅವನು ಸಾಯಬೇಕೆಂಬುದೆ ಆ... ಅವನ ಮಕಾಡೆ ಹಾಕು ಎಂಬ ಪದ ... ಇದೇ ಅರ್ಥ ಕೊಡುತ್ತದೆ.
* ಕೊಳ್ಳಿ ಇಡು: ಒಬ್ಬ ವ್ಯಕ್ತಿ ಮತ್ತೊಬ್ಬ... ಅನ್ಯಾಯ ಮಾಡಿದಾಗ ಆಸ್ತಿ ಮತ್ತಿತರೆ ವಸ್ತು... ಲಪಟಾಯಿಸಿದಾಗ ಅಥವಾ ಹಾಳುಗೆಡವಿ... ಹೇಳುವ ಮಾತಿದು. ಕೊಳ್ಳಿ ಎಂದರೆ ... ಇಡುವುದು ಎಂದರ್ಥ. ಎಲ್ಲವೂ ಸರ್ವ... ಎಂಬರ್ಥದಲ್ಲಿ ಈ ಪದ ಬಳಕೆಯಲ್ಲಿದೆ. ... ರೀತಿ ನಾಲಿಗೆ ಸೇದ್ಹೋಗಾ ಎಂಬ ಪದ... ಕೂಡ ಗಮನಿಸಬಹುದಾಗಿದೆ.
* ಮಿಟುಕ್ಲಾಡಿ, ಚಿತ್ರಾಣಿ: ಒಂದು ಕುಟುಂಬ... ವಾಸವಾಗಿರುವ ಹೆಣ್ಣಿಗೆ ಬೈಗುಳದ ರೀತಿ... ಹೇಳುವ ಮಾತಿದು. ಸ್ವಾರ್ಥಸಾಧನೆಗಾಗಿ ಕಪಟಗುಣಗಳಿಂದ ಕುಟುಂಬದವರನ್ನು ವಂಚಿಸಿ... ನಾಟಕ ಮಾಡುವ ಹೆಣ್ಣಿಗೆ ಸಮಾಜ ಕೊಟ್ಟ... ಬೈಗುಳದ ಪದವಿದು.
* ಆದೇನ್ ಕಿತ್ಕಂತಿ: ಇಬ್ಬರು ವ್ಯಕ್ತಿಗಳಲ್ಲಿ ಪರಸ್ಪರ ... ಕಾದಾಟ ತಾರಕಕ್ಕೆ ಹೋದಾಗ ಅವರಿಬ್ಬರೂ ಹ... ಕೊನೇ ಸಂದೇಶದ ರೀತಿ ಹೇಳುವ ಮಾತಿದು. ಅ... ನೀನು ಏನು ಬೇಕಾದರೂ ಮಾಡು ನಾ... ಹೆದರುವುದಿಲ್ಲ ಎಂಬ ಸಂದೇಶ.
* ತಾಯಡ್ಕ: ಮೋಸ, ವಂಚನೆ, ಕಪಟ, ಚಾಡಿ ಮುಂ... ಕೆಟ್ಟ ಮಾರ್ಗಗಳನ್ನ ಅನುಸರಿಸುವವನಿಗೆ ಸಮಾ... ಇಟ್ಟ ಬೈಗುಳವಿದು. ಅಂದರೆ ನೀನು ಹೆತ್ತತಾಯಿ... ತಾಯಿನಾಡಿಗು ಮೋಸ ಮಾಡಲು ಹಿಂಜರಿಯದ... ವ್ಯಕ್ತಿ ಎನ್ನುವ ಅರ್ಥ.
* ತಿರ್ಬೋಕಿ: ಹೊಟ್ಟೆಗೆ ಹಿಟ್ಟಿಲ್ಲದಿದ್ದರೂ ಜುಟ್ಟಿಗೆ ಮ... ಹೂವು ಎಂಬಂತೆ ಕೆಲವರು ಇರುತ್ತಾರೆ. ಯಾ... ಸಾಧನೆ ಮಾಡುವ ಗುಣವಿಲ್ಲದಿದ್ದರೂ ನಾ... ಯಾರಿಗಿಂತ ಕಮ್ಮಿ ಇಲ್ಲ ಎಂದು ಹೇ... ಬಾಯಿಬಡುಕರಿಗೆ ಸಮಾಜ ಕೊಟ್ಟ ಹೀನಾಯ... ಈ ತಿರುಬೋಕಿ.
* ಜಬರ್ದಸ್ತು: ತಾನು ಯಾರಿಗೂ ಹೆದರದೆ ಮತ್ತೊಬ್ಬ... ಹೆದರಿಸುತ್ತಾ ದೌರ್ಜನ್ಯದ ಮಾತುಗಳನ್ನಾಡುವ ... ನೀನು ಜಬರದಸ್ತು ಮಾಡಬೇಡ ಎನ್ನುವ ಪದ... ಉಪಯೋಗಿಸುತ್ತಾರೆ.
* ಪೀಕಲಾಟ: ಯಾವುದೇ ಒಂದು ವಿಷಯದಲ್ಲಿ ಸರಿಯಾದ... ನಿರ್ಧಾರ ತೆಗೆದುಕೊಳ್ಳಲು ಅಸಮರ್ಥರಾದಾಗ ... ಮಾತು ಹೊರಹೊಮ್ಮುತ್ತದೆ. ಅಂದರೆ, ಒ... ರೀತಿಯ ತೊಳಲಾಟದ ಸಮಸ್ಯೆಗೆ ಈ ಪದ... ಉಪಯೋಗಿಸಲಾಗುತ್ತದೆ.
* ಕುರ್ಜಿಗೆ: ಇದು ಒಂದು ಕಬ್ಬಿಣದ ಸಾಧನ. ರೈ... ಬೆಳೆಯಲ್ಲಿ ಇರುವ ಕಳೆ ತೆಗೆಯಲು ಈ ಸಾ... ಉಪಯೋಗಿಸುತ್ತಾರೆ.
* ಪಟಗಣಿ: ಗಾಡಿ ಹೊಡೆಯುವಾಗ ಎತ್ತಿನ ಕೊರ... ಗಾಡಿಯ ನೊಗಕ್ಕೂ ಸೇರಿಸಿ ಎತ್ತು ಗಾಡಿ ಎಳೆ... ಸಹಾಯವಾಗುವಂತೆ ಇರುವ ಚರ್ಮದ ... ಸಾಧನ.
* ರೋಣ್ಗಲ್ಲು: ರೈತ ಕೆಲವು ಫಸಲುಗಳನ್ನು ಕ...



...ಣಿಗಿಸಿ ಅದರಿಂದ ಧಾನ್ಯ ಬೇರ್ಪಡಿಸಲು ಭಾರವಾದ ...ಉರುಳುಕಲ್ಲಿನ ಮೂಲಕ ಸುತ್ತುವರಿದು ತಿರುಗಿಸಲು ...ಉಪಯೋಗಿಸುವ ಸಾಧನ.

...ಲು: ರೈತ ಬಿತ್ತನೆಯಾದ ಮೇಲೆ ಬಿತ್ತನೆಯ ಜಾಗದಲ್ಲಿ ...ಮಣ್ಣು ನಿಧಾನವಾಗಿ ಸಮಮಾಡಿ ಬೀಜ ಮುಚ್ಚಲು ...ಸಹಾಯವಾಗುವಂತೆ ಮಾಡುವ ಸಾಧನ. ಇದರ ...ಜೊತೆಗೆ ಹರಗು, ಉಕ್ಕೆ, ಕಬ್ಬಿಣದ ನೇಗಿಲು, ಎಡೆಕುಂಟೆ ...ಮುಂತಾದ ಅನೇಕ ರೈತಾಪಿ ವಸ್ತುಗಳು ಬರುತ್ತವೆ.

...ದಿ: ಈಗಲೂ ಚಾಲ್ತಿಯಲ್ಲಿರುವ ಪದ. ಹಳೆಯ ...ಟ್ಟೆಯ ಚೂರುಗಳನ್ನೆಲ್ಲಾ ಒಂದಕ್ಕೊಂದು ಸೇರಿಸಿ ...ಹೊಲಿದು ಬೆಡ್‌ಶೀಟ್ ರೀತಿಯಲ್ಲಿ ಹೊದೆಯಲು ...ಉಪಯೋಗಿಸುವ ಹೊದಿಕೆ. ಇದು ಒಂದು ಗೃಹ ...ಕೈಗಾರಿಕೆಯೂ ಆಗಿದೆ.


...ಣೇವು: ಕೆಲವು ಗ್ರಾಮಗಳಲ್ಲಿ ದೇವರು ಬನ್ನಿಕಾರ್ಯ ...ಪೂರೈಸಿ ಊರೊಳಗೆ ಬಂದು ಗುಡಿ ಸೇರುವ ...ಮೊದಲು ಮಣೇವು ನಡೆಯುತ್ತದೆ. ಮಣೇವು ಎಂದರೆ ...ಕ್ತರು ದೇವರು ಸುತ್ತುತ್ತಾ ಜಾಗಟೆ, ಡೊಳ್ಳು, ತ್ರಿಶೂಲ, ...ತ್ತ ಮುಂತಾದವುಗಳನ್ನು ಹಿಡಿದು 'ಹ್ವ ಹ್ವಾ ಬೋಲಿ' ಎಂದು ಉಚ್ಚರಿಸುತ್ತಾ ಏಕಕಾಲದಲ್ಲಿ ನೆಲದ ಮೇಲೆ ...ಟ್ಟಿರುವ ಬಾಳೆ ಹಣ್ಣನ್ನು ತಿನ್ನುತ್ತಾರೆ. ಇದು ಈಗಲೂ ...ಹಳ್ಳಿಗಳಲ್ಲಿ ನಡೆಯುತ್ತದೆ. ಹಾಗೆಯೇ ಪರೋವು, ...ಬಿಂಡುಳ್ಳು, ಬೇವುಡು, ಜವಳ ಮುಂತಾದವುಗಳನ್ನು ...ಗಮನಿಸಬಹುದಾಗಿದೆ.

...ಹಗೇವು: ಹಿಂದಿನ ಕಾಲದಲ್ಲಿ ರೈತ ತಾನು ಬೆಳೆದ ...ಆಹಾರ ಪದಾರ್ಥಗಳನ್ನು ಸಂರಕ್ಷಿಸಿಡಲು ಭೂಮಿಯಲ್ಲಿ ...ಆಳವಾದ ವೃತ್ತಾಕಾರದ ಗುಂಡಿ ತೆಗೆದು ಅದಕ್ಕೆ ...ತೇವಾಂಶ ಬಾರದಂತೆ ಹುಲ್ಲನ್ನು ಹಗ್ಗದಂತೆ ಸೇರಿಸಿ ...ಜೋಳ, ರಾಗಿ, ಭತ್ತ ಮುಂತಾದ ಧಾನ್ಯಗಳನ್ನು ಶೇಖರಿ...ಸುತ್ತಿದ್ದ. ಜನಪದರು ಎಷ್ಟು ಜಾಣರೆಂದರೆ ಯಾವುದೇ ...ಕಾರಣಕ್ಕೂ ನೀರು ಹೋಗದಂತೆ ಇರುವ ಜಾಗ...ದಲ್ಲಿಯೇ ಹಗೇವು ತೆಗೆಯುತ್ತಿದ್ದರು. ಈಗ ಈ ಹಗೇವು...ಗಳು ಇಲ್ಲ. ಜೊತೆಗೆ ಕಣಜ, ಪಣ್ತ ಸಹ ಇಲ್ಲ.

...ಗೆ ಹೋಳಿಗೆ: ಮದುವೆಯಾದ ಗಂಡನ್ನು ಕರೆಯಲು ...ಹೆಣ್ಣಿನ ಮನೆಗೆ ಅವರ ಕುಟುಂಬದವರು ಬಂದು ...ಕರೆದುಕೊಂಡು ಹೋಗುವುದು. ಇದು ಪ್ರಸ್ತಾದ ದಿನ ...ನಡೆಯುವ ಕ್ರಿಯೆ. ಇದಕ್ಕೆ ಸುಬಂಧಿಸಿದಂತೆ ಅಳಿವೂಟ ...ಪದವನ್ನೂ ಹೆಸರಿಸಬಹುದು.

...ಣಬಿಗೆ: ಅಡುಗೆಮನೆಯಲ್ಲಿರುವ ಒಂದು ಮರದ ...ಉಪಕರಣೆ. ಇದು ಸಾಮಾನ್ಯವಾಗಿ ಮೂರು ನಾಲ್ಕು ...ಅಡಿ ಉದ್ದ ಅಗಲವಿರುತ್ತದೆ. ನಡುವೆ ತಗ್ಗಾಗಿ ಸುತ್ತಲೂ ...ಅಂಚನ್ನು ಬಿಟ್ಟು ಕೆತ್ತಿರುವ ಮರದ ಉಪಕರಣ. ...ರೊಟ್ಟಿ ತಟ್ಟಲು, ಹಪ್ಪಳದ ಹಿಟ್ಟು ನಾದಲು ಹೀಗೆ ...ಅನೇಕ ಉಪಯೋಗಕ್ಕಾಗಿ ಇದನ್ನು ಬಳಸಲಾಗುತ್ತದೆ. ...ಇದರ ಜೊತೆಗೆಯೇ ಕೈಬಟ್ಟು, ಮುದ್ದೆಕೋಲು, ಚಿಬ್ಲು, ...ಮುಂಚ್ಕ, ಪಲ್ಪೆ, ಹುಟ್ಟು, ಮರ್ಗೆ ಮುಂತಾದ ಪದಗಳನ್ನು ...ಗಮನಿಸಬಹುದು.

...ಣ್ಣೆ: ಇದು ತಗಡಿನಿಂದ ಮಾಡಿದ ವೃತ್ತಾಕಾರದ ...ವಿವಿಧ ಗಾತ್ರದ ರಂಧ್ರಗಳ ಸಾಧನ. ಸಣ್ಣೆಯ ಮೂಲಕ ...ರಾಗಿ, ಜೋಳ, ಅಕ್ಕಿ, ನವಣೆ ಮುಂತಾದ ದವಸಗಳನ್ನು ...ತರಡಿ ಹಿಡಿದು ಕಲ್ಲು, ಮಣ್ಣು, ಕುಣಿಯನ್ನು ...ಬೇರ್ಪಡಿಸಬಹುದಾಗಿದೆ. ಇದರ ಜೊತೆಗೆ ಮೊರವನ್ನು ...ಕೂಡ ಹೆಸರಿಸಬಹುದು.




* ಗುಂಡ್ಕಲ್ಲು: ಸಾರಿಗೆ ಬೇಕಾದ ಕಾರವನ್ನು ಅರೆಯಲು ಈ ಸಾಧನವನ್ನು ಉಪಯೋಗಿಸುತ್ತಿದ್ದರು. ಈ ಕಲ್ಲು ಸುಮಾರು ಹತ್ತು ಕೆ.ಜಿ.ಗಿಂತಲೂ ಹೆಚ್ಚು ತೂಕದ್ದಾಗಿದ್ದು ಇಬ್ಬರೂ ಹೆಣ್ಣುಮಕ್ಕಳು ಈ ರುಬ್ಬುಗುಂಡನ್ನು ಕಾರ ಅರೆಯಲು ಬಳಸುತ್ತಿದ್ದರು. ಮಿಕ್ಸಿ, ಗ್ರೈಂಡರ್ ಬಂದಮೇಲೆ ಈ ಸಾಧನ-ಪದ ಮರೆಯಾಗಿದೆ. ಇದರ ಜೊತೆಗೆ ವಳಕಲ್ಲು, ಕುಟ್ಟುವ ಹಾರೆ, ತಟ್ಟುಮಣೆ, ಕಡಗೋಲು, ಒನಕೆ, ಬೀಸೋಕಲ್ಲು, ಕೆರೆಚಿಪ್ಪು ಮುಂತಾದವುಗಳನ್ನು ಹೆಸರಿಸಬಹುದು.
* ಕೆರಕಲು/ಸೀಕಲು: ಸಾಮಾನ್ಯವಾಗಿ ಮುದ್ದೆ ಮಾಡಿದಾಗ ತಳ ಹತ್ತಿದ ಒಂದಿಷ್ಟು ಹಿಟ್ಟು ಇರುತ್ತದೆ. ಅದು ಇತ್ತ ಮುದ್ದೆಯೂ ಆಗುವುದಿಲ್ಲ ಮತ್ತು ಒಂದು ರೀತಿಯಲ್ಲಿ ಸೀದುಹೋಗಿರುತ್ತದೆ. ಇದನ್ನು ಕೆರಕಲು ಮುದ್ದೆಯೆಂದೇ ಕರೆಯುತ್ತಾರೆ. ಸಾಮಾನ್ಯವಾಗಿ ಮುದ್ದೆ ಖಾಲಿಯಾದಾಗ ಹೆಣ್ಣುಮಕ್ಕಳು ಈ ಕೆರಕಲನ್ನೇ ಊಟ ಮಾಡುತ್ತಾರೆ. ಗಂಡುಮಕ್ಕಳಿಗೆ ಇದನ್ನು ಕೊಡುವುದಿಲ್ಲ.
* ಪಿಟಾರಿ: ಇದು ದೊಡ್ಡ ಶ್ರೀಮಂತರ ಮನೆಗಳಲ್ಲಿ ಇದ್ದ ವಸ್ತು. ಲೋಹದ ಬಳಕೆಗಿಂತ ಮೊದಲು ಬೆಲೆಬಾಳುವ ವಸ್ತುಗಳನ್ನು ಭದ್ರವಾಗಿಡಲು ದೊಡ್ಡ ಮರದ ಬಾಕ್ಸ್‌ಗಳನ್ನು ತಯಾರಿಸುತ್ತಿದ್ದರು. ಇದನ್ನು ಪಿಟಾರಿ ಎಂದು ಕರೆಯಲಾಗುತ್ತದೆ. ಈ ಪೆಟ್ಟಿಗೆಗೆ ಬೀಗ ಹಾಕುವ ವ್ಯವಸ್ಥೆಯೂ ಇತ್ತು. ತುಂಬಾ ಬೆಲೆಬಾಳುವ ಮರದಿಂದ ಇದನ್ನು ತಯಾರಿಸಲಾಗುತ್ತಿತ್ತು. ಅಲ್ಲದೆ ಅನೇಕ ವಸ್ತುಗಳನ್ನು ಇದರಲ್ಲಿ ಇಡಬಹುದಾಗಿತ್ತು. ಇದರ ಜೊತೆಗೆ ಟ್ರಂಕ್, ತಿಜೋರಿ ಎಂಬ ಪದವನ್ನೂ ಗಮನಿಸಬಹುದು.
* ಮಾರೋಗೋಲಿ: ಒಬ್ಬ ವ್ಯಕ್ತಿಯನ್ನು ಸಂಕಷ್ಟಕ್ಕೀಡುಮಾಡಲು ಮತ್ತೊಬ್ಬ ವ್ಯಕ್ತಿ ಕುತಂತ್ರ ರೂಪಿಸಿ ಆತನನ್ನು ಒತ್ತಡಕ್ಕೀಡು ಮಾಡಿದಾಗ ಸಂಕಷ್ಟಕ್ಕೀಡಾದ ವ್ಯಕ್ತಿಯ ಸ್ನೇಹಿತರು 'ನಾವಿದ್ದೇವೆ ಹೆದರಬೇಡ' ಎಂದು ಧೈರ್ಯ ತುಂಬಲು ಹೇಳುತ್ತಾರೆ. ಎಂದರೆ, ಏನೂ ಆಗುವುದಿಲ್ಲ ಹೆದರಬೇಡ ಎಂದರ್ಥ.
* ಅಗಣಿ: ಮನೆ ಕದ ಹಾಕಲು ಒಳಗಿನಿಂದ ಇರುವ ಸಾಧನವಿದು. ಇಂದಿನ ಇಂಟರ್‌ಲಾಕ್ ಬಂದ ಮೇಲೆ ಈ ಅಗಣಿ ಈಗ ಇಲ್ಲವಾಗಿದೆ. ಅಗಣಿಯನ್ನು ನೋಡಿಯೇ ಒಂದು ಗಾದೆ ಹುಟ್ಟುಕೊಂಡಿತ್ತು, ಹಗಲೆಲ್ಲಾ ಒಳಗೆ ರಾತ್ರಿಯೆಲ್ಲಾ ಹೊರಗೆ ಎಂದು.
* ಅಡುಕು: ಗಂಗಾಳದಲ್ಲಿ ಮುದ್ದೆ ಮತ್ತು ಸಾರನ್ನು ಇಟ್ಟರೆ ಅದು ಎರಡೂ ಸೇರುತ್ತದೆ. ಹಾಗಾಗಿ ಗಂಗಾಳದ ಕೆಳಗೆ ಒಂದು ಬದಿಯಲ್ಲಿ ಸಣ್ಣ ಮರದ ಅಥವಾ ಇದ್ದಿಲು ತುಂಡನ್ನು ಇಟ್ಟಾಗ ಸಾರು ಮತ್ತು ಮುದ್ದೆ ಬೇರೆ ಬೇರೆಯಾಗುತ್ತದೆ. ಈ ಪದ ಈಗ ಬಹುತೇಕ ಬಳಕೆಯಲ್ಲಿಲ್ಲ.
* ಶ್ಯಾವ್ಗೆ ಮಣೆ, ಲತೋಡಿ, ಚಕ್ಲಿ ವಳ್ಳು : ಈ ಪದಗಳು ಕೂಡ ಇಲ್ಲವಾಗಿವೆ.

### ಹೀನಾರ್ಥದ ಪದಗಳು

ಒಂದು ಕಾಲದಲ್ಲಿ ಧಾರ್ಮಿಕ ಪದಗಳು ಎನಿಸಿಕೊಂಡಿದ್ದ ಅನೇಕ ಪದಗಳು ಈಗ ಹೀನಾರ್ಥಗೊಂಡಿವೆ. ಉದಾಹರಣೆಗೆ ಪಾದಪೂಜೆ ಎಂಬುದು ಈಗ ಮೆಟ್ಟು ತೆಗೆದುಕೊಂಡು ಹೊಡೆ ಎನ್ನುವುದಕ್ಕೆ ಬಳಸುತ್ತಿದ್ದಾರೆ. ಹಾಗೆಯೇ ತೀರ್ಥ ಎನ್ನುವುದನ್ನು ಮದ್ಯಸೇವನೆ ಮಾಡುವುದಕ್ಕೆ ಹೋಲಿಸುತ್ತಾರೆ. ಮಗು ಕಕ್ಕ ಮಾಡಿದರೆ ಪ್ರಸಾದ ಎನ್ನುತ್ತಾರೆ. ಉಚ್ಚೆ ಮಾಡಿದರೆ ಅಭಿಷೇಕ ಎನ್ನುತ್ತಾರೆ. ಮಗು ಬರೆ ಚೆತ್ತಲಿದ್ದರೆ ಗಂಟೆ ಅಲ್ಲಾಡುತ್ತೆ ಎನ್ನುತ್ತಾರೆ.

ಕನ್ನಡ ಭಾಷೆಯಲ್ಲಿ ಇಂತಹ ಸಾವಿರಾರು ಪದಗಳು ಈಗ ಇಲ್ಲ, ಏಕೆಂದರೆ ಆ ವಸ್ತುಗಳು ಕೂಡ ಇಲ್ಲವಾಗಿದೆ. ಉದಾಹರಣೆಗಾಗಿ ಇಲ್ಲಿ ಇನ್ನಷ್ಟು ಪದಗಳನ್ನು ಹೇಳಬಹುದಾಗಿದೆ.

ಗಂಗಾಳ, ಸೌಳು, ಲಾಟೀನು, ಬುಡ್ಡಿ, ಚಾಪೀಸು, ಬಳಪ, ಸೀಸಕಡ್ಡಿ, ಬರಲಗಡ್ಡಿ, ಹಕ್ಕೆ, ಗೋತಾ, ಮರಿಗೆ, ಚರಿಗೆ, ಬಣವೆ, ಪಚಡಿ, ಪಿಳ್ಳೆ, ಹಲ್ಲೆಕಟ್ಟುವುದು, ಗಜ್ಜುಗ, ಮುಯ್ಯಿ ಮಾಡುವುದು, ಹರಿವಾಣ, ತಾಲಾಣ, ಜೋಡು, ಗಡಗಡ, ಕೌಣೆ, ಸಪ್ಪೆಕತ್ರಿ, ಕೂಲಿರಿಯುವುದು, ಡಾಡು, ಡೌಲು, ನಾಗಬಂಧಿ, ನಾಗರಜಡೆ, ಚೌಲಿ, ಲೋಲಾಕು, ಕೆನ್ನೆಸರ, ಕಾಸಿನಸರ, ಮುಕ್ರ, ಲಂಗಾದೌಣಿ, ರವಿಕೆ, ಜಂಪರ್, ಲೆಗ್‌ಹಾರ್ಮೋನಿಯಂ, ಚೌಕಾಬರೆ ಮಣೆ (ಅಳಿಗುಲಿಮಣೆ) ಪದಗಳು ಕಾಣೆಯಾಗುತ್ತಿವೆ.

ನಮ್ಮ ಜನಪದರು ಎಷ್ಟು ಜಾಣರೆಂದರೆ ಸಾಕ್ಸ್‌ಗೆ ಬದಲಾಗಿ ಕಾಲುಚೀಲ ಎಂಬ ಪದ ಹುಟ್ಟುಹಾಕಿದರು. ಹಾಗೆಯೇ ತಮ್ಮದಲ್ಲದ ನಾಡಿನಿಂದ ಬಂದ ವಸ್ತುಗಳಿಗೆ ಸೀಮೆ ಎಂಬ ಪದವನ್ನು ಸೇರಿಸಿ ಹೇಳುತ್ತಿದ್ದರು. ಸೀಮೆಹಸು, ಸೀಮೆಸುಣ್ಣ, ಸೀಮೆಎಣ್ಣೆ, ಸೀಮೆಬದನೆ ಮುಂತಾದವು. ಕೊನೆಗೆ ಅವನು ಅತಿಯಾಗಿ ಮಾತನಾಡಿದರೆ ಸೀಮೆಗಿಲ್ದೋನು ಎಂಬ ಮಾತನ್ನು ಕೂಡ ಆಡುತ್ತಿದ್ದರು. ಈಗ ಅವು ಕನ್ನಡದ್ದೇ ಆಗಿವೆ.

ಹಾಗೆಯೇ ಅನೇಕ ಗ್ರಾಮೀಣ ಕ್ರೀಡೆಗಳು ಕೂಡ ಮರೆಯಾಗಿದ್ದು ಅವುಗಳ ಜತೆಗೆ ಪದಗಳು ಕೂಡ ಮರೆಯಾಗಿವೆ. ಉದಾಹರಣೆಗೆ ಚಿನ್ನಿದಾಂಡು, ಗೋಲಿ (ಪಿಚ್ಚು ಡಾಮ), ಲಗೋರಿ, ಕುಂಟಾಪಿಲ್ಲಿ, ಕಣ್ಣಾಮುಚ್ಚಾಲೆ, ಮರಕೋತಿ ಇಂತಹವು. ಅನೇಕ ಹೂ ಹಣ್ಣುಗಳು ಕೂಡ ಮರೆಯಾಗಿವೆ. ಪರಗಿ ಹಣ್ಣು, ಮುಕ್ರಿಹಣ್ಣು, ಕವಳೆಕಾಯಿ, ಕಿತನಿಕೆ, ಲಂಟನ್ ಹೂವು-ಹಣ್ಣು, ಗೊಳ್ಳೆ, ಮೊದಮಲ್ಲಿಗೆ, ಗುಳುಹೆ, ಕಣಗಲು, ಗಂಟೆಕಣಗಳು, ಲಿಂಗದಹೂ ಮುಂತಾದವು.

ಹಾಗೆಯೇ ಸಾಂಸ್ಕೃತಿಕ-ಧಾರ್ಮಿಕ ಪದಗಳು ಕೂಡ ಮರೆಯಾಗುತ್ತಿವೆ. ದೊಡ್ಡಾಟ, ಸಣ್ಣಾಟ, ಮೇಳ, ಭಜನೆ, ಹರಿಕಥೆ, ದೊಂಬರಾಟ, ಕರಡಿಯಾಟ, ಮಂಗನಾಟ, ಕೋಲೆಬಸವ, ದುರ್ಗಿಮುರ್ಗಿ, ಕಿನ್ನರಿಜೋಗಿ, ಎಣ್ಣೆಜೋಗಿ, ಬುಡಬುಡಕಿ, ಹಾಲಕ್ಕಿ ನುಡಿಯೋದಿ, ಊರುಮಾರಮ್ಮ, ಮೊಂಡರು, ಗೊರವರು, ಹೆಳವರು (ಹೇಳುವವರು), ಸೋಬಾನೆ ಪದ, ಗೀಗಿ ಪದ, ಲಾವಣಿ, ಬಾಲಬಸವ ಮುಂತಾದ ಪದಗಳು-ಸಂಸ್ಕೃತಿ ನಾಶವಾಗುತ್ತಿದೆ.

ಅನೇಕ ಗಾದೆ ಮಾತುಗಳು ಕೂಡ ಮರೆಯಾಗುತ್ತಿವೆ. ಕುತ್ತಿಗೆ ಮಟ್ಟ ತಿಂದ್ರೂ, ಗರತಿ ಗಂಗವ್ವನ ಹಂಗೆ, ಉಂಡುರಿ ಅಂದ್ರೆ ಉಪಾಸನೇ ಉರ್‍ದ ಅಟ್ಟಾಡಿಸ್ಕೊಂಡು ಹೊಡಿ, ಮುಂದ್ಯೆತೆ ಮಾರೀಹಬ್ಬ ಚರ್ಮಸುಲಿ, ಚಪ್ಪಯ್ಯ ಅಂದ್ರೂ ಬಾಯ್ಬಿಡ್ಲಿಲ್ಲ, ಧಾಕು ಇದ್ದಂಗೆ ಹೀಗೆ ನೂರಾರು ಗಾದೆ ಮಾತುಗಳು ಈಗ ಬಳಕೆಯಲ್ಲಿಲ್ಲ. ಜೊತೆಗೆ ನೀರ್‌ನಿಂತ್ಯೆತೆ, ಹೊರಗಾಗಿದ್ದಾಳೆ, ಮೈನೆರೆಯುವುದು, ದೊಡ್ಡವಳಾದಳು, ನಸುಗುನ್ನಿಪುಡಿ, ಕ್ಯಾತೆ ತೆಗಿಬ್ಯಾಡ, ಬಿದ್ದು ಅಸ್ನು, ಬಿಸ್ಲೇರ್ ಕುಡಿ, ತೊಟ್ಲು ಕಾರ್ಯ, ಬಳೆ ತೊಡಿಸಿದ್ರು, ಬಳೆ ತೊಡ್ಸಿದ್ರು, ಮೂಗಬೊಟ್ಟು, ಉಫಿ, ಕಾಲ್ಕೆರೆದು ಜಗಳಮಾಡು, ಜೋಗಮುತ್ತೈತೆ, ಬೈಗು, ಕೇಸ್ ಖುಲಾಸು, ಯದ್ವಾತದ್ವಾ, ಹಟ್ಟಿಹಬ್ಬ ಹಾಲೆತ್ತು ಕೈಯೆತ್ತು ಓಡಿ ಹೋದ್ಲು ಬ್ಯಾನ್‌ಬರಾ, ರೋಸಿ ನಿರೋಸಾಗ, ಚೋಸುಡಿ, ಎತ್‌ಕಟ್ಟು, ಮುಚ್ಕೊಂಡಿರು, ಹೂತಾಕ್ತಿನಿ, ಹುಟ್ಲಿಲ್ಲಾ ಅನ್ನಿಸ್ತೀನಿ, ಜನ್ಮಜಾಲಾಡ್ತೀನಿ, ಹಣ್ಣಾಯ್ ನೀರ್‍ಗಾಯ್ ಮುಂತಾದ ಪದಗಳು ಸದ್ಯಕ್ಕೆ ಚಾಲ್ತಿಯಲ್ಲಿದ್ದರೂ ಮರೆಯಾಗುವ ಹಂತದಲ್ಲಿದೆ.

ಇವು ಮರೆಯಾಗುತ್ತಿರುವ ಕೆಲವು ಪದಗಳು ಮಾತ್ರ. ಇಡೀ ಕರ್ನಾಟಕವನ್ನ ತಿರುಗಿದರೆ, ಆಯಾ ಭಾಗಕ್ಕೆ ಸಂಬಂಧಿಸಿದ ಮರೆಯಾಗುತ್ತಿರುವ ಇಂತಹ ಲಕ್ಷಾಂತರ ಪದಗಳು ಸಿಗುತ್ತವೆ. ವಿಶ್ವವಿದ್ಯಾಲಯಗಳು ಅದರಲ್ಲೂ ಕನ್ನಡ ವಿವಿ, ಜನಪದ ವಿವಿ, ಭಾಷಾ ವಿಭಾಗ, ಕನ್ನಡ ಅಧ್ಯಯನ ಸಂಸ್ಥೆ ಕನ್ನಡ ಅಧ್ಯಾಪಕರುಗಳು, ಶಿಕ್ಷಕರು ಊರಿನಲ್ಲಿರುವ ಹಳೆ ತಲೆಮಾರಿನ ಬುದ್ಧಿವಂತ ವ್ಯಕ್ತಿಗಳಿಂದ ಪದಗಳನ್ನು ಸಂಗ್ರಹಿಸಿ, ಬಹುದೊಡ್ಡ ಶಬ್ಧಕೋಶವನ್ನೇ ಸಿದ್ಧಪಡಿಸಬಹುದಾಗಿದೆ. ಇಂತಹ ಕಾರ್ಯ ಆದಲ್ಲಿ, ಮರೆಯಾಗುತ್ತಿರುವ ದೇಸಿಯ ಪದಗಳನ್ನು ಮುಂದಿನ ಪೀಳಿಗೆಗೂ ಪರಿಚಯಿಸಿಕೊಡುವ ಕೆಲಸವಾದಂತಾಗುತ್ತದೆ.

ಕೊನೆಯದಾಗಿ ಈ ಲೇಖನಕ್ಕೆ ಸಹಕರಿಸಿದ ನಿವೃತ್ತ ಶಿಕ್ಷಕರೂ ನನ್ನ ತಂದೆಯವರೂ ಆದ ಆರುಂಡಿ ಲೋಕೇಶಪ್ಪ ಮಿತ್ರರಾದ ಹೆಚ್.ಸಿ. ನಿರಂಜನಮೂರ್ತಿ, ಜಿ.ಆರ್. ಷಡಾಕ್ಷರಪ್ಪ, ಹೆಚ್. ಅಂಜನಪ್ಪ (ಪಾಪಣ್ಣಿ) ಅವರುಗಳಿಗೆ ಕೃತಜ್ಞತೆಗಳು. ಓದುಗರು ತಮ್ಮ ಅಭಿಪ್ರಾಯಗಳನ್ನು ಮತ್ತು ಇಂತಹ ಪದಗಳ ಬಗ್ಗೆ ವಿವರಗಳನ್ನು ದೂರವಾಣಿ ಮೂಲಕ ಅಥವಾ ಇ-ಮೇಲ್ ಹಾಗೂ ಪತ್ರಮುಖೇನ ತಿಳಿಸಬಹುದಾಗಿದೆ.

ನಿಮ್ಮ ಊರಿನ ಪದಗಳನ್ನು ಹೀಗೆ ನೆನಪಿನಿಂದ ಮರೆಯಾಗುವ ಮೊದಲು ಬರೆದಿಟ್ಟುಕೊಳ್ಳಲು ಈ ಮೂಲಕ ನಿಮಗೆ ಮನವಿ ಮಾಡುತ್ತಿದ್ದೇನೆ. ಇದು ಸಂಸ್ಕೃತಿ ಉಳಿಸುವ ಕೆಲಸವೂ ಹೌದು.


■ ಆರುಂಡಿ ಶ್ರೀನಿವಾಸಮೂರ್ತಿ, ಶಿವಮೊಗ್ಗ

---

## ...ಬ್ಬನೆ ವಿಜ್ಞಾನವಲ್ಲ

...ಜಗತ್ತಿನ ಯಾವುದೇ ಮೂಲೆಯಲ್ಲಿ ಯಾವುದೇ ಆವಿಷ್ಕಾರ ಅಥವಾ ಹೊಸ ಸಂಶೋಧನೆ ಆಗಲಿ ...ಭಾರತದಲ್ಲಿ ಯಾರಾದರೂ ಒಬ್ಬರು 'ಇದು ಹೊಸ ...ದಲ್ಲ, ಅದು ನಮ್ಮ ಋಷಿಗಳು ಬರೆದ ಪುರಾತನ ...ಗಳಲ್ಲಿ ಈಗಾಗಲೇ ವಿವರಿಸಲಾಗಿದೆ' ಎಂದು ಹೇಳಿ ...ವಾದರೂ ಒಂದು ಸಂಸ್ಕೃತ ಶ್ಲೋಕ ಉದ್ಧರಿಸುತ್ತಾರೆ. ...ಗೆ ಮುಂಬೈಯಲ್ಲಿ ಆಸ್ಪತ್ರೆಯನ್ನು ಉದ್ಘಾಟಿಸುವಾಗ ...ನಮ್ಮ ದೇಶ ಪ್ರಧಾನಿಗಳೇ ಪ್ಲಾಸ್ಟಿಕ್ ಸರ್ಜರಿ ಮತ್ತು ... ವಿಜ್ಞಾನ ಪುರಾತನ ಭಾರತೀಯರಿಗೆ ಗೊತ್ತಿತ್ತು ...ದ ಮನುಷ್ಯನ ತಲೆಯನ್ನೂ ಜೋಡಿಸಿ ಜೀವ ...ಸಿದ್ದರು, ಪ್ರದ್ಯಾಷ್ಯ ತಡೆಯುತ್ತಿದ್ದರು (ಗಣಪತಿಯ ..., ಕೌರವರು ಕುಂಭದಲ್ಲಿ ಜನನ, ಯಯಾತಿ-ಪುರು ... ದಾನ) ಹಾಗೂ ಅಣುಬಾಂಬ್ ಕ್ಷಿಪಣಿ-ವಿಮಾನ ...ಯಲ್ಲಿ ಭಾರತೀಯರು ಪರಿಣಿತರಾಗಿದ್ದರು ಎಂದು ...ಡರು.

...ಸಿಗಳ್ಳ ಪ್ರಜ್ಞಾವಂತರ ಪ್ರಶ್ನೆಯೆಂದರೆ: ಜಗತ್ತಿನಲ್ಲಿ ... ಜ್ಞಾನ ಅಥವಾ ಮುಂದೆ ಹುಟ್ಟಬಹುದಾದ ... ಪುರಾತನ ಭಾರತೀಯ ಋಷಿಗಳಿಗೆ ಆಗಲೇ ...ಎಂದಾದರೆ ಆ ಅಮೂಲ್ಯ ಜ್ಞಾನವನ್ನು ಮುಂದಿನ ...ಗೆ ಅವರ ಯಾಕೆ ದಾಟಸಲಿಲ್ಲ? ಎಲ್ಲ ಋಷಿಗಳೂ ...ಮೂರು ಪತ್ನಿಯರನ್ನು ಹಾಗೂ ಹತ್ತಾರು ಮಕ್ಕಳನ್ನು ಹೊಂದಿರುತ್ತಿದ್ದರು, ಜತೆಗೆ ನೂರಾರು ಶಿಷ್ಯಂದಿರನ್ನೂ ಹೊಂದಿರುತ್ತಿದ್ದರು. ಹಾಗಿದ್ದೂ ತಮ್ಮ ಅಮೂಲ್ಯ ಜ್ಞಾನವನ್ನು ತಮ್ಮದೇ ಮಕ್ಕಳಿಗೆ/ಶಿಷ್ಯರಿಗೆ ದಾನ ಮಾಡಿ ಪೀಳಿಗೆಯಿಂದ ಪೀಳಿಗೆಗೆ ದಾಟಿಸುತ್ತಾ ಹೋಗಿ ಮನುಕುಲವನ್ನು ಉದ್ಧರಿಸುವ ಘನ ಕಾರ್ಯ ಯಾಕೆ ಮಾಡಲಿಲ್ಲ?



ಗ್ರೀಕ್ ಪುರಾಣಗಳಲ್ಲೂ ಇಂತಹ ಅನೇಕ ಕಾಲ್ಪನಿಕ ಕತೆಗಳಿವೆ. ಅವುಗಳಲ್ಲಿ ಕೆಲವು ಇಂದಿನ ಆವಿಷ್ಕಾರಗಳಿಗೆ ಹೋಲಿಕೆ ಆಗುತ್ತವೆ. ಆದರೂ ಅವರು ತಮ್ಮ ಪೂರ್ವಜರಿಗೆ ಇವೆಲ್ಲಾ ಮೊದಲೇ ಗೊತ್ತಿತ್ತು ಎಂದು ಬಡಾಯಿ ಕೊಚ್ಚುವುದಿಲ್ಲ. ಕಳೆದ ಶತಮಾನದ ಆದಿಭಾಗದಲ್ಲಿ ಎಚ್.ಜಿ. ವೇಲ್ಸ್ ಎಂಬ ಇಂಗ್ಲಿಷ್ ಸಾಯನ್ಸ್ ಫಿಕ್ಷನ್ ಕಥೆಗಾರ ಟೈಮ್-ಮಶೀನ್ ಬಗ್ಗೆ ಹಾಗೂ ಇನ್ನೊಂದು ಗ್ರಹವಾಸಿಗಳೊಂದಿಗೆ ಮನುಷ್ಯರ ಸಂಪರ್ಕದ ಬಗ್ಗೆ ಕತೆಗಳನ್ನು ಬರೆದಿದ್ದಾರೆ. ನಂತರ ಅವನ್ನು ಹಾಲಿವುಡ್ಡಿನವರು ಸಿನಿಮಾ ಮಾಡಿದ್ದಾರೆ. ಇದರ ಅರ್ಥ ವೇಲ್ಸ್ ಅಥವಾ ಹಾಲಿವುಡ್‌ನವರು ಟೈಮ್ ಮಷೀನಿನಲ್ಲಿ ನಿಜವಾಗಿ ಭೂತ-ಭವಿಷ್ಯ ಕಾಲಕ್ಕೆ ಹೋಗಿ ಬಂದು ನಂತರ ಕಥೆ ಬರೆದು ಸಿನಿಮಾ ಮಾಡಿದ್ದೇ?

### ಒಂದು ಪತ್ರ

ಇಯಾನ್ ಫ್ಲೇಮಿಂಗ್ 1950 ರ ದಶಕದಲ್ಲಿ ಅನೇಕ ಜೇಮ್ಸ್ ಬಾಂಡ್ ಕತೆಗಳನ್ನು ಬರೆದು ಅವುಗಳಲ್ಲಿ ಅನೇಕ ವಿಚಿತ್ರ ಮಶೀನು-ಆಯುಧ ಹಾಗೂ ಮಾಯವಾಗುವ ಕಾರುಗಳ ಬಗ್ಗೆ ವಿವರಿಸಿದ್ದಾನೆ. ಅವುಗಳನ್ನು ಹಾಲಿವುಡ್‌ನವರು ಸಿನಿಮಾ ಮಾಡಿದ್ದಾರೆ. ಜೇಮ್ಸ್ ಬಾಂಡ್‌ನ ಈ ವಿಚಿತ್ರ ಆಯುಧ ಹಾಗೂ ಮಶೀನುಗಳಲ್ಲಿ ಕೆಲವು ಇಂದು ನಿಜವಾಗಿ ಆವಿಷ್ಕಾರವಾಗಿವೆ. ಹಾಗಿದ್ದರೆ ಈ ವಿಚಿತ್ರ ಆಯುಧ ಮತ್ತು ಮಶೀನುಗಳನ್ನು ಫ್ಲೇಮಿಂಗ್ ನಿಜವಾಗಿ ತಯಾರಿಸಿ ಉಪಯೋಗಿಸಿ ಸ್ವಂತ ಅನುಭವ ಪಡೆದ ನಂತರವೇ ಜೇಮ್ಸ್ ಬಾಂಡ್ ಕಥೆ ಬರೆದು ಸಿನಿಮಾ ಮಾಡಿದ್ದೇ?

ನಮ್ಮ ಪುರಾಣಿಕರೂ ಹೀಗೇ ಕಾಲ್ಪನಿಕವಾಗಿ ಬರೆದಿದ್ದರಲ್ಲಿ ಕೆಲವು ಇಂದಿನ ಅನ್ವೇಷಣೆಗಳಿಗೆ ಸಾಮ್ಯತೆ ಹೊಂದಿವೆ. ಅಷ್ಟು ಮಾತ್ರಕ್ಕೆ ಅವು ಪುರಾಣ ಕಾಲದಲ್ಲಿ ನಿಜವಾಗಿ ಇತ್ತೆನ್ನುವುದು ಸರಿಯೇ? ನಮ್ಮ ಪೂರ್ವಜರಿಗೆ ಎಲ್ಲಾ ಗೊತ್ತಿತ್ತು ಎಂದು ನಮ್ಮ ಬೆನ್ನು ನಾವೇ ತಟ್ಟಿಕೊಳ್ಳುತ್ತಾ ಹೊಸ ಜ್ಞಾನಕ್ಕೆ ಬಾಗಿಲು ಮುಚ್ಚುವ ಬದಲು ನಮ್ಮ ಮೂಲ ಭಾರತೀಯ ತತ್ವವಾದ 'ಜ್ಞಾನ ಯಾವುದೇ ದಿಕ್ಕಿನಿಂದಾದರೂ ಬರಲಿ ಅದನ್ನು ನಾವು ಸ್ವೀಕರಿಸೋಣ' ಎಂಬುದನ್ನು ಅನುಸರಿಸೋಣ.

ನಮ್ಮ ಪೂರ್ವಜರಿಗೆ ಎಲ್ಲವೂ ಗೊತ್ತಿತ್ತು ಎನ್ನುವ ಸನಾತನಿಗಳ ಬುದ್ಧಿಗೆ ಒಮ್ಮೆ ನಮ್ಮ ಹಿಂದಿನ ಮುಖ್ಯಮಂತ್ರಿ ಜೆ.ಎಚ್.ಪಟೇಲರು ತಮ್ಮ ವಿಶಿಷ್ಟ ಹಾಸ್ಯ ಶೈಲಿಯಲ್ಲೇ ಸರಿಯಾಗಿ ಜಾಡಿಸಿದ್ದರು. ಆಗ ಇನ್ನೂ ಏಡ್ಸ್ ರೋಗಕ್ಕೆ ಮದ್ದು ಹುಡುಕಿರಲಿಲ್ಲ. ಆದರೂ ಒಂದು ಏಡ್ಸ್ ಜಾಗೃತಿ ಸಮಾವೇಶದಲ್ಲಿ ಒಬ್ಬ ಭಾಷಣಕಾರರು "ಏಡ್ಸ್ ರೋಗಕ್ಕೆ ನಮ್ಮ ಭಾರತದ ಪುರಾತನ ವೈದ್ಯಕೀಯ ಪದ್ಧತಿಯಲ್ಲಿ ಪರಿಣಾಮಕಾರಿ ಮದ್ದು ಇತ್ತು" ಎಂದು ಬಡಾಯಿ ಕೊಚ್ಚಿದ್ದರು. ನಂತರ ಭಾಷಣ ಮಾಡಿದ ಪಟೇಲರು "ಮನುಷ್ಯರಿಗೆ ಏಡ್ಸ್ ರೋಗ ಮೊಟ್ಟ ಮೊದಲು ಹರಡಲು ಕಾರಣ ಮಾನವ ಪ್ರಾಣಿಗಳೊಂದಿಗೆ ಲೈಂಗಿಕ ಸಂಪರ್ಕ ಮಾಡಿದ್ದು, ನಮ್ಮ ಪೂರ್ವಜರಿಗೆ ಏಡ್ಸ್ ಇದ್ದಿರಲು ಸಾಧ್ಯ, ಅದಕ್ಕೆ ಅವರು ಮದ್ದು ಹುಡುಕಿರಲೂ ಸಾಧ್ಯ. ಕಾರಣ ಖಜುರಾಹೊ ದೇವಸ್ಥಾನದಲ್ಲಿ ಮನುಷ್ಯರು ಕುದುರೆ ಹಾಗೂ ಇತರ ಪ್ರಾಣಿಗಳೊಂದಿಗೆ ಸಂಭೋಗ ಮಾಡುವ ಶಿಲ್ಪಗಳನ್ನು ನೋಡಿದ ನಂತರ ಭಾರತವೇ ಏಡ್ಸ್ ರೋಗದ ತವರು ಎನಿಸುತ್ತದೆ" ಎಂದು ಹಾಸ್ಯ ಬಾಣವನ್ನು ಬಿಡುವ ಮೂಲಕ ಸನಾತನಿಗಳ ಕೆನ್ನೆಗೆ ಬಾರಿಸಿ ಸಭೆಯನ್ನು ನಗೆಗಡಲಲ್ಲಿ ತೇಲಿಸಿದ್ದರು!

-ಪ್ರವೀಣ್ ಎಸ್ ಶೆಟ್ಟಿ, ಮಂಗಳೂರು

# ಕಾಯಕ ಎಂದರೆ?

ಕಾಯಕ ಪದವು ವಚನ ಕನ್ನಡದ ವಿಶಿಷ್ಟವಾದ ಪದವಾಗಿದೆ. ಮಾನವ ಕಾಯದಿಂದ ಹಿಡಿದು ಆಕಾಶಕಾಯ ಗಳವರೆಗೆ ಇದರ ಅರ್ಥ ವಿಸ್ತಾರವಿದೆ. ವಾನರ ನರನಾಗುವಲ್ಲಿ ಕಾಯಕದ ಪಾತ್ರ ಮಹತ್ವದ್ದಾಗಿದೆ ಎಂದು ವೈಜ್ಞಾನಿಕ ಸಮತಾವಾದದ ಮೂಲ ಪುರುಷರಲ್ಲೊಬ್ಬರಾದ ಫ್ರೆಡ್ರಿಕ್ ಎಂಗೆಲ್ಸ್ ಅವರು 19ನೇ ಶತಮಾನದಲ್ಲೇ ತಿಳಿಸಿದ್ದಾರೆ. ಮಹಾನ್ ಕಲಾವಿದ ರಾಫೆಲ್‌ನ ಬೆರಳುಗಳು ಕುಂಚವನ್ನು ಹಿಡಿಯಲು ಸಾಧ್ಯವಾದುದರ ಹಿಂದೆ 50 ಸಾವಿರ ವರ್ಷಗಳ ಮಾನವನ ಕಾಯಕದ ಪರಿಶ್ರಮವಿದೆ ಎಂದು ಅವರು ತಿಳಿಸುತ್ತಾರೆ.

ಮಾನವನ ಕಾಯವು ಸುಂದರ ರೂಪ ತಾಳುವಲ್ಲಿ ಕಾಯಕದ ಪಾತ್ರ ಮಹತ್ವದ್ದಾಗಿದೆ. ಮಾನವನ ದೈಹಿಕ ಮತ್ತು ಮಾನಸಿಕ ಬೆಳವಣಿಗೆಗೆ ಕಾಯಕವು ಮೂಲಾಧಾರ ವಾಗಿದೆ. ಪಿರಮಿಡ್ ಮೊದಲಾದ ಜಗತ್ತಿನ ಸಪ್ತ ಆಶ್ಚರ್ಯಗಳು ಕೂಡ ಮಾನವನ ಕಾಯಕದ ಫಲವೇ ಆಗಿವೆ. ಎಲ್ಲ ನಾಗರಿಕತೆಗಳು ಕಾಯಕದ ಮೂಲಕವೇ ಉಚ್ಛ್ರಾಯ ಸ್ಥಿತಿಯನ್ನು ಹೊಂದಿವೆ. ಈ ಭೂಮಿಯು ಬದುಕಲು ಹೆಚ್ಚು ಹೆಚ್ಚು ಯೋಗ್ಯವಾಗುವಲ್ಲಿ ಕಾಯಕದ ಪಾತ್ರ ಮಹತ್ವದ್ದಾಗಿದೆ. ಅಭ್ಯಾಸದ ಬಲದಿಂದ ಅಂದರೆ ಕಾಯಕದ ನಿಷ್ಠೆಯಿಂದ ಮಂದಮತಿ ಸುಜ್ಞಾನಿಯಾಗುತ್ತಾನೆ ಎಂದು ಕಬೀರದಾಸರು ಹೇಳುತ್ತಾರೆ. ಕಾಯಕ ಎಂಬುದು ಜ್ಞಾನದ ಮೂಲ ಎಂಬುದನ್ನು ವಿಶ್ವವಿಖ್ಯಾತ ವಿಜ್ಞಾನಿ ಐನ್‌ಸ್ಟೈನ್ ತಿಳಿಸಿದ್ದಾರೆ.

ಬಡವರು ಕಾಯಕದ ಮೂಲಕ ತಮ್ಮ ಮನಸ್ಸನ್ನು ಉಳಿಯ ಹಾಗೆ ಚೂಪುಗೊಳಿಸಿಕೊಳ್ಳುತ್ತಾರೆ. ಲಕ್ಷಾಂತರ ಉಳಿಗಳು ಬಲಿಷ್ಠವಾದ ಬೆಟ್ಟವನ್ನು ಒಡೆಯುವ ಹಾಗೆ ಕಾಯಕಜೀವಿಗಳು ಒಂದಾದಾಗ ಶೋಷಣೆಯ ಬಲಿಷ್ಠ ವ್ಯವಸ್ಥೆ ಕೂಡ ನಿರ್ನಾಮವಾಗುತ್ತದೆ ಎಂದು ಬಸವಣ್ಣನವರ ಸಮಕಾಲೀನ ಶರಣೆ ಆಯ್ದಕ್ಕಿ ಲಕ್ಕಮ್ಮ ಸೂಚಿಸಿದ್ದಾಳೆ.

ಕಾಯಕವು ಶರೀರವನ್ನು ಸದೃಢಗೊಳಿಸುತ್ತದೆ. ಮನಸ್ಸನ್ನು ಉಲ್ಲಾಸದಲ್ಲಿಡುತ್ತದೆ. ಕಾಯಕದಿಂದ ಅರಿವಿನ ವಿಸ್ತಾರವಾಗುತ್ತಲೇ ಇರುತ್ತದೆ. ಕಾಯಕದಿಂದ ಮಾನವ ತನ್ನ ಆತ್ಮಗೌರವವನ್ನು ಕಾಪಾಡಿಕೊಂಡು ಸ್ವಾಭಿಮಾನದಿಂದ ಬದುಕುತ್ತಾನೆ ಮತ್ತು ದಾಸೋಹಂ ಭಾವದಿಂದ ಇತರರು ಬದುಕಲು ನೆರವಾಗುತ್ತಾನೆ. ಆತ ಇತರರ ಮುಂದೆ ಕೈಯೊಡ್ಡುವುದಿಲ್ಲ, ಆದರೆ ಕಷ್ಟದಲ್ಲಿರುವವರ ಕಡೆಗೆ ಸಹಾಯಹಸ್ತವನ್ನು ಚಾಚುತ್ತಲೇ ಇರುತ್ತಾನೆ. ಇದು ಕಾಯಕಜೀವಿಗಳ ಲಕ್ಷಣವಾಗಿದೆ. ಈ ಕಾಯಕ ತತ್ತ್ವದ ಆಧಾರದ ಮೇಲೆಯೆ ಬಸವಣ್ಣನವರು ವಿಶ್ವಮಾನ್ಯವಾದ ಮಾನವಧರ್ಮದ ಸ್ಥಾಪನೆ ಮಾಡಿದರು. ಅದು ವಿಶ್ವದಲ್ಲಿ ಕಾಯಕಜೀವಿಗಳ ಮೊದಲ ಧರ್ಮವಾಯಿತು. ಇದು ಮೂಲತಃ ಭಿಕ್ಷುಕರಿಲ್ಲದ ಧರ್ಮವಾಗಿದೆ. ಏಕೆಂದರೆ ಕಾಯಕಜೀವಿಗಳು ಎಂದೂ ಭಿಕ್ಷಾಟನೆಯಲ್ಲಿ ತೊಡಗುವುದಿಲ್ಲ, ಸ್ವಾಭಿಮಾನವೇ ಅವರ ಅಕ್ಷಯ ಸಂಪತ್ತಾಗಿರುತ್ತದೆ. ಅಂತೆಯೆ ಬಸವಣ್ಣನವರು ಕಾಯಕಜೀವಿಗಳ ಕುರಿತು 'ಮನೆ ನೋಡಾ ಬಡವರು ಮನ ನೋಡಾ ಘನಮನ ಸಂಪನ್ನರು' ಎಂದು ಹೇಳಿದ್ದಾರೆ. 'ಕಲ್ಯಾಣದಲ್ಲಿ ಕೊಡುವವರುಂಟು ಬೇಡುವವರಿಲ್ಲ' ಎಂದು ತಿಳಿಸಿದ್ದಾರೆ. 'ಬೇಡುವವರಿಲ್ಲದೆ ಬಡವಾದೆನಯ್ಯಾ' ಎಂದು ಅವರು ಹೇಳಿದ್ದಾರೆ. ಕಲ್ಯಾಣದ ಪ್ರಧಾನಿ ಬಸವಣ್ಣನವರು ಕಾಯಕ ತತ್ತ್ವದ ಮೂಲಕ ಬೇಡುವವರಿಲ್ಲದ ಸಮಾಜದ ಸೃಷ್ಟಿ ಮಾಡಿದ್ದು ವಿಶ್ವದ ಇತಿಹಾಸದಲ್ಲೇ ಅನನ್ಯವಾಗಿದೆ.

ಹಾಗೆ ನೋಡಿದರೆ ಇಡೀ ವಿಶ್ವವೇ ಕಾಯಕದ ಮೇಲೆ ನಿಂತಿದೆ. ಕಾಯಕ ಇಲ್ಲದೆ ಜಗತ್ತಿನಲ್ಲಿ ಯಾವುದೂ ಬದುಕಿರಲಾರದು. ಇಲಿಯಾಗಲಿ, ಹುಲಿಯಾಗಲಿ ತಮ್ಮ ಆಹಾರವನ್ನು ತಾವೇ ಹುಡುಕಿಕೊಳ್ಳಬೇಕು. ಭಿಕ್ಷುಕರಿರುವುದು ಮಾನವ ಲೋಕದಲ್ಲಿ ಮಾತ್ರ. ಇತರ ಯಾವುದೇ ಜೀವಿಗಳು ಕಾಯಕವಿಲ್ಲದೆ ಬದುಕಲಾರವು. ಜಿಗಣೆಗಳು ಮತ್ತು ಸೊಳ್ಳೆಗಳು ರಕ್ತವನ್ನು ಹೀರುವ ಕಾಯಕವನ್ನಾದರೂ ಮಾಡಲೇಬೇಕು. ಇಲ್ಲದಿದ್ದರೆ ಅವು ಸತ್ತು ಹೋಗುವವು. ಆದರೆ ಮನುಷ್ಯರಲ್ಲಿ ವಿವಿಧ ರೀತಿಯ ಭಿಕ್ಷುಕರಿದ್ದಾರೆ. ದುಡಿಯುವ ಶಕ್ತಿಯಿಲ್ಲದ ಭಿಕ್ಷುಕರು ಆತ್ಮಗೌರವದಿಂದ ಬದುಕುವಂಥ ನೆಲೆಯನ್ನು ಒದಗಿಸುವುದು ಸರ್ಕಾರ ಮತ್ತು ನಾಗರಿಕ ಸಮಾಜದ ಕರ್ತವ್ಯ ವಾಗಿದೆ. ಆದರೆ ದುಡಿಯುವ ಶಕ್ತಿ ಇದ್ದೂ ಸೋಮಾರಿಗಳಾಗಿ ಭಿಕ್ಷಾಟನೆಯಲ್ಲಿ ತೊಡಗಿರುವವರು ತಮ್ಮ ಆತ್ಮಗೌರವವನ್ನು ಕಳೆದುಕೊಂಡು ಜೀವನ ನಿರ್ವಹಣೆ ಮಾಡುತ್ತಿರುತ್ತಾರೆ. ಕಾಯಕದ ಮೂಲಕ ಬರುವ ಆತ್ಮಗೌರವ ಮತ್ತು ಆನಂದವನ್ನು ಅವರು ಪಡೆಯಲಿಕ್ಕಾಗುವುದಿಲ್ಲ. ಇವರನ್ನು ಹಾಗೂ ಹೀಗೂ ಸಹಿಸಿಕೊಳ್ಳಬಹುದು. ಆದರೆ ಆಧುನಿಕ ಸಮಾಜದಲ್ಲಿ ಅಸಹ್ಯವಾದ ಭಿಕ್ಷುಕರಿದ್ದಾರೆ. ಕಾನೂನನ್ನು ಕೈಯಲ್ಲಿ ಹಿಡಿದುಕೊಂಡು ಮತ್ತು ತಮಗಿದ್ದ ಅಧಿಕಾರದ ದುರುಪಯೋಗ ಮಾಡಿಕೊಂಡು ಭ್ರಷ್ಟಾಚಾರದಲ್ಲಿ ತೊಡಗಿರುವವರು ಆಧುನಿಕ ಭಿಕ್ಷುಕರು. ಮಾನ ಮರ್ಯಾದೆಯ ವಿಚಾರ ಇವರ ಮನಸ್ಸಿನಲ್ಲಿ ಮೂಡುವುದೇ ಇಲ್ಲ. ಭ್ರಷ್ಟಾಚಾರವೆಂಬುದು ಭಾರತದ ವ್ಯವಸ್ಥೆಗೆ ಅಂಟಿದ ಭಯಂಕರ ರೋಗವಾಗಿದೆ. ಎಲ್ಲಿ ಕಾಯಕ ಜೀವಿಗಳ ಬಗ್ಗೆ ಗೌರವವಿರುವುದಿಲ್ಲವೋ ಅಲ್ಲಿ ಭ್ರಷ್ಟಾಚಾರ ತಾಂಡವವಾಡುವುದರಲ್ಲಿ ಸಂಶಯವಿಲ್ಲ.



ಕಾಯಕಕ್ಕೆ ಬೆಲೆ ಸಿಗುವವರೆಗೆ ಭಾರತ ಸಮೃದ್ಧಿಯನ್ನು ಸಾಧಿಸಲು ಸಾಧ್ಯವಿಲ್ಲ. ಚೀನಾ ದೇಶದಲ್ಲಿ ಕಾಯಕಕ್ಕೆ ಬಹಳ ಮಹತ್ವವಿದೆ. ಇಂದು ಅವರು ಇಡೀ ಜಗತ್ತಿಗೆ ಬೇಕಾಗುವಷ್ಟು ವಸ್ತುಗಳ ಉತ್ಪಾದನೆ ಮಾಡುವ ಶಕ್ತಿಯನ್ನು ಸಂಪಾದಿಸಿದ್ದಾರೆ. ಇಂಗ್ಲೆಂಡ್, ಅಮೆರಿಕ, ಕೆನಡಾ, ಆಸ್ಟ್ರೇಲಿಯಾ, ನ್ಯೂಜಿಲೆಂಡ್, ಫ್ರಾನ್ಸ್ ಹೀಗೆ ಅಭಿವೃದ್ಧಿ ಹೊಂದಿದ ದೇಶಗಳು ಕೂಡ ಚೀನದ ಉತ್ಪನ್ನಗಳ ಮೇಲೆ ಅವಲಂಬಿತವಾಗಿವೆ. ಈ ಬಂಡವಾಳಶಾಹಿ ದೇಶಗಳಲ್ಲಿ ಬಂಡವಾಳ ಇದ್ದರೂ ಜನಸಂಖ್ಯೆ ಕಡಿಮೆ ಇರುವುದರಿಂದ ದುಡಿಯುವ ಶಕ್ತಿ ಕಡಿಮೆ ಇದೆ. ಹೀಗಾಗಿ ಅವರು ಕಾರ್ಮಿಕ ಶಕ್ತಿ ಇರುವ ಚೀನದ ಮೇಲೆ ಅವಲಂಬಿತರಾಗುತ್ತಿದ್ದಾರೆ. ಚೀನಾ ಕಾಯಕಜೀವಿಗಳ ಮೂಲಕ ಜಗತ್ತಿನ ಶ್ರೀಮಂತ ದೇಶಗಳಲ್ಲಿ ಒಂದಾಗಿದೆ. ಭಾರತ ಕೂಡ ಕಾಯಕಜೀವಿಗಳ ಕೌಶಲ್ಯವನ್ನು ಹೆಚ್ಚಿಸುವುದರ ಮೂಲಕ ಉತ್ಪಾದನೆಯಲ್ಲಿ ಹೆಚ್ಚಳ ಸಾಧಿಸಿದರೆ ಬಲಾಢ್ಯ ರಾಷ್ಟ್ರವಾಗುವುದರಲ್ಲಿ ಸಂಶಯವಿಲ್ಲ. ■

# ಬಸವಣ್ಣನವರ ವ್ಯಕ್ತಿತ್ವ

ಕವಿತ್ವ ಸಾಧಕರೆಲ್ಲ ಕಳವಳಿಸಿ ಹೋದರು;
ವಿದ್ಯಾಸಾಧಕರೆಲ್ಲ ಬುದ್ಧಿಗೆಟ್ಟರು.
ತತ್ತ್ವಸಾಧಕರೆಲ್ಲ ಭಕ್ತಿಹೀನರಾದರು;
ಲಿಂಗಸಾಧಕರೆಲ್ಲ ಭೂಭಾರಕರಾದರು.
ಕೂಡಲಚೆನ್ನಸಂಗಮದೇವಾ ನಿಮ್ಮ ಬಸವಣ್ಣ
ಜಂಗಮಸಾಧಕನಾಗಿ ಸ್ವಯಂಲಿಂಗವಾದನು.

ಚೆನ್ನಬಸವಣ್ಣನವರ ಈ ವಚನ ಬಸವಣ್ಣನವರ ವ್ಯಕ್ತಿತ್ವಕ್ಕೆ ಕನ್ನಡಿ ಹಿಡಿಯುತ್ತದೆ. ಬಸವಣ್ಣನವರು ದೇಶ ಕಾಲ ಮೀರಿ ಅದು ಹೇಗೆ ಜಗಜ್ಯೋತಿಯಾದರು ಎಂಬುದನ್ನು ಸೂಚಿಸುತ್ತದೆ. ಬಸವಣ್ಣನವರ ಕಾಲದಲ್ಲಿ ಕೂಡ ಪರಿಸ್ಥಿತಿ ಭಿನ್ನವಾಗಿರಲಿಲ್ಲ. ಅಂಥ ಸ್ಥಿತಿಯಲ್ಲಿ ಬಸವಣ್ಣನವರು ಅನನ್ಯವಾದುದನ್ನು ಹೇಗೆ ಸಾಧಿಸಿದರು ಎಂಬುದಕ್ಕೆ ಈ ವಚನ ಸಾಕ್ಷಿಯಾಗಿದೆ.

ಸೃಜನಶೀಲತೆ, ಬುದ್ಧಿಮತ್ತೆ, ತತ್ತ್ವಸಾಧನೆ ಮತ್ತು ಧಾರ್ಮಿಕ ವಿಧಿವಿಧಾನಗಳ ಸಾಧನೆ ಲೋಕಹಿತಾರ್ಥ ವಾಗದೆ ಇದ್ದರೆ ನಿರುಪಯುಕ್ತವಾಗುತ್ತವೆ ಎಂಬುದು ಚೆನ್ನಬಸವಣ್ಣನವರ ದೃಢನಿಲುವಾಗಿದೆ. ಆ ಕಾಲದಲ್ಲೂ ಕವಿಗಳು ಮತ್ತು ಮಹಾಕವಿಗಳು ಹೀಗೇ ಇದ್ದರು. ಅವರು ಬಡವರ ಬಗ್ಗೆ ಒಳ್ಳೆಯದನ್ನೇ ಬರೆದರು. ತಮ್ಮ ಕಾವ್ಯಗಳಲ್ಲಿ ಕರುಣಾರಸವನ್ನೇ ಹರಿಸಿದರು. ಆದರೆ ಬಡವರ ಬದುಕ ಬದಲಾವಣೆಗಾಗಿ ತಮ್ಮ ಅರಿವನ್ನು ಆಚರಣೆಯಲ್ಲಿ ತರುವುದಕ್ಕಾಗಲಿಲ್ಲ. ವಚನಕಾರರು ಬರುವವರೆಗೆ ಸೃಜನಶೀಲರ ಅರಿವು ಮತ್ತು ಆಚರಣೆಯಲ್ಲಿ ಸಂಬಂಧವಿರಲಿಲ್ಲ.

ವಿದ್ಯಾಸಾಧಕರು ತಮ್ಮ ವಿದ್ಯೆಯನ್ನು ಸ್ವಾರ್ಥಕ್ಕಾಗಿ ಮಾತ್ರ ಬಳಸಿಕೊಳ್ಳುತ್ತ ಬಂದರು. ಅಹಂ ಅನ್ನು ಬೆಳೆಸುವ ಮತ್ತು ಆ ಮೂಲಕ ಸ್ವಾರ್ಥ ಸಾಧಿಸುವ ವಿದ್ಯಾಸಾಧಕರು ಬುದ್ಧಿಗೆಟ್ಟವರು ಎಂದು ಚೆನ್ನಬಸವಣ್ಣನವರು ಸಾತ್ವಿಕ ಕೋಪವನ್ನು ವ್ಯಕ್ತಪಡಿಸುತ್ತಾರೆ.


ವೇದಶಾಸ್ತ್ರದವರ ಹಿರಿಯರೆನ್ನೆ ಎಂದು ಬಸವಣ್ಣನವರು ಕೂಡ ತಿಳಿಸಿದ್ದಾರೆ. ಮಾನವ ಬದುಕನ್ನು ಸಮೃದ್ಧಗೊಳಿಸುವಂಥ ಕ್ರಿಯಾಶೀಲ ವಿದ್ಯೆಯನ್ನು ಮಾತ್ರ ಬಸವಣ್ಣನವರು ಗೌರವಿಸಿದ್ದಾರೆ.

ತತ್ತ್ವಸಾಧಕರು ಭಕ್ತಿಹೀನರಾದರು ಎಂದು ಚೆನ್ನಬಸವಣ್ಣನವರು ತಿಳಿಸುತ್ತಾರೆ. ನಮ್ಮ ದೇಶದಲ್ಲಿ ಒಂದು ಸಂಪ್ರದಾಯವಿತ್ತು, ರಾಜರು ವಿವಿಧ ತತ್ತ್ವಸಿದ್ಧಾಂತಿಗಳಿಗೆ ಉಂಬಳಿ ನೀಡುತ್ತಿದ್ದರು. ಅದರಿಂದಾಗಿ ತತ್ತ್ವಸಾಧಕರಿಗೆ ಯಾವುದೇ ಆರ್ಥಿಕ ಸಮಸ್ಯೆಗಳು ಇರುತ್ತಿರಲಿಲ್ಲ. ಅವರಿಗೆ ರಾಜರಿಂದ ಕಾಣಿಕೆಯಾಗಿ ಬಂದ ಹೊಲ ಗದ್ದೆಗಳಲ್ಲಿ ಬಡವರು ಬಿಟ್ಟಿ ಕೂಲಿ ಮಾಡುತ್ತಿದ್ದರು. ಬಂದ ಉತ್ಪನ್ನವನ್ನು ಭೋಗಿಸುತ್ತ ತಮ್ಮ ತಮ್ಮ ತತ್ತ್ವಗಳಾದ ದ್ವೈತ, ಅದ್ವೈತ, ವಿಶಿಷ್ಟಾದ್ವೈತ, ಶಕ್ತಿವಿಶಿಷ್ಟಾದ್ವೈತ ಮತ್ತು ಮುಂತಾದವುಗಳ ಶ್ರೇಷ್ಠತೆಯನ್ನು ಪ್ರತಿಪಾದಿಸುವು... ತಮ್ಮ ಬದುಕನ್ನು ಕಳೆಯುತ್ತ ಭಕ್ತಿಹೀನರಾದರು ಚೆನ್ನಬಸವಣ್ಣನವರು ಹೇಳುತ್ತಾರೆ. ಭಕ್ತಿಹೀನರಾಗುವು... ಜೀವಕಾರುಣ್ಯವಿಲ್ಲದೆ ತತ್ತ್ವಸಿದ್ಧಾಂತಗಳ ಗುಂ... ಬದುಕುವುದು.

ಶರಣರ ಪ್ರಕಾರ ಭಕ್ತಿ ಎಂಬುದು ಜೀವಕಾರು... ಒಳಗೊಂಡ ಶಬ್ದವಾಗಿದೆ. ಸಮತೆಯನ್ನು ಸಾ... ಬದುಕಿನಲ್ಲಿ ಜೀವಕಾರುಣ್ಯವನ್ನು ಅಳವಡಿಸಿಕೊಳ್ಳಲಿ... ಬದುಕಿನ ಬವಣೆಯನ್ನು ಪರಿಹರಿಸದ ತತ್ತ್ವಸಿದ್ಧಾಂ... ಬಡವರ ಮತ್ತು ಅಸಹಾಯಕರ ಪ... ನಿರರ್ಥಕವಾಗಿರುತ್ತವೆ ಎಂಬುದನ್ನು ಚೆನ್ನಬಸವಣ್ಣ... ಸೂಚಿಸಿದ್ದಾರೆ.

ಲಿಂಗಸಾಧಕರೆಲ್ಲರೂ ಭೂಭಾರಕರಾದರು ... ಅವರು ಬೇಸರ ವ್ಯಕ್ತಪಡಿಸುತ್ತಾರೆ. ನಿಜವಾದ ಲಿಂಗ... ಎಂದರೆ ಕೇವಲ ಆತ್ಮೋದ್ಧಾರಕ್ಕಾಗಿ ಮಾಡುವ ... ಅಲ್ಲ, ಆತ್ಮೋದ್ಧಾರದ ಜೊತೆಗೆ ಲೋಕೋ... ಸಾಧನೆಯನ್ನೂ ಮಾಡಬೇಕಾಗುತ್ತದೆ. ಇಷ್ಟಲಿಂಗವು ... ಜೀವಾತ್ಮರಿಗೆ ಲೇಸನೆ ಬಯಸುವ ಅರಿವಿನ ಕು... ಆಗಿದೆ. ಲೋಕದ ಜನರ ಹಿತಸಾಧ... ಕ್ರಿಯಾಶೀಲವಾಗದೆ ಲೋಕೋದ್ಧಾರವಾಗದು. ಅ... ಲಿಂಗಸಾಧಕರು ಜನಸಾಗರದೊಳಗೆ ಬದುಕು... ಕಲಿಯಬೇಕು. ಅವರ ದುಃಖದುಮ್ಮಾನಗಳಿಗೆ ಸ್ಪಂದಿ... ಅವರ ಬದುಕಿನಲ್ಲಿ ನೆಮ್ಮದಿ ತರುವಂಥ ಕಾಯ... ಮಗ್ನರಾಗಬೇಕು. ಹೀಗೆ ಆತ್ಮೋದ್ಧಾರದ ... ಲೋಕೋದ್ಧಾರ ಮಾಡಿದಾಗ ಮಾತ್ರ ನಿ... ಲಿಂಗಸಾಧನೆಯಾಗುತ್ತದೆ. ಇದನ್ನೆಲ್ಲ ಬಿಟ್ಟು ಲಿಂಗದ ... ಮಾಡುತ್ತ ಅನುಭಾವಿಗಳಾದೆವು ಎಂದು ಭಾವಿಸು... ಏನನ್ನೂ ಸಾಧಿಸದೆ ಭೂಮಿಗೆ ಭಾರವಾಗಿ ಬದು... ಎಂದು ಅವಿರಳಜ್ಞಾನಿ ಚೆನ್ನಬಸವಣ್ಣನವರು ತಿಳಿ... ಹೀಗೆ ಸಮಾಜದ ನೋವುಗಳಿಗೆ ಸ್ಪಂದಿಸದ ಕವಿತ್ವಸಾ... ವಿದ್ಯಾಸಾಧಕರು, ತತ್ತ್ವಸಾಧಕರು ಮತ್ತು ಲಿಂಗಸಾ... ಚೆನ್ನಬಸವಣ್ಣನವರ ದೃಷ್ಟಿಯಲ್ಲಿ ಗೌಣವಾಗುತ್ತಾರೆ. ಈ ಎಲ್ಲ ಶಕ್ತಿ ಸಾಮರ್ಥ್ಯವನ್ನು ಹೊಂದಿದ್ದ ಬಸವಣ... ಇವರೆಲ್ಲರಿಗಿಂತ ವಿಶಿಷ್ಟವಾಗಿ ಕಾಣುತ್ತಾರೆ. ಏಕೆಂದರೆ ... ಇವೆಲ್ಲವನ್ನೂ ಜನಹಿತಕ್ಕಾಗಿ ಬಳಸಿದರು. ಆದ್ದರಿ... ಅವರು ಜಂಗಮ ಸಾಧಕರೆನಿಸಿದರು. ಜಂಗಮ... ನಾಗುವುದೆಂದರೆ ಜಗದ ದುಃಖವನ್ನು ನಿ... ಮಾಡುವುದು. ಬಸವಣ್ಣನವರು ಜಗದ ದುಃ... ನಿವಾರಣೆ ಮಾಡುತ್ತ ಸ್ವಯಂ ದೇವರೇ ಆದರು ... ಚೆನ್ನಬಸವಣ್ಣನವರು ಕೊಂಡಾಡಿದ್ದಾರೆ.

ಧರ್ಮ, ತತ್ತ್ವ, ಸಿದ್ಧಾಂತ, ವಿದ್ಯೆ ಮತ್ತು ಸೃಜನಶೀ... ಬಹುಮುಖ್ಯ ಗುರಿ ಸಮಾನತೆಯ ಸಮಾ... ಸ್ಥಾಪಿಸುವುದೇ ಆಗಬೇಕು ಎಂಬುದನ್ನು ಈ ವಚನವು ಸೂಚಿಸುವುದರಿಂದ ವಚನಸಾಹಿತ್ಯಕ್ಕೆ ಇದು ಕಳಸಪ್ರಾಯವಾಗಿದೆ.



■ ರಂಜಾನ್ ದರ್ಗಾ

# ಪ್ರೀತಿ ಎಂದರೆ?

ಪ್ರೀತಿ ಎಂಬುದು ಜೀವಕಾರುಣ್ಯದ ಶಿಖರವಾಗಿದೆ. ಅದಕ್ಕೆ ಯಾರೂ ಹೊರಗಿನವರಲ್ಲ, ಅದು ಎಲ್ಲರನ್ನೂ ಮತ್ತು ಎಲ್ಲವನ್ನೂ ಒಳಗೊಳ್ಳುವಂತೆ ಮಾಡುತ್ತದೆ. ಅದು ನಮ್ಮ ದೇಶ, ಭಾಷೆ, ಜಾತಿ, ಮತ, ಧರ್ಮ, ತರ್ಕ ಮತ್ತು ಸಿದ್ಧಾಂತಗಳ ಆಧಾರವಿಲ್ಲದೆ 'ಇವ ನಮ್ಮವ, ಇವ ನಮ್ಮವ' ಎಂದು ಭಾವಿಸುವಂತೆ ಮಾಡುತ್ತದೆ. ಅದು ಎಲ್ಲ ಮಾನವೀಯ ಧರ್ಮಗಳ ಮತ್ತು ಚಳವಳಿಗಳ ತಾಯಿಬೇರಾಗಿದೆ. ಮಹಾವೀರ ಹೇಳಿದ ಅಹಿಂಸೆ, ಬುದ್ಧ ಹೇಳಿದ ಕರುಣೆ, ಕ್ರಿಸ್ತ ಹೇಳಿದ ಕ್ಷಮೆ, ಪೈಗಂಬರ ಹೇಳಿದ ಸಹೋದರತ್ವ, ಸೂಫಿ ಸಂತರು ಹೇಳಿದ ಇಷ್ಕ್, ಬಸವಣ್ಣ ಹೇಳಿದ ದಯೆ, ಕಾರ್ಲ್‌ಮಾರ್ಕ್ಸ್ ಹೇಳಿದ ಸಮಾನತೆ, ಗಾಂಧೀಜಿಯವರ ಸತ್ಯಾಗ್ರಹ ಮತ್ತು ಅಂಬೇಡ್ಕರರ ಹೋರಾಟ ಎಂಬ ಪದಗಳ ಒಳ ಅರ್ಥ ಒಂದೇ ಆಗಿದೆ. ಅದುವೇ ಪ್ರೀತಿ. ಪ್ರೀತಿ ಇಲ್ಲದವರು ಭೂಮಿಯ ಮೇಲೆ ಉಸಿರಾಡುವ ಹೆಣಗಳಂತೆ ಬದುಕುತ್ತಾರೆ.

ಮಾನವ ಪ್ರೀತಿಯು ನಮ್ಮನ್ನು ಸಮಾನತೆಯ ತೋಟದ ಕಡೆಗೆ ಎಳೆಯುತ್ತದೆ. ಸ್ವಾತಂತ್ರ್ಯದ ಕನಸುಗಳನ್ನು ತುಂಬುತ್ತದೆ. ಸಕಲ ಜೀವಾತ್ಮರಿಗೆ ಲೇಸನ್ನೇ ಬಯಸುವಂಥ ಮನಸ್ಥಿತಿಗೆ ಕಾರಣವಾಗುತ್ತದೆ. ಅದು ನಮ್ಮ ಬದುಕಿನಲ್ಲಿ



ಶಾಂತಿಯ ಹೂಗಳನ್ನು ಅರಳಿಸುತ್ತದೆ. ಆ ಹೂವುಗಳು ಎಲ್ಲೆಡೆ ನೆಮ್ಮದಿಯ ಪರಿಮಳ ಸೂಸುವಂತೆ ಮಾಡುತ್ತದೆ. ಅದು ಮಂಗಳಮಯವಾದ ಜೀವನವಿಧಾನಕ್ಕೆ ಮೂಲಾಧಾರವಾಗಿದೆ. ಪ್ರೀತಿಯು ಸತ್ಯ ಶಿವ ಮತ್ತು ಸೌಂದರ್ಯಗಳ ಸಂಗಮವಾಗಿದೆ. ಹೀಗೆ ಎಲ್ಲ ಒಳ್ಳೆಯದರ ಮೊತ್ತವೇ ಪ್ರೀತಿ.

'ನನಗೆ ಪ್ರವಾದಿತನದ ವರವಿದ್ದರೂ ಎಲ್ಲ ಪವಿತ್ರ ರಹಸ್ಯಗಳು ಮತ್ತು ಸಕಲವಿಧವಾದ ವಿದ್ಯೆ ತಿಳಿದರೂ ಬೆಟ್ಟಗಳನ್ನು ಎತ್ತಿಡಲು ಬೇಕಾದ ನಂಬಿಕೆ ಇದ್ದರೂ ಪ್ರೀತಿ ಇಲ್ಲದವನಾಗಿದ್ದರೆ ಏನೂ ಇಲ್ಲದವನಾಗುತ್ತೇನೆ' ಎಂದು ಕ್ರಿಸ್ತನ 12 ಮಂದಿ ಶಿಷ್ಯರಲ್ಲಿ ಒಬ್ಬರಾದ ಸೇಂಟ್ ಪೌಲ್ ತಿಳಿಸಿದ್ದಾರೆ.

'ಅದು ಎಲ್ಲವನ್ನೂ ಅಡಗಿಸಿಕೊಳ್ಳುತ್ತದೆ; ಎಲ್ಲವನ್ನೂ ನಂಬುತ್ತದೆ; ಎಲ್ಲದರ ಬಗ್ಗೆ ಆಶಾಭಾವ ತಾಳುತ್ತದೆ; ಎಲ್ಲವನ್ನೂ ಸಹಿಸುತ್ತದೆ. ಭವಿಷ್ಯವಾಣಿಗಳು ಇಲ್ಲದಂತಾಗುವುವು. ನಂಬಿಕೆ, ನಿರೀಕ್ಷೆ, ಪ್ರೀತಿ ಈ ಮೂರೇ ಉಳಿಯುವುವು. ಅವುಗಳಲ್ಲಿ ಪ್ರೀತಿಯೇ ದೊಡ್ಡದು. ಪ್ರೀತಿಗೆ ಸೋಲಿಲ್ಲ' ಎಂದು ಸೇಂಟ್ ಪೌಲ್ ಕೊರಿಂಥಿಯ ದೇಶದವರಿಗೆ ಹೇಳಿದ್ದನ್ನು ಜಗದ ಜನರು ಬದುಕಿನಲ್ಲಿ ಅಳವಡಿಸಿಕೊಂಡಾಗ ಮಾತ್ರ ಈ ಜಗತ್ತು ಯುದ್ಧಗಳಿಂದ, ಭಯೋತ್ಪಾದಕರಿಂದ, ಕೋಮುವಾದಿಗಳಿಂದ, ಶೋಷಕರಿಂದ ಮತ್ತು ಪುರುಷರ ಅಹಂಕಾರದಿಂದ ಮುಕ್ತವಾಗಲು ಸಾಧ್ಯ.

## ಪ್ರೀತಿಯೆ ನಿಜವಾದ ಜಗತ್ ರಕ್ಷಕ

ಪ್ರೀತಿಯು ಹೆಣ್ಣು ಗಂಡಿನ ಮಧ್ಯದ ಭೇದಭಾವವನ್ನು ತೊಡೆದು ಹಾಕುತ್ತದೆ. ಜಾತಿ ತಾರತಮ್ಯವನ್ನು ಅಲ್ಲಗಳೆಯುತ್ತದೆ. ಬಡವ ಮತ್ತು ಶ್ರೀಮಂತರ ಮಧ್ಯದ ಅಂತರವನ್ನು ಇಲ್ಲವಾಗಿಸುತ್ತದೆ. ಪ್ರೀತಿಯು ಎಲ್ಲ ಜೀವಗಳನ್ನು ಒಂದಾಗಿಸುವ ಮಂತ್ರವಾಗಿದೆ. ವಿಶ್ವಪ್ರಸಿದ್ಧ ಸೂಫಿ ಸಂತ ಜಲಾಲುದ್ದೀನ್ ರೂಮಿ ಅವರ ಒಂದು ಕಥೆಯ ಸಾರಾಂಶ ಹೀಗಿದೆ.

ಭಾರಿ ಶ್ರೀಮಂತನೊಬ್ಬನಿಗೆ ಅಭಿಮಾನಿಯೊಬ್ಬ ವಿದೇಶದಿಂದ ತಂದ ಹಣ್ಣನ್ನು ಕಾಣಿಕೆಯಾಗಿ ಕೊಡುತ್ತಾನೆ. ಪ್ರೀತಿಯ ಪ್ರತಿಮೆಯಂತಿದ್ದ ಆ ಶ್ರೀಮಂತ, ಆ ಹಣ್ಣನ್ನು ಹೋಳು ಮಾಡಿದ. ತನ್ನ ಮಗನಂತೆ ನೋಡಿಕೊಳ್ಳುತ್ತಿದ್ದ ಆಳುಮಗನನ್ನು ಕರೆದು ಅವನಿಗೆ ಮೊದಲ ಹೋ... ಕೊಟ್ಟ. ಆ ಆಳುಮಗ ತುಂಬ ಖುಷಿಯಿಂದ ಆ ಹೋ... ತಿಂದ. ಅವನ ಮುಖದಲ್ಲಿ ಸಂತೃಪ್ತ ಭಾವ ಮ... ಅದನ್ನು ನೋಡಿದ ಆ ಶ್ರೀಮಂತ ಇನ್ನೊಂದು ಹೋ... ಕೊಟ್ಟ. ಆ ಆಳುಮಗ ಇನ್ನೂ ಸಂತೃಪ್ತಭಾವದಿಂದ... ಆಳುಮಗನ ಖುಷಿಯನ್ನೇ ನೋಡುತ್ತ ಸಂತಸ ಪ... ಹೋಳುಗಳನ್ನು ಆತನಿಗೆ ಕೊಡುತ್ತಲೇ ಹೋದ. ... ಆ ಶ್ರೀಮಂತ ಕೊನೆಯ ಹೋಳನ್ನು ಕೈಯಲ್ಲಿ ... ನೋಡಿದ. ತನಗೆ ಗೊತ್ತಿಲ್ಲದ ಈ ಹಣ್ಣು ಎಷ್ಟು... ರುಚಿಯಾಗಿರಬಹುದು ಎಂದು ಕಲ್ಪನೆ ಮಾಡಿದ. ಆ... ಇಷ್ಟೊಂದು ಸಂಪ್ರೀತನಾಗಿರಬೇಕಾದರೆ ಇದು ... ಹಣ್ಣೇ ಇರಬೇಕೆಂದು ಭಾವಿಸಿದ. ಆ ಕೊನೆಯ ಹೋ... ತಿಂದು ಅದರ ರುಚಿಯನ್ನು ಸವಿಯಬೇಕೆಂದು ... ಹಾಕಿಕೊಂಡ. ಅದು ವಿಷದಂತೆ ಕಹಿಯಾಗಿತ್ತು. ... ಉಗುಳಿದ. ಸವತೆಕಾಯಿಗಳೊಳಗೆ ... ಸವತೆಕಾಯಿಯೊಂದು ಬರುವ ಹಾಗೆ ಆ ಹಣ... ಹಣ್ಣುಗಳ ಮಧ್ಯೆ ಕಹಿಯಾಗಿ ಬಂದಿರಬಹುದು ... ತಿಳಿದುಕೊಂಡ. 'ಇಷ್ಟು ಕಹಿಯಾದ ಹಣ್ಣನ್ನು ... ಹೇಗೆ ಖುಷಿಯಿಂದ ತಿಂದೆ' ಎಂದು ಆಳುಮ... ಕೇಳಿದ. ಆಗ ಆ ಆಳುಮಗ ಹೇಳಿದ: 'ನಾನು ... ಹಣ್ಣನ್ನಲ್ಲ; ನಿಮ್ಮ ಪ್ರೀತಿಯನ್ನು.'


# ...ಅಪಾಯಕಾರಿಯಾದ ಕುರುಡು ದೇಶಾಭಿಮಾನ

...ಮೋದಿ ಸರ್ಕಾರದ ಗೋಬೆಲ್ಸ್ ತಂತ್ರಗಳೆಲ್ಲವೂ ...ತಪರರು ಎಣಿಸಿದಂತೆಯೇ ಕಾರ್ಯಗತಗೊಳ್ಳುತ್ತಿವೆ. ...ಂದ್ರ ಮೋದಿಯ ಪ್ರತಿಯೊಂದು ನಡೆ ನುಡಿಯನ್ನು ...ದೇ ವೈಭವೀಕರಿಸುವ ಕಾರ್ಯ ಎಷ್ಟೊಂದು ...ಸ್ಥಿತವಾಗಿ ಆಗುತ್ತಿದೆ ಎಂದರೆ ಅದನ್ನು ವಿವರಿಸಲು ...ಗೇ ಸಾಲದು. ಸಾಮಾನ್ಯವಾಗಿ ನಮ್ಮ ಮಾಧ್ಯಮಗಳೆಲ್ಲ ...ದಿ ಬಾಯಿಂದ ಉದುರುವ ನುಡಿಮುತ್ತುಗಳೆಲ್ಲವನ್ನೂ ...ಮಾತ್ರದಲ್ಲಿ ದೇಶವಿದೇಶಗಳ ಜನರಿಗೆ ತಲುಪಿಸುತ್ತವೆ. ...ಥಾ ಸಂದರ್ಭದಲ್ಲಿ ಮೋದಿಯ ಒಂದು ಭಾಷಣವನ್ನು ...ತ್ತ ಹೆಚ್ಚುಕಮ್ಮಿ ಎಲ್ಲಾ ಮಾಧ್ಯಮಗಳೂ ಬ್ಲ್ಯಾಕ್‌ಔಟ್ ...ಡಿಬಿಟ್ಟವು! ಅಕ್ಟೋಬರ್ 25ರಂದು ಮುಂಬಯಿನಲ್ಲಿ ...ತನ ಸರ್ ಎಚ್.ಎನ್.ರಿಲಾಯನ್ಸ್ ಆಸ್ಪತ್ರೆಯ













...ದ್ಘಾಟನೆಯ ವೇಳೆ ಮೋದಿ ಮಾಡಿದ ಈ ಸಾರ್ವಜನಿಕ ...ಷಣವನ್ನು 'ಇಂಡಿಯನ್ ಎಕ್ಸ್‌ಪ್ರೆಸ್' ಬಿಟ್ಟರೆ ಇನ್ನಾರೂ ...ಟಿಸಲೂ ಇಲ್ಲ, ಪ್ರಸಾರ ಮಾಡಲೂ ಇಲ್ಲ! ಎರಡು, ...ರು ದಿನಗಳ ಬಳಿಕ ಅದನ್ನು ಪ್ರಸಾರ ಮಾಡುವ ...ರ್ಯ ಮಾಡಿದ್ದು 'ಹೆಡ್‌ಲೈನ್ಸ್ ಟುಡೇ' ವಾಹಿನಿಯೊಂದೇ ...ಣ್ ಥಾಪರ್‌ನ 'ಟು ದ ಪಾಯಿಂಟ್' ಕಾರ್ಯಕ್ರಮ). ...ವಿಷಯ ಕುರಿತ ಕರಣ್‌ರ ಲೇಖನವೊಂದನ್ನು 'ದ ...ದು' ಈಗಷ್ಟೆ ಪ್ರಕಟಿಸಿದೆ. ಮೋದಿ ಸರ್ಕಾರದ ಕಾಲದಲ್ಲಿ ...ಂತೇಕ ಮಾಧ್ಯಮಗಳು, ಪತ್ರಕರ್ತರು ಭಟ್ಟಂಗಿಗಳಾಗಿ ...ಟ್ಟಾಗಿರುವುದಕ್ಕೆ ಬಹುಶಃ ಇದಕ್ಕಿಂತ ಸ್ಪಷ್ಟ ನಿದರ್ಶನವನ್ನು ...ಕಾಣಲಾರೆವು.


...ಚ್ಚರಿಯಾಯಿತೇ? ನಂಬಲು ಕಷ್ಟವೆನಿಸುತ್ತಿದೆಯೇ? ...ಸಿ ಮೋದಿ ಉವಾಚ ಈ ರೀತಿ ಮೂಲೆಗುಂಪಾಗಿರು...ು ನೂರಕ್ಕೆ ನೂರರಷ್ಟು ನಿಜ. ಕಾರಣವೇನೆಂದು ...ಯಲು ಕುತೂಹಲ ಆಗುತ್ತಿದೆಯಲ್ಲವೇ? ವಾಸ್ತವವೇ...ದರೆ ಮೋದಿಯ ಭಾಷಣ ಪ್ರಧಾನಿ ಸ್ಥಾನದಲ್ಲಿರುವ ವ್ಯಕ್ತಿಯೊಬ್ಬ ಮಾಡುವಂಥ ಭಾಷಣ ಆಗಿರಲಿಲ್ಲ, ಅದು ಗೊಡ್ಡು ಸಂಪ್ರದಾಯವಾದಿಯೊಬ್ಬನ ಮಾತಿನಂತಿತ್ತು, ಆರೆಸ್ಸೆಸ್ ಶಾಖೆಗೆ ಹೊಸದಾಗಿ ಸೇರುವವರಲ್ಲಿ ದೇಶಭಕ್ತಿಯ ಹುಮ್ಮಸ್ಸು ಉದ್ದೀಪಿಸಲು ಮಾಡುವ ಭಾಷಣದಂತಿತ್ತು, ಪ್ರಧಾನಿಯಾದ ಮೇಲೂ ಮೋದಿಯ ಮನೋಸ್ಥಿತಿ ಮತ್ತು ನಿಲುವುಗಳಲ್ಲಿ ಎಳ್ಳಷ್ಟೂ ಬದಲಾವಣೆ ಆಗದಿರುವುದನ್ನು ಎತ್ತಿ ತೋರುವಂತಿತ್ತು. ವೆಂಡಿ ಡಾನಿಗರ್ ಮತ್ತಿತರ ಕೆಲವು ಲೇಖಕರ ಚಾರಿತ್ರಿಕ ಪುಸ್ತಕಗಳ ನಿಷೇಧಕ್ಕೆ ಕಾರಣನಾದ ದೀನನಾಥ್ ಬಾತ್ರ ಎಂಬ ಕಡು ಹಿಂದೂತ್ವವಾದಿಯ ಅಭಿಪ್ರಾಯಗಳನ್ನು ಪ್ರತಿಧ್ವನಿಸುವಂತಿತ್ತು. ಈ ಬಾತ್ರ ಎಂಬಾತ ಭಾರತದ ಋಷಿಮುನಿಗಳು ಟಿವಿ, ಕಾರು, ವಿಮಾನ, ಪ್ರನಾಳಶಿಶು ತಂತ್ರಜ್ಞಾನ ಮುಂತಾದವುಗಳನ್ನು ಎಂದೋ ಕಂಡುಹುಡುಕಿದ್ದರು ಎಂಬಿತ್ಯಾದಿ ಕಲ್ಪನೆಗೂ ಮೀರಿದ ವಿಲಕ್ಷಣ ಹೇಳಿಕೆಗಳಿರುವಂಥ ಪುಸ್ತಕಗಳನ್ನು ರಚಿಸಿದವನು! ಇವನ ಹತ್ತಾರು ಪುಸ್ತಕಗಳಿಂದು ಗುಜರಾತಿನ 42,000 ಶಾಲೆಗಳಲ್ಲಿ ಕಲಿಸಲ್ಪಡುತ್ತಿವೆ! ಅಂದಹಾಗೆ ಬಾತ್ರನ ಪುಸ್ತಕಗಳನ್ನು ಹೊಗಳಿ ಮುನ್ನುಡಿ ಬರೆದವನು ಇನ್ನಾರೂ ಅಲ್ಲ, ಇದೇ ನರೇಂದ್ರ ಮೋದಿ! ಆರೆಸ್ಸೆಸ್‌ನ ರಾಷ್ಟ್ರೀಯವಾದಿ ಸಿದ್ಧಾಂತಕ್ಕೆ ಜೋತುಬಿದ್ದಿರುವ ಈ ಮೋದಿ, ಬಾತ್ರಗಳು ಹಿಂದೆ ಗುಜರಾತಿನಾದ್ಯಂತ ತಥಾಕಥಿತ ಭಾರತೀಯ ಸಂಸ್ಕೃತಿಯ ಶ್ರೇಷ್ಠತೆ ಬಗ್ಗೆ ಭಾಷಣ ಕುಟ್ಟುತ್ತಲೇ ಇದ್ದವರು. ನೆನಪಿರಲಿ, ಇವರಂಥವರು ಕರ್ನಾಟಕ ಸೇರಿದಂತೆ ಇತರ ರಾಜ್ಯಗಳಲ್ಲೂ ಸಾಕಷ್ಟು ಸಂಖ್ಯೆಯಲ್ಲಿದ್ದಾರೆ.

ಪ್ರಜಾತಾಂತ್ರಿಕ ಭಾರತದ ಮುನ್ನಡೆಗೆ ದಿಕ್ಸೂಚಿಯಾಗಿರುವುದು ನಮ್ಮ ಸಂವಿಧಾನ. ಸಂವಿಧಾನದ ವಿಧಿ 51ಎ ಅಡಿಯಲ್ಲಿ ಭಾರತೀಯ ಪ್ರಜೆಯಾದವನ ಪ್ರಧಾನ ಕರ್ತವ್ಯಗಳೇನೆಂಬುದನ್ನು ಸ್ಪಷ್ಟವಾಗಿ ನಿರೂಪಿಸಲಾಗಿದೆ. ವಿಧಿ 51ಎ ಒಟ್ಟು ಹನ್ನೊಂದು ಕರ್ತವ್ಯಗಳನ್ನು ಪಟ್ಟಿಮಾಡುತ್ತದೆ. ವೈಜ್ಞಾನಿಕ ಮನೋಭಾವವನ್ನು ಬೆಳೆಸಿಕೊಳ್ಳುವುದು ಇವುಗಳ ಪೈಕಿ ಒಂದು. ಸಮಾಜದ ನೇತಾರರಾಗಿರುವವರು ಈ ಸಾಂವಿಧಾನಿಕ ಕರ್ತವ್ಯಗಳನ್ನು ಪಾಲಿಸುವ ಮೂಲಕ ಇತರರಿಗೆ ಮೇಲ್ಪಂಕ್ತಿಯಾಗಿರಬೇಕಾಗುತ್ತದೆ. ಅದರಲ್ಲೂ ದೇಶದ ಪ್ರಧಾನಮಂತ್ರಿಯ ಸ್ಥಾನದಲ್ಲಿರುವವರ ಮೇಲೆ ಬಹುದೊಡ್ಡ ಜವಾಬ್ದಾರಿ ಇರುತ್ತದೆ. ಸಾರ್ವಜನಿಕವಾಗಿ ಅವರಾಡುವ ಮಾತುಗಳನ್ನು ದೇಶವಿದೇಶಗಳ ಜನ ಕೇಳುತ್ತಾರೆ. ಆದರೆ 21ನೆ ಶತಮಾನದ ಭಾರತದ ಪ್ರಧಾನಿ ನರೇಂದ್ರ ಮೋದಿ ಅಕ್ಟೋಬರ್ 25ರಂದು ಮುಂಬಯಿನಲ್ಲಿ ಏನು ಹೇಳಿದನೆಂದು ಅವನ ಮಾತುಗಳಲ್ಲೇ ಕೇಳಿ. "ಕರ್ಣ ಹುಟ್ಟಿದ್ದು ತಾಯಿಯ ಹೊಟ್ಟೆಯಿಂದಲ್ಲ ಎಂದು ಮಹಾಭಾರತದಲ್ಲಿ ಹೇಳಲಾಗಿದೆ. ಇದರರ್ಥ ಏನೆಂದರೆ ಆ ಕಾಲದಲ್ಲಿ ತಳಿವಿಜ್ಞಾನ (ಜೆನೆಟಿಕ್ ಸೈನ್ಸ್) ಇತ್ತು ......ನಾವು ಗಣೇಶನನ್ನು ಪೂಜಿಸುತ್ತೇವೆ. ಮನುಷ್ಯ ಶರೀರದ ಮೇಲೆ ಆನೆಯ ತಲೆಯನ್ನು ಕಸಿ ಮಾಡುವ ಮೂಲಕ ಪ್ಲಾಸ್ಟಿಕ್ ಸರ್ಜರಿಯನ್ನು ಪ್ರಾರಂಭಿಸಿದ ಯಾರಾದರೂ ಆ ಕಾಲದಲ್ಲಿ ಇದ್ದಿರಬೇಕು"!!

ನಮ್ಮ ಪೌರಾಣಿಕ ಕಟ್ಟುಕತೆಗಳನ್ನೇ ಸತ್ಯವೆಂದು ಬಿಂಬಿಸಿ, ಎಲ್ಲಾ ವೈಜ್ಞಾನಿಕ ಸಂಶೋಧನೆಗಳಿಗೆ ಭಾರತವೇ ಮೂಲವೆಂದು ಪ್ರತಿಪಾದಿಸುವ ಮೋದಿಯಂಥ ಹಿಂದೂತ್ವವಾದಿಗಳಿಗೆ ಬಹುಶಃ ಅನ್ಯ ದೇಶಗಳ ಪುರಾಣಗಳ ಬಗ್ಗೆ ಗೊತ್ತಿಲ್ಲ ಅಥವಾ ತಿಳಿದೂ ತಿಳಿಯದವರಂತೆ ನಟಿಸುತ್ತಿರಬೇಕು. ಉದಾಹರಣೆಗೆ ಗ್ರೀಕ್ ಪುರಾಣದಲ್ಲಿರುವ ಸೆಂಟಾರ್ ಎಂಬ ಪ್ರಾಣಿಯ ಅರ್ಧಭಾಗ ಮನುಷ್ಯನಾದರೆ ಉಳಿದರ್ಧ ಕುದುರೆ! ಮಿನೋಸ್ ಎಂಬ ಗ್ರೀಕ್ ರಾಜನ ಬಳಿ ಇದ್ದ ಅರ್ಧ ಗೂಳಿ, ಅರ್ಧ ಮನುಷ್ಯ ಆಕಾರದ ಮಿನೊಟಾರ್ ಎಂಬ ನರಭಕ್ಷಕ ರಾಕ್ಷಸನಿಗೆ ವರ್ಷಂಪ್ರತಿ 14 ಯುವಕರನ್ನು ಬಲಿಗೊಡಲಾಗುತ್ತಿತ್ತಂತೆ. ಪರ್ಷಿಯಾದ ಪೌರಾಣಿಕ ಕಥೆಗಳಲ್ಲಿರುವ ಗ್ರಿಫಿನ್‌ನ ಶರೀರದ ಅರ್ಧಭಾಗ ಹದ್ದಿನಂತಿದ್ದರೆ, ಕೆಳಭಾಗ ಸಿಂಹದಂತಿದೆ. ಅದೇ ರೀತಿ ಇಂಗ್ಲೆಂಡಿನ ದಂತಕತೆಗಳಲ್ಲಿ ಒಂದು ಕೊಂಬಿನ ಕುದುರೆಯ ಪ್ರಸ್ತಾಪ ಇದೆ. ಇನ್ನು ವಿಯರ್‌ವೂಲ್ಫ್ ಅಂದರೆ ಆಗಾಗ ತೋಳವಾಗಿ ಮಾರ್ಪಡುವ ಮನುಷ್ಯ, ಅರ್ಧ ಮನುಷ್ಯ ಅರ್ಧ ಮೀನು ಆಕೃತಿಯ ಮರ್‌ಮೇಯ್ಡ್ ಅಥವಾ ಮತ್ಸ್ಯಕನ್ಯೆಯ ಪ್ರಸ್ತಾಪ ಹಲವಾರು ಕಥೆಗಳಲ್ಲಿ ಬರುತ್ತದೆ. ಆದರೆ ಆ ದೇಶಗಳ ಯಾವೊಬ್ಬ ರಾಜಕೀಯ ನಾಯಕನೂ ನಮ್ಮ ಹಿಂದೂತ್ವವಾದಿಗಳ ಹಾಗೆ ಅಂಧ ರಾಷ್ಟ್ರಾಭಿಮಾನದಿಂದ ಕೂಡಿದ ಇಂಥಾ ಬೇಜವಾಬ್ದಾರಿ ಹೇಳಿಕೆಗಳನ್ನು ಕೊಟ್ಟಿರುವ ಉದಾಹರಣೆ ಇಲ್ಲ.

ಇವತ್ತು ನಮ್ಮ ದೇಶದಲ್ಲಿ ನಡೆಯುತ್ತಿರುವ ಕೆಲವು ವಿದ್ಯಮಾನಗಳನ್ನು ಗಮನವಿಟ್ಟು ನೋಡಿದಾಗ ಅವೆಲ್ಲದರ ಹಿಂದೆ ಒಂದು ಪ್ಯಾಟರ್ನ್ ಇರುವುದನ್ನು ಗಮನಿಸಬಹುದು. ರೋಮಿಲಾ ಥಾಪರ್, ಬಿಪಿನ್ ಚಂದ್ರ ಮೊದಲಾದವರು ಬರೆದ ಇತಿಹಾಸದ ಪುಸ್ತಕಗಳನ್ನು ಸುಡಬೇಕೆಂದು ಸುಬ್ರಹ್ಮಣ್ಯನ್ ಸ್ವಾಮಿ ಕರೆಕೊಡುತ್ತಾನೆ. ನಮ್ಮ ಶಿಕ್ಷಣದ ಭಾರತೀಕರಣ (ಅರ್ಥಾತ್ ಕೇಸರೀಕರಣ) ಆಗಬೇಕೆಂದು ಹೇಳಿರುವ ಬಾಬಾ ರಾಮದೇವ, ಅದಕ್ಕೋಸ್ಕರ ಭಾರತೀಯ ಶಾಲಾಶಿಕ್ಷಣ ಮಂಡಳಿಯೊಂದನ್ನು ಸ್ಥಾಪಿಸುವ ಪ್ರಸ್ತಾಪ ಮುಂದಿಟ್ಟಿದ್ದಾನೆ. ಭಾರತೀಯ ಇತಿಹಾಸದ ಪುಸ್ತಕಗಳನ್ನು ತಿದ್ದುವ ಕಾರ್ಯಕ್ರಮಕ್ಕೆ ಈಗಾಗಲೆ ಚಾಲನೆ ನೀಡಲಾಗಿದೆ. ಹಲವು ಹಿಂದೂತ್ವವಾದಿ ಸಂಘಟನೆಗಳು ಮಾನವ ಸಂಪನ್ಮೂಲ ಸಚಿವೆಗೆ ಪತ್ರ ಬರೆದು ಐಐಟಿಗಳಲ್ಲಿ ಮಾಂಸಾಹಾರ ನೀಡುತ್ತಿರುವುದಕ್ಕೆ ಕ್ಯಾತೆ ತೆಗೆದಿವೆ. ಆರೆಸ್ಸೆಸ್‌ನ ಸುರೇಶ್ ಸೋನಿ, ದತ್ತಾತ್ರೇಯ ಹೊಸಬಾಳೆ, ದೀನನಾಥ ಬಾತ್ರ ಮತ್ತು ಸರಸ್ವತಿ ಶಿಶುಮಂದಿರ ಯೋಜನೆಯ ಸದಸ್ಯರೆಲ್ಲ ಒಟ್ಟಾಗಿ ಸಚಿವೆಯನ್ನು ಭೇಟಿಯಾಗಿ ಇದನ್ನೆಲ್ಲ ಚರ್ಚಿಸಿದ್ದಾರೆ. ಪ್ರಧಾನಿ ಮೋದಿಯ ಮುಂಬಯಿ ಭಾಷಣವನ್ನು ಈ ಹಿನ್ನೆಲೆಯಲ್ಲಿ ನೋಡಬೇಕಿದೆ. ಭಾರತೀಯ ಸಮಾಜ ಇಂದು ಕಿಂಚಿತ್ತೂ ವೈಚಾರಿಕ ಪ್ರಜ್ಞೆಯಿಲ್ಲದ ಇಂಥಾ ಕುರುಡು ದೇಶಾಭಿಮಾನಿಗಳ ಕಪಿಮುಷ್ಟಿಯೊಳಗೆ ಸಿಲುಕಿಕೊಂಡಿದೆ. ಭವಿಷ್ಯದಲ್ಲಿ ಏನೆಲ್ಲ ಕಾದಿದೆಯೆಂದು ನೆನೆದರೇ ಭಯವಾಗುತ್ತದೆ.

*(ಆಕರ: 'ಇಂಡಿಯನ್ ಎಕ್ಸ್‌ಪ್ರೆಸ್' ಮತ್ತು 'ದ ಹಿಂದು'ನಲ್ಲಿ ಕರಣ್ ಥಾಪರ್)*




## ...ಂಡ ಗುಲಾಬಿ ಆಗುವುದಿಲ್ಲ



...ಿಸ ಬಂದಿರಿ ನೀವು
...ದಿಯಲಿ ಕಸವ
...ನದ ಕಸ ಹೊಲಸೆಂದ
...ು ಬಸವ

...ೆ ಓರಣವಾಗಿ
...ನವು ವ್ರಣವಾದರೆ
...ೀತು ಅದು ಹೇಗೆ
...ರತವು ಸ್ವಚ್ಛ

...ನಸೆಗಿನ ದೊಣ್ಣೆ
...ತು ಮಾತಲಿ ಬೆಣ್ಣೆ
...ಸು ಅಂಟಿದ ಕೈಗೆ
...ಳಕೆ ಪಂಜ

...ದರತೆಯ ಸೊಲ್ಲು
... ಹೂಡಿದ ಬಿಲ್ಲು
... ಆದರೂ ಕೆಂಡ
...ಬಿ ಆಗುವುದಿಲ್ಲ



...ಯ ಪಿಪ ಬತ್ತಿ
... ದ್ದುಳಪಿಸಿ ಕತ್ತಿ
...ದಿರ್ ಎಂಬ ಭಿತ್ತಿ
...ತೆಯ ಜಪ್ತಿ

...ಸಿ ಗುಡಿಯ
...
...
...


ನಿಂತಿಹುದೇ ಅಂತಿಮಕೆ
ರೊಟ್ಟಿಗಾಗಿಯ ಕೂಗು
ಕಸವಾಗಿ ಬಿದ್ದವರ
ಎತ್ತಬಲ್ಲಿರೆ ನೀವು

ಮತದ ಮಂಕನು ಗುಡಿಸಿ
ಜಾತಿ ಭೇದವ ಅಳಿಸಿ
ಬದುಕ ಬಿಟ್ಟರೆ ಘನತೆ ಉಳಿಸಿ
ಝಗಮಗಿಸೀತು ಭಾರತವು
ಆಗ

■ ಕೆ.ಎಂ. ಗಂಗಾಧರಪ್ಪ

ರಂಜನೆ | ಬೋಧನೆ | ಪ್ರಚೋದನೆ ಲಂಕೇಶ್

# ಮತ್ತೆಮತ್ತೆ ನರಬಲಿಗಳು




ಕನ್ನಡಕ್ಕೆ ಸಂಗ್ರಹ ಅನುವಾದ: ನಡಹಳ್ಳಿ ವಸಂತ್
nvasanth1@hotmail.com

ಆದರೆ ನಾಲ್ಕನೆಯ ದಿನ ಬೆಳಗ್ಗೆ ಹೊಳಲ್ಕೆರೆಯ ಹತ್ತಿರದ ಈಚಲು ತೋಪಿನಲ್ಲಿ ನಾವು ಕರಡಿಯನ್ನು ಕೊಂದ ಸ್ಥಳದಲ್ಲೇ ಹುಲಿ ಒಬ್ಬ ವ್ಯಕ್ತಿಯನ್ನು ಕೊಂದಿತ್ತು, ತಕ್ಷಣ ಅಲ್ಲಿಗೆ ಹೋಗಿ ನೋಡಿದಾಗ ಸತ್ತ ವ್ಯಕ್ತಿಯ ಸಂಬಂಧಿಗಳು ಶವದ ಅವಶೇಷಗಳನ್ನು ಅಂತ್ಯಸಂಸ್ಕಾರ ಮಾಡುವುದಕ್ಕಾಗಿ ತೆಗೆದುಕೊಂಡು ಹೋಗಿದ್ದುದು ತಿಳಿಯಿತು. ಇದರಿಂದ ಅವತ್ತು ರಾತ್ರಿ ಹುಲಿಗಾಗಿ ಕಾಯುವ ಅವಕಾಶ ತಪ್ಪಿಹೋಯಿತು.

ನಾವು ಮತ್ತೊಂದು ಎಮ್ಮೆಯನ್ನು ತರಿಸಿ ಹುಲಿ ವ್ಯಕ್ತಿಯನ್ನು ಕೊಂದ ಜಾಗದಿಂದ 50 ಗಜ ದೂರದಲ್ಲಿ ಕಟ್ಟಿದೆವು. ಹತ್ತಿರದ ಒಂದು ಮರದಲ್ಲಿ ಮಚಾನನ್ನು ನಿರ್ಮಿಸಿದೆವು. ಹಿಂದಿನ ನಾಲ್ಕು ರಾತ್ರಿಗಳ ಪ್ರಯತ್ನದಿಂದ ಮ್ಯಾಕ್ ಸುಸ್ತಾಗಿದ್ದರಿಂದ ನಾನೊಬ್ಬನೇ ಮಚಾನಿನಲ್ಲಿ ಕುಳಿತೆ. ಆದರೆ ಇಡೀ ರಾತ್ರಿ ಏನೂ ನಡೆಯಲೇ ಇಲ್ಲ, ನಾವೆಲ್ಲಾ ಬಳಲಿಕೆಯಿಂದ ಹತಾಶ ಸ್ಥಿತಿಯನ್ನು ತಲುಪಿದ್ದೆವು. ಬಲಿಗೆ ಕಟ್ಟಿದ್ದ ಎಮ್ಮೆಯನ್ನು ಹಿಂದೆ ತರಲು ಹೋಗಿದ್ದ ಜನರನ್ನು ಅಲ್ಲೇ ಇದ್ದ ಹುಲಿ ಹೆದರಿಸಿ ಓಡಿಸಿತ್ತು! ನಾವು ಕಾರಿನಲ್ಲಿ ಆ ಸ್ಥಳದ ಕಡೆಗೆ ಮತ್ತೆ ದೌಡಾಯಿಸಿದಾಗ ಎಮ್ಮೆ ಇನ್ನೂ ಜೀವಂತವಾಗಿತ್ತು, ಎಮ್ಮೆಯನ್ನು ಕರೆತರಲು ಹೋಗಿದ್ದ ಜನಗಳು ಕಣ್ಮರೆಯಾದ ತಕ್ಷಣ ಹುಲಿ ಅದನ್ನು ಕೊಲ್ಲದಿರುವುದು ವಿಚಿತ್ರ ಎನ್ನಿಸಿತು. ನಾನು ಮ್ಯಾಕ್‌ನನ್ನು ಹಿಂದೆ ಕಳಿಸಿ ಮಚಾನಿನನಲ್ಲಿ ಕುಳಿತು ಕಾಯಲು ನಿರ್ಧರಿಸಿದೆ.

ಮಧ್ಯಾಹ್ನ 1 ಗಂಟೆಯಾದರೂ ಹುಲಿಯ ಆಗಮನವಾಗಲೇ ಇಲ್ಲ, ಹಸಿವು ಮತ್ತು ನಿದ್ದೆಯಿಂದ ಬಳಲುತ್ತಿದ್ದ ನಾನು ಬಲಿಪ್ರಾಣಿಯನ್ನು ಕರೆದುಕೊಂಡು ಹಿಂತಿರುಗಿದೆ.

ಆ ರಾತ್ರಿ ನಾನು ಮತ್ತೆ ಮಚಾನಿನಲ್ಲಿ ಕಳೆಯಲು ತೀರ್ಮಾನಿಸಿದ್ದೆ. ಮ್ಯಾಕ್ ದಂಪತಿಗಳು ನಮ್ಮ ಹಳೆಯ ಸ್ಥಳದಲ್ಲಿ ಕೊಪ್ಪರಿಗೆಯ ಒಳಗೆ ಕುಳಿತು ಕಾಯತೊಡಗಿದರು. ಆದರೆ ಮತ್ತೆ ನಮಗೆ ನಿರಾಸೆ ಕಾದಿತ್ತು.

ಮರುದಿನ ಸಂಜೆ ನಾಲ್ಕು ಗಂಟೆಗೆ ದೊಡ್ಡ ಗುಂಪೊಂದು ಹೊಸ ಸುದ್ದಿಯನ್ನು ತಂದಿತು. ಸುಮಾರು 12 ಜನರ ಗುಂಪೊಂದು ಹೊಳಲ್ಕೆರೆಯಿಂದ ಚಿತ್ರದುರ್ಗಕ್ಕೆ ದನಕರುಗಳನ್ನು ಕರೆದುಕೊಂಡು ಸಂತೆಯಲ್ಲಿ ಮಾರಾಟ ಮಾಡಲು ಹೊರಟಿತ್ತು, ಮಾರ್ಗದಲ್ಲಿ ಹಸುವೊಂದು ಗುಂಪಿನಿಂದ ಬೇರೆಯಾದಾಗ ಅದನ್ನು ಅಟ್ಟಿಕೊಂಡು ಬರಲು ವ್ಯಕ್ತಿಯೊಬ್ಬ ರಸ್ತೆಯ ಪಕ್ಕದ ಪೊದೆಗಳ ಕಡೆ ಹೋಗಿದ್ದ. ಆಗ ಅಲ್ಲೇ ಕಾಯುತ್ತಿದ್ದ ಹುಲಿ ಅವನ ಮೇಲೆ ಆಕ್ರಮಣ ಮಾಡಿತ್ತು, ತನ್ನ ಗುಂಪಿನ ಕಡೆ ಓಡಿ ಬರಲಾರದೆ ಆ ವ್ಯಕ್ತಿ ಹತ್ತಿರದ ಬಂಡೆಯೊಂದನ್ನು ಏರಿಕೊಂಡಿದ್ದ, ಇವೆಲ್ಲಾ ಕಣ್ಣೆದುರೇ ನಡೆಯುತ್ತಿದ್ದರೂ ಭಯಭೀತರಾಗಿದ್ದ ಅವನ ಸಹಚರರು ಏನೂ ಮಾಡುವ ಸ್ಥಿತಿಯಲ್ಲಿರಲಿಲ್ಲ.

ಬಂಡೆಯ ಮೇಲೆ ಹಾರಿದ ಹುಲಿ ಆ ವ್ಯಕ್ತಿಯ ಕಾಲಿಗೆ ತನ್ನ ಉಗುರುಗಳನ್ನು ನೆಟ್ಟು ಅವನನ್ನು ಕೆಳಗೆ ಎಳೆಯುತ್ತಿತ್ತು, ಸಹಾಯಕ್ಕಾಗಿ ಕಿರುಚುತ್ತಿದ್ದ ಆ ವ್ಯಕ್ತಿ ಬಂಡೆಯ ಮೇಲಿದ್ದ ಮರದ ರೆಂಬೆಗೆ ಜೋತು ಬಿದ್ದು ಬಚಾವಾಗಲು ಯತ್ನಿಸುತ್ತಿದ್ದ. ಮೊದಲನೆ ಪ್ರಯತ್ನದಲ್ಲಿ ವಿಫಲವಾದ ಹುಲಿ ಮತ್ತೆ ಕೋಪದಿಂದ ಎರಡನೇ ಬಾರಿ ಜಿಗಿದು ಅವನ ದೇಹಕ್ಕೆ ಉಗುರನ್ನು ನೆಟ್ಟು ಕೆಳಕ್ಕೆ ಉರುಳಿಸಿತು. ಕೆಳಕ್ಕೆ ಬಿದ್ದ ಅವನ ಕುತ್ತಿಗೆಯನ್ನು ಹುಲಿ ಹಿಡಿದು ಕಾಡಿನಲ್ಲಿ ಜಿಗಿದು ಮಾಯವಾಗಿತ್ತು.

ಕೆಲವೇ ನಿಮಿಷಗಳಲ್ಲಿ ನಾವು ದುರಂತ ನಡೆದ ಸ್ಥಳವನ್ನು ತಲುಪಿದೆವು. ರಕ್ತದ ಜಾಡನ್ನು ಹಿಡಿದು ತ್ವರಿತವಾಗಿ ಮುನ್ನಡೆದಂತೆ ಕಣಿವೆಯೊಂದರ ದಟ್ಟವಾದ ಕಾಡು ಎದುರಾಯಿತು. ಆಗಲೇ ಸಂಜೆ 5 ಗಂಟೆಯಾಗಿದ್ದರಿಂದ ನಮಗೆ ಶವವನ್ನು ಹುಡುಕಲು ಕೇವಲ ಒಂದು ಗಂಟೆಯ ಸಮಯವಿತ್ತು, ಅಲ್ಲೊಂದು ಕಡೆ ಹುಲಿಯು ಆ ವ್ಯಕ್ತಿಯ ದೇಹವನ್ನು ನೆಲಕ್ಕೆ ಇಳಿಸಿರುವುದರ ಗುರುತಾಗಿ ರಕ್ತದ ಕಲೆ ಮಡುವುಗಟ್ಟಿತ್ತು, ಅಲ್ಲಿಂದ ಮುಂದೆ ಅದು ಕತ್ತಲಿನ ಕಣಿವೆಯಲ್ಲಿ ಇಳಿದುಹೋಗಿತ್ತು.

ಹಾಗೆಯೇ ಮುಂದುವರೆದಾಗ ಅಲ್ಲಿ ಪೊದೆಗಳಿಂದ ಆವೃತವಾದ ಕೆಲವು ಬಂಡೆಗಳು ಕಂಡುಬಂದವು. ಹುಲಿ ಇಂತಹ ಸುರಕ್ಷಿತ ಜಾಗದಲ್ಲಿಯೂ ತನ್ನ ಭೋಜನ ಶುರುಮಾಡಿಲ್ಲವೇಕೆ ಎಂದು ನಾನು ಆಶ್ಚರ್ಯಪಡುತ್ತಿರುವಷ್ಟರಲ್ಲಿ ಒಂದು ದೊಡ್ಡ ಬಂಡೆಯ ಹಿಂದಿನಿಂದ ಹುಲಿಯ ಗುರುಗುಟ್ಟುವಿಕೆ ಸ್ಪಷ್ಟವಾಗಿ ಕೇಳಿತು. ನಾವು ಅದನ್ನು ನೋಡುವ ಮೊದಲೇ ಅದು ಅಲ್ಲಿಂದ ಜಿಗಿದು ಮಾಯವಾಗಿತ್ತು, ಬಳಸಿಕೊಂಡು ಬಂಡೆಯ ಹಿಂದೆ ಹೋದಾಗ ಮೂರನೆ ಒಂದು ಭಾಗ ತಿಂದು ಉಳಿದಿದ್ದ ವ್ಯಕ್ತಿಯ ಶವ ನಮಗೆ ಕಂಡಿತು.

## ಇಂಚುಗಳಲ್ಲಿ ತಪ್ಪಿದ ಅಪಾಯ

ಸಮಯ ವೇಗವಾಗಿ ಓಡುತ್ತಿತ್ತು, ಹತ್ತಿರದಲ್ಲಿ ರಾತ್ರಿ ಕುಳಿತುಕೊಳ್ಳುವಂತಹ ಮರಗಳು ಇರಲಿಲ್ಲ, ಸುಮಾರು ಹನ್ನೆರಡು ಅಡಿ ಎತ್ತರವಿದ್ದ ಬಂಡೆಯೊಂದೇ ರಾತ್ರಿ ಕುಳಿತುಕೊಳ್ಳಲು ಸುರಕ್ಷಿತ ಸ್ಥಳವಾಗಿತ್ತು, ಇಲ್ಲಿದ್ದ ಒಂದೇ ತೊಂದರೆ ಎಂದರೆ ಶವ ಇದ್ದ ಕಡೆ ಬಂಡೆ ಇಳಿಜಾರಾಗಿರಲಿಲ್ಲ, ಹಾಗಾಗಿ ಬಂಡೆಯ ಮೇಲೆ ಕುಳಿತಾಗ ನಾನು ಶವ ಬಿದ್ದ ಸ್ಥಳ ಮತ್ತು ಬಂಡೆ ಇಳಿಜಾರಾಗಿರುವ ದಿಕ್ಕು-ಹೀಗೆ ಎರಡು ಕಡೆ ಕಣ್ಣಿಟ್ಟಿರಬೇಕಾಗಿತ್ತು, ನಾನು ಕುಳಿತುಕೊಳ್ಳುವ ಜಾಗದ ಹಿಂದುಗಡೆಯಿಂದ ಬಂಡೆಯೇರಲು ಹುಲಿ ಹನ್ನೆರಡು ಅಡಿ ಜಿಗಿಯಬೇಕಾಗಿತ್ತು. ಒಂದೇ ನೆಗೆತದಲ್ಲಿ ಇಷ್ಟು ಎತ್ತರ ಜಿಗಿಯುವುದು ಕಷ್ಟವಾದ್ದರಿಂದ ಇಂತಹ ಅಪಾಯವನ್ನು ಹುಲಿ ತೆಗೆದುಕೊಳ್ಳುವ ಸಾಧ್ಯತೆ ಇರಲಿಲ್ಲ ಎಂದು ನನ್ನ ಅನುಭವದಿಂದ ತಿಳಿದುಕೊಂಡೆ. ಮ್ಯಾಕ್‌ಗೆ ರಾತ್ರಿಯೆಲ್ಲಾ ಹೊಸದುರ್ಗ ಮತ್ತು ಹೊಳಲ್ಕೆರೆಯ ಮಧ್ಯೆ ಕಾರಿನಲ್ಲಿ ಓಡಾಡುತ್ತಾ ಹುಲಿಯ ಬಗೆಗೆ ಗಮನವಿಡಲು ಹೇಳಿ ನಾನು ಬಂಡೆಯೇರಿ ಕುಳಿತುಕೊಂಡೆ.

ಶವದ ಅವಶೇಷಗಳೊಂದಿಗೆ ಕಾಡಿನಲ್ಲಿ ನಾನೊಬ್ಬನೇ ಉಳಿದುಕೊಂಡಿದ್ದೆ. ಗಂಟೆಗಳೇ ಕಳೆದರೂ ಯಾವ ಸದ್ದೂ ಕೇಳಿಬರಲಿಲ್ಲ, ದಟ್ಟವಾದ ಕಾಡಿನ ಹಿನ್ನೆಲೆಯಲ್ಲಿ ಆನೆಗಿಂತ ಚಿಕ್ಕ ಪ್ರಾಣಿ ಕಾಣುವುದೂ ಕಷ್ಟವಾಗಿತ್ತು, ಸುಮಾರು 10 ಗಂಟೆಯ ಹೊತ್ತಿಗೆ ಒಂದು ಮೈಲು ದೂರದಲ್ಲಿ ಸಾಂಬಾರ್ ಜಿಂಕೆಯ ಕೂಗು ಕೇಳಿಸಿತು. ಇದರ ಹಿಂದೆಯೇ ಹುಲಿಯೊಂದರ ಕರೆ ಮತ್ತು ಇನ್ನೊಂದು ಹುಲಿಯಿಂದ ಇದಕ್ಕೆ ಉತ್ತರ ಕೇಳಿಬಂತು.

ಆ ಪರಿಸ್ಥಿತಿಯ ಸಂಕೀರ್ಣತೆಯ ಬಗೆಗೆ ನಾನು ಯೋಚಿಸತೊಡಗಿದೆ. ಇಲ್ಲಿ ಮೂರು ಹುಲಿಗಳಿರಬಹುದು, ಕಡೆಯಪಕ್ಷ ಎರಡಂತೂ ಇರುವುದು ಖಚಿತ. ಇವೆರಡೂ ಸಾಕುಪ್ರಾಣಿಗಳಿಗೆ ಮತ್ತು ಮಾನವರಿಗೆ ಅಪಾಯಕಾರಿಯಾಗಿರಬಹುದು. ಇವು ಭಾರೀ ಕುತಂತ್ರಿಗಳು. ಮೂರನೆಯ ಹುಲಿಯೂ ಇದ್ದರೆ ಅದೂ ಕೂಡ ನರಭಕ್ಷಕನಾಗಿರಬಹುದು. ಈ ಪ್ರದೇಶದ ನೆಲ ಗಟ್ಟಿಯಾಗಿರುವುದರಿಂದ ಹೆಜ್ಜೆಗುರುತುಗಳ ಆಧಾರದ ಮೇಲೆ ಖಚಿತವಾದ ತೀರ್ಮಾನಗಳಿಗೆ ಬರುವುದು ಸಾಧ್ಯವಾಗಿರಲಿಲ್ಲ.

ಹುಲಿಗಳ ಕರೆ ನಿಂತು ಮತ್ತೆ ಕಾಡಿನಲ್ಲಿ ಮೌನ ಆವರಿಸಿತು. ಗೂಬೆ ಮತ್ತಿತರ ಕಾಡಿನ ಹಕ್ಕಿಗಳ ಕೂಗು ಮತ್ತು ದೂರದ ಸಮುದ್ರದ ಮೊರೆತದಂತೆ ಕೇಳುತ್ತಿದ್ದ ಗಾಳಿಯ ಸದ್ದು ಮಾತ್ರ ಕೇಳುತ್ತಿತ್ತು.

ಆಗ ಯಾವುದೇ ಮುನ್ಸೂಚನೆ ಇಲ್ಲದೆ ದೊಡ್ಡ ಗಲಾಟೆ ಎದ್ದಿತು. ನನ್ನ ಹಿಂದಿನಿಂದ ಬಂಡೆಗೆ ಬಲವಾಗಿ ಡಿಕ್ಕಿ ಹೊಡೆದ ಶಬ್ದ ಬಂಡೆಯನ್ನು ಉಗುರಿನಿಂದ ಪರಚಿದ ಸದ್ದು, ಹುಲಿಯ ಗುರುಗುಟ್ಟುವಿಕೆ ಮತ್ತು ಹುಲಿ ನೆಲಕ್ಕೆ ಧಡ್ ಎಂದು ಬಿದ್ದ ಸದ್ದು-ಎಲ್ಲವೂ ಕೇಳಿಬಂದವು. ನಾನು ಹಿಂತಿರುಗಿ ನೋಡುವಷ್ಟರಲ್ಲಿ ಹುಲಿ ಮಾಯವಾಗಿತ್ತು, ಆ ನರಭಕ್ಷಕ ತೀರಾ ಅನಿರೀಕ್ಷಿತವಾದ ಸಾಹಸಕ್ಕೆ ಇಳಿದಿತ್ತು, ನಾನು ಅಲ್ಲಿ ಇರುವುದನ್ನು ಹೇಗೋ ತಿಳಿದುಕೊಂಡು ಅದು ಹಿಂದಿನಿಂದ ಸದ್ದಿಲ್ಲದೆ ಬಂದು ನನ್ನ ಮೇಲೆ ಆಕ್ರಮಣ ಮಾಡಲು ಯತ್ನಿಸಿತ್ತು, ನನ್ನ ಅದೃಷ್ಟಕ್ಕೆ ಹುಲಿ ತನ್ನ ಗುರಿಯನ್ನು ಕೆಲವೇ ಇಂಚುಗಳಿಂದ ತಪ್ಪಿಸಿಕೊಂಡಿತ್ತು.

ರಾತ್ರಿಯ ಉಳಿದ ಸಮಯವನ್ನು ನಾನು ಸಂಪೂರ್ಣ ಎಚ್ಚರಿಕೆಯಿಂದ ಕಳೆದೆ. ಆದರೆ ಏನೂ ನಡೆಯಲೇ ಇಲ್ಲ, ಮರುದಿನ ಬೆಳಗ್ಗೆ ಸೂರ್ಯ ಮೇಲೇರಿದ ನಂತರ ಹುಲಿ ಇಲ್ಲೇ ಎಲ್ಲಾದರೂ ಕಾಯುತ್ತಿರಬಹುದೇ ಎನ್ನುವ ಭಯದಲ್ಲಿಯೇ ಓಡುತ್ತಾ ಮುಖ್ಯರಸ್ತೆಯನ್ನು ಸೇರಿದೆ. ಅಲ್ಲೇ ಗಿರಕಿ ಹೊಡೆಯುತ್ತಿದ್ದ ಮ್ಯಾಕ್‌ನ ಜೊತೆಗೂಡಿ ಹಿಂತಿರುಗಿದೆ.

## ಚಾಣಾಕ್ಷ ಹುಲಿ

ಅವತ್ತಿನ ರಾತ್ರಿಯೂ ನಾನು ಮತ್ತೆ ಅದೇ ಸ್ಥಳದಲ್ಲಿ ಕುಳಿತುಕೊಳ್ಳಲು ನಿರ್ಧರಿಸಿದ್ದೆ. ಆದರೆ ಸತ್ತ ವ್ಯಕ್ತಿಯ ಸಂಬಂಧಿಕರು ಬಂದು ಶವದ ಅವಶೇಷಗಳನ್ನು ಅಂತ್ಯಸಂಸ್ಕಾರಕ್ಕಾಗಿ ತಮಗೆ ಒಪ್ಪಿಸಬೇಕೆಂದು ಕೇಳಿದರು. ನನ್ನ ಯಾವುದೇ ಬೇಡಿಕೆ, ಒತ್ತಾಯಗಳಿಗೆ ಅವರು ಮಣಿಯದಿದ್ದರಿಂದ ಹುಲಿಯನ್ನು ಬೇಟೆಯಾಡುವ ಇನ್ನೊಂದು ಅವಕಾಶ ತಪ್ಪಿಹೋಯಿತು.

ಎರಡು ಗಂಟೆಯ ನಂತರ ಜನರ ಗುಂಪೊಂದು ಬಂದು ನಾವು ಕೊಪ್ಪರಿಗೆಯ ಹತ್ತಿರ ಕಟ್ಟಿದ್ದ ಎಮ್ಮೆಯನ್ನು ಕೊಲ್ಲಲಾಗಿದೆ ಎಂಬ ಸುದ್ದಿಯನ್ನು ತಿಳಿಸಿದರು. ನಾನು ಮತ್ತು ಮ್ಯಾಕ್ ಆ ರಾತ್ರಿ ಮತ್ತೆ ಕೊಪ್ಪರಿಗೆಯ ಒಳಗೆ ಕುಳಿತು ಕಾಯತೊಡಗಿದೆವು. ಮಧ್ಯರಾತ್ರಿಯ ಹೊತ್ತಿಗೆ ಒಂದು ಹುಲಿ ಆಗಾಗ ಸಣ್ಣ ಧ್ವನಿಯಲ್ಲಿ ಗುಟುರು ಹಾಕುತ್ತಾ ಹತ್ತಿರದಲ್ಲೇ ಸುತ್ತಾಡುತ್ತಿತ್ತು, ನಾವು ಆತಂಕದಿಂದ ಅದರ ಆಗಮನಕ್ಕಾಗಿ ಕಾಯುತ್ತಿದ್ದೆವು. ಆದರೆ ಹುಲಿಗೆ ಶವದ ಬಳಿ ನಾವು ಇರುವುದು ತಿಳಿದುಹೋಗಿತ್ತು, ಹಾಗಾಗಿ ಮುಕ್ಕಾಲು ಗಂಟೆ ಆ ಪ್ರದೇಶವನ್ನು ಸುತ್ತುಹಾಕುತ್ತಿದ್ದರೂ ಅದು ಶವದ ಹತ್ತಿರ ಬರಲೇ ಇಲ್ಲ.

ಆಗ ಮ್ಯಾಕ್ ಧೈರ್ಯದ ಆದರೆ ಮೂರ್ಖತನದ ಒಂದು ಉಪಾಯವನ್ನು ಸೂಚಿಸಿದ. ಹುಲಿಗೆ ಇಲ್ಲಿ ಅಡಗಿಕೊಂಡವರು ಹೊರಟುಹೋಗಿದ್ದಾರೆಂಬ ಭ್ರಮೆ ಹುಟ್ಟಿಸಲು ಅವನೊಬ್ಬನೇ ಕೊಪ್ಪರಿಗೆಯಿಂದ ಹೊರಬಂದು ದೂರ ನಡೆದು ಹೋಗುವುದು ಮತ್ತು ನಂತರ ಬಲಿಯನ್ನು ತಿನ್ನಲು ಬರುವ ಹುಲಿಯನ್ನು ನಾನು ಕೊಲ್ಲುವುದು-ಅವನ ಯೋಜನೆಯಾಗಿತ್ತು

ಈ ಯೋಜನೆ ಸಫಲವಾಗುವ ಸಾಧ್ಯತೆಗಳಿದ್ದರೂ, ನರಭಕ್ಷಕ ಹತ್ತಿರದ ಇರಬಹುದಾದ ಸಮಯದಲ್ಲಿ ಮ್ಯಾಕ್‌ನನ್ನು ಒಬ್ಬನೇ ಹೊರಗೆ ಕಳಿಸಿ ಅಪಾ ಸಿಕ್ಕಿಸಲು ನಾನು ಸಿದ್ಧನಿರಲಿಲ್ಲ, ಅರ್ಧಗಂಟೆಯ ಸತತ ಪ್ರಯತ್ನದ ನ ಮ್ಯಾಕ್‌ನ ತಲೆಯಿಂದ ಈ ಉಪಾಯವನ್ನು ಹೊರಹಾಕುವುದರಲ್ಲಿ ಸಫಲನಾ ಬೆಳಗಿನ ಜಾವದವರೆಗೆ ಅಲ್ಲಿಯೇ ಸುತ್ತಾಡುತ್ತಿದ್ದ ಹುಲಿ ಸಂ ಹೊರಟುಹೋಯಿತು. ಮತ್ತೆ ನಿರಾಸೆಯೊಂದಿಗೆ ನಾವು ಹೊಸದುಗ ಹಿಂತಿರುಗಿದೆವು.

## ಬಲೆಗೆ ಬಿದ್ದ ಬಹಾದ್ದೂರ್ ಗಂಡು!

ಮುಂದಿನ ಎರಡು ರಾತ್ರಿಗಳನ್ನು ಹೊಸದುರ್ಗ ಮತ್ತು ಹೊಳಲ್ಕೆ ಮಧ್ಯೆ ಕಾರಿನಲ್ಲಿ ಗಿರಕಿ ಹಾಕುತ್ತಾ ಕಳೆದರೂ ಏನೂ ಪ್ರಯೋಜನವಾಗ ಮೂರನೆಯ ದಿನ ಬೆಳಗ್ಗೆ ಮರ ಕಡಿಯುವ ವೃತ್ತಿ ಮಾಡುತ್ತಿದ್ದ ಲಂಬ ಜನಾಂಗದ ಕೆಲವರು ಹೊಸ ಮಾಹಿತಿ ನೀಡಿದರು. ಹಿಂದಿನ ರಾತ್ರಿ ಅ ಕಾಡಿನಲ್ಲಿ ಕ್ಯಾಂಪ್ ಮಾಡಿದ್ದರು. ತಮ್ಮ ಗಾಡಿಗಳನ್ನು ಸುತ್ತಲೂ ನಿಲ್ಲಿಸಿಕೊ ಮಧ್ಯೆ ಬೆಂಕಿಹಾಕಿಕೊಂಡು ಎತ್ತುಗಳೊಡನೆ ಅವರು ತಂಗಿದ್ದರು. ಮಧ್ಯರಾತ್ರಿ ಹೊತ್ತಿನಲ್ಲಿ ಹುಲಿಯೊಂದು ಗಾಡಿಯ ಸಂದಿನಿಂದ ನುಸುಳಿಬಂದು ಒ ಎತ್ತಿನ ಮೇಲೆ ಆಕ್ರಮಣ ಮಾಡಿತ್ತು. ಆಗ ಉಂಟಾದ ಗಲಾಟೆಯಿ ಎಚ್ಚರಗೊಂಡ ಲಂಬಾಣಿಗಳು ಬೆಂಕಿಯ ಕೊಳ್ಳಿಗಳನ್ನು ಎಸೆದು ಹುಲಿಯ ಓಡಿಸಿದ್ದರು. ಎತ್ತು ಗಾಯಗೊಂಡಿದ್ದರೂ ಜೀವವುಳಿಸಿಕೊಂಡಿತ್ತು.

ಈ ಲಂಬಾಣಿಗಳಲ್ಲಿ ಒಬ್ಬ ಇದೇ ಪ್ರದೇಶದಲ್ಲಿ ಬಾಲ್ಯದಿ ಇರುತ್ತಿದ್ದವನಾದ್ದರಿಂದ ಇಲ್ಲಿನ ಕಾಡುಗಳ ಸಂಪೂರ್ಣ ಪರಿಚಯ ಹೊಂದಿದ ಆರು ಮೈಲು ದೂರದಲ್ಲಿ ದಟ್ಟ ಕಾನನದ ಮಧ್ಯೆ ಬಂಡೆಗಳಿಂದಾವೃತ ಜಾಗದಲ್ಲಿ ಚಿಕ್ಕ ಹಳ್ಳವಿದೆ ಮತ್ತು ಅಲ್ಲಿ ಹುಲಿಗಳ ಕಾಯಂ ವಾಸಸ್ಥಾನ ಎಂದು ಅವನು ತಿಳಿಸಿದ. ಮಧ್ಯಾಹ್ನದ ಬಿಸಿಲಿನಲ್ಲಿ ಅಲ್ಲಿ ವಿಶ್ರಮಿ ಹುಲಿಗಳು ಸಂಜೆ ಹಳ್ಳದ ನೀರು ಕುಡಿದು ಬೇಟೆಯನ್ನು ಹುಡುಕಿಕೊ ಹೋಗುತ್ತಿದ್ದವು. ಮತ್ತೆ ಬೆಳಗಿನ ಜಾವಕ್ಕೆ ನೀರು ಕುಡಿಯಲು ಅಲ್ಲಿಗೆ ಬರುತ್ತಿ ಆ ಜಾಗಕ್ಕೆ ಹೋಗಲು ಎಲ್ಲರೂ ಭಯಪಡುತ್ತಿದ್ದುದರಿಂದ ಈ ವ್ಯಕ್ತಿ ಕಳ್ಳಭಟ್ಟಿ ತಯಾರಿಸುತ್ತಿದ್ದ! ನಮ್ಮನ್ನು ಆ ಜಾಗಕ್ಕೆ ಕರೆದುಕೊಂಡು ಹೋಗ



ಆತ ಒಪ್ಪಿದ. ನಾನು ಮತ್ತು ಮ್ಯಾಕ್ ಅವತ್ತು ರಾತ್ರಿ ಅಲ್ಲಿ ಕಳೆಯ ನಿರ್ಧರಿಸಿದೆವು.

ಮಧ್ಯಾಹ್ನ ಮೂರು ಗಂಟೆಗೆ ನಾವು ಅಲ್ಲಿ ತಲುಪಿದೆವು. ಅಲ್ಲಿನ ಪರಿಸರ ನೋಡಿದ ಮೇಲೆ ಇದಕ್ಕಿಂತ ಉತ್ತಮ ಹುಲಿಗಳ ಆವಾಸಸ್ಥಾನವನ್ನು ನ ಕಂಡಿರುವುದು ಕಡಿಮೆ ಅನ್ನಿಸಿತು. ಅಲ್ಲಿ ಮೂಡಿದ ಹೆಜ್ಜೆಗುರುತುಗಳ ಆಧ ಮೇಲೆ ಒಂದು ಗಂಡು ಮತ್ತು ಒಂದು ಹೆಣ್ಣು ಹುಲಿಗಳಿರುವ ಖಚಿತವಾಯಿತು. ದೊಡ್ಡ ಗಾತ್ರದ ಗಂಡು ಸಾಕುಪ್ರಾಣಿಗಳ ಕೊಲೆಗಡುಕನಾ ಹೆಣ್ಣು ಹುಲಿ ನರಭಕ್ಷಕನಾಗಿರಬಹುದು ಎಂದು ಇಲ್ಲಿಯವರೆಗೆ ನಡೆದ ಘಟ ಆಧಾರದ ಮೇಲೆ ಹೇಳಬಹುದಾಗಿತ್ತು.

ಹಳ್ಳದ ಮೇಲುಗಡೆಯವರೆಗೆ ರೆಂಬೆಗಳನ್ನು ಹೊಂದಿದ್ದ ಒಂದು ದ ಮಾವಿನಮರದಲ್ಲಿ ಮಚಾನನ್ನು ಕಟ್ಟಿದೆವು. ಲಂಬಾಣಿಯನ್ನು ಒಬ್ಬನೇ ಕಳಿಸುವುದು ಅಪಾಯಕಾರಿಯಾದ್ದರಿಂದ ಮೂರೂ ಜನ ಅದರಲ್ಲಿ ಕುಳಿ

ಕಾಡು ದಟ್ಟವಾಗಿದ್ದರಿಂದ ಸಂಜೆ 7 ಗಂಟೆಗೆ ಪೂರ್ಣ ಕತ್ತಲಾಯಿ ಆಗಾಗ ಕೇಳುತ್ತಿದ್ದ ಸಾಂಬಾರ್‌ಗಳ ಕೂಗಿನ ಹೊರತಾಗಿ ಕಾಡು ಸಂಪೂ ಮೌನವಾಗಿತ್ತು. ತಾಸುಗಳೇ ಕಳೆಯುತ್ತಾ ಬೆಳಗಿನ ಜಾವದ 4 ನ ಗಂಟೆಯಾಗಿರಬೇಕು. ಆಗ ಉಸಿರಾಟದ ಮತ್ತು ನೆಲದ ಮೇಲೆ ಹ ಬಿದಿರು ಎಲೆಗಳ ಮೇಲೆ ಹೆಜ್ಜೆ ಊರಿದ ಸದ್ದುಗಳು ಕೇಳಿಸಿತು. ಕತ್ತಲಿನಲ್ಲಿ ಏನೂ ಕಾಣಿಸಲಿಲ್ಲ, ಕೆಲವು ನಿಮಿಷಗಳ ನಂತರ ನಮ್ಮ ಬ ಹುಲಿ ನೀರನ್ನು ಕುಡಿಯುವ ಸದ್ದು ಕೇಳಿಸಿತು.

ಮೊದಲೇ ಮಾತನಾಡಿಕೊಂಡಿದ್ದಂತೆ ಮ್ಯಾಕ್‌ಗೆ ನಾನು ಗುಂಡು ಹಾರಿ ಸೂಚನೆ ನೀಡಿ, ಅಗತ್ಯ ಬಿದ್ದರೆ ನಾನೂ ಗುಂಡು ಹಾರಿಸಲು ಸಿದ್ಧ ಮ್ಯಾಕ್ ಹಾಯಿಸಿದ ಟಾರ್ಚ್‌ನ ಬೆಳಕಿನಲ್ಲಿ ನೀರಿನ ಅಂಚಿನಲ್ಲಿ ಡೊಗ್ಗಾ ಕುಳಿತಿದ್ದ ಹುಲಿ ಕಣ್ಣಿಗೆ ಬಿತ್ತು. ಆ ದುಷ್ಟಮೃಗ ತಲೆಯೆತ್ತಿದಾಗ ಕಣ್ಣುಗಳು ಕೆಂಪಾಗಿ ಪ್ರತಿಫಲಿಸಿದವು. ಮ್ಯಾಕ್ ಹಾರಿಸಿದ ಗುಂಡಿನಿಂದ ಹಿಂದಕ್ಕೆ ಜಿಗಿದು ಬಿದ್ದು ಗುರುಗುಟ್ಟುತ್ತಾ ಹೊರಳಾಡತೊಡಗಿತು. ಬಂದೂಕಿನಿಂದ ಸಿಡಿದ ಇನ್ನೆರಡು ಗುಂಡುಗಳು ಹುಲಿಯನ್ನು ಕೊಂದ


ಬೆಳಕು ಮೂಡಿದ ಮೇಲೆ ಮಚಾನಿನಿಂದ ಇಳಿದು ಪರೀಕ್ಷಿಸಿದಾಗ ಗಂಡುಹುಲಿ ಎನ್ನುವುದು ತಿಳಿಯಿತು. ಅಂದರೆ ಆ ಹುಲಿ ನರಭಕ್ಷಕನಾಗಿ ಇದು ಅದ್ಭುತ ಮೈಕಟ್ಟಿನ ಹುಲಿಯಾಗಿದ್ದು ನಮಗೆ ಒಳ್ಳೆಯ ಬಹು ವಾಗಿದ್ದರೂ ನರಭಕ್ಷಕ ಕೈಗೆ ಸಿಕ್ಕಲಿಲ್ಲವೆಂಬ ಭಗೆಗೆ ನಮಗೆ ಬೇಸರವಾ

(ಮುಂದುವರೆಯುವ

ಯೋಗೇಶ್ ಮಾಸ್ಟರ್

ಪುರಾಣದ ಹೂರಣ

# ಶಿವನ ಪ್ರಕೃತಿಯ ಮೂಲ





ಪ್ರಾಗಮೂಲಜಿ ಎಂಬ ವ್ಯಕ್ತಿಯು ತನ್ನ ವಂಶವನ್ನು ...ವನ ವಂಶದ ಮುಂದುವರಿಕೆ ಎಂದು ಹೇಳುವುದು ...ತ್ಯಂತ ಹಾಸ್ಯಾಸ್ಪದ ಮತ್ತು ಅವಿವೇಕದ ಪರಮಾವಧಿ. ...ವರು ಶಿವ ನಾಮವುಳ್ಳ ಯಾರದೋ ವಂಶದ್ದವರಾಗಿ ...ಬಹುದೇ ಹೊರತು, ಶಿವ ಪದವಿಯ ಅಧಿಕಾರದ ...ಮುಂದುವರಿದ ವಂಶಿಕ ಭಾಗವಲ್ಲ. ಶಿವ ಪದವಿಯೂ ...ಜಾಪ್ರಭುತ್ವದ್ದು. ರಕ್ತ, ವರ್ಣ, ವಂಶ, ವರ್ಗ ಭೇದವಿಲ್ಲದೇ ...ಯಾರು ಬೇಕಾದರೂ ಸ್ವಸಾಮರ್ಥ್ಯದಿಂದ ...ಡೆಯಬಹುದಾಗಿರುವಂತಹದ್ದು.

ಶಿವತ್ವವೆಂಬುದು ಅಥವಾ ಶಿವಗಣದ ಪದವಿ ...ಬುದು ವಂಶಪಾರಂಪರ್ಯದ ರಕ್ತದ ಸೋಂಕಿಲ್ಲದೆ, ...ಧ್ಯಾತ್ಮ ಅಥವಾ ತಾತ್ವಿಕವಾದಂತಹ ಸಾಧನೆಯ ...ಲದ್ದಾಗಿದೆ. ಯಾರು ಸಾಧಿಸುತ್ತಾರೋ ಅವರೆಲ್ಲರದ್ದಾಗಿ ...ವಂತಹ ಮುಕ್ತತೆಯನ್ನು ಒಳಗೊಂಡಿರುವುದರಿಂದ ದೇಶ ...ರ್ತಿ ಬೇಕಾದಷ್ಟು ಶಿವಮಂದಿರವನ್ನು ನೋಡುತ್ತೇವೆ.

ಶಿವನನ್ನು ಅರ್ಥ ಮಾಡಿಕೊಳ್ಳುವ ಹಾದಿಯಲ್ಲಿ ಹತ್ತು ...ಲವು ವಿಚಾರಗಳನ್ನು ಗಮನಿಸಬೇಕಾದ, ಅರ್ಥ ...ಮಾಡಿಕೊಳ್ಳಲು ಯತ್ನಿಸಬೇಕಾದ ಅಗತ್ಯವಿದೆ.

## ಮೃತ್ಯುಭಯ ಮತ್ತು ಜೀವನಚಕ್ರ


ಎಲ್ಲಾ ಜೀವಗಳಲ್ಲಿಯೂ ಇರುವಂತಹ ಭಯಗಳಲ್ಲಿ ...ರು ಸ್ಥಾನ ಸಾವಿನ ಭಯಕ್ಕೆ. ಸಾವೆಂದರೆ ಇದ್ದದ್ದು ...ಲ್ಲದೇ ಹೋಗಿಬಿಡುವುದು. ಸಂಪೂರ್ಣ ವಿನಾಶ.


ಆದರೆ ಬದುಕು ಮತ್ತು ಸಾವು ಎಂಬ ಪ್ರಕೃತಿಯ ...ಯಲ್ಲಿ ಸಾವೆಂಬುದು ಜೀವದ ಇನ್ನೊಂದು ಮುಖ. ...ವಿಲ್ಲದೇ ಜೀವವಿಲ್ಲ, ಜೀವವು ಸಾವಿನ ಮೇಲೆಯೇ ...ತಿದೆ. ಹುಲ್ಲಿನ ಸಾವಿನ ಮೇಲೆ ಹುಲ್ಲೆ, ಹುಲ್ಲೆಯ ...ವಿನ ಮೇಲೆ ಹುಲಿ; ಹೀಗೇ ಬದುಕಬೇಕು. ಪ್ರಕೃತಿಯಲ್ಲಿ ...ಷ್ಟವರು ಎಂಬ ಪಕ್ಷಪಾತದ ಒಲವುಗಳಿಲ್ಲ. ಹಾಗೆಯೇ ...ಪಿಪಶು ಎನ್ನುವವರೂ ಇಲ್ಲ.

ಒಂದರ ಸಾವು ಮತ್ತೊಂದರ ಜೀವದಲ್ಲಿ ಮುಂದುವರಿ...ಯುತ್ತದೆ.

ಹೌದು, ಹುಲ್ಲೆಂಬ ಜೀವವನ್ನು ಹುಲ್ಲೆಯೆಂಬ ಪಶುವು ...ಭೂಮಿಯಲ್ಲಿ ಬೇರೂರಿರುವ ಅದನ್ನು ಬಲಪೂರ್ವಕವಾಗಿ ...ತ್ತು ಸೇವಿಸುತ್ತಿದ್ದಾಗ, ಹುಲಿಯೊಂದು ಹುಲ್ಲೆಯನ್ನು ತನ್ನ ...ಹಾರವನ್ನಾಗಿ ಮಾಡಿಕೊಳ್ಳಲು ಬರುತ್ತದೆ. ತನ್ನ ಜೀವ ...ಳಿಸಿಕೊಳ್ಳಲು ಹುಲ್ಲೆ ಓಡುತ್ತದೆ. ಆಹಾರವನ್ನು ಸೇವಿಸಿ ...ನ್ನ ಜೀವವನ್ನು ಉಳಿಸಿಕೊಳ್ಳುವ ಸಲುವಾಗಿ ಹುಲಿಯೂ







...ವರ ಬೆನ್ನಟ್ಟುತ್ತದೆ. ಹುಲಿಗೆ ಆಹಾರವಾದ ಜಿಂಕೆಯನ್ನು ...ಪಿಸ್ಸಲು ಆಗದು. ಜಿಂಕೆಯನ್ನು ಹುಲಿಯಿಂದ ಪಾಪ ...ದು ಉಳಿಸಲು ಹೋದರೆ ಹುಲಿಯನ್ನು ಹಸಿವಿನಿಂದ ...ಯುವ ಪಾಪಕ್ಕೆ ನಾವು ಗುರಿಯಾಗಬೇಕಾಗುತ್ತದೆ. ಇದೇ ...ಕೃತಿ. ಸಾವು ಮತ್ತು ಬದುಕುಗಳ ನಿರಂತರ ಚಲನೆಯೇ ...ವನಚಕ್ರ.

## ಪಾಪಕೋಟಿ

ಪುಣ್ಯಕೋಟಿ ಎಂಬಂತಹ ಪೂರ್ವಾಗ್ರಹಪೀಡಿತ ...ಥೆಗಳಲ್ಲಿ ಮಾತ್ರ ತಮ್ಮ ತಮ್ಮ ದೃಷ್ಟಿ ಧೋರಣೆಗಳನ್ನು ...ರುವ ಹಸುವನ್ನು ತಿನ್ನದೇ ಮಾಂಸಾಹಾರಿ ಪ್ರಾಣಿಯಾದ ...ಲಿಯು ತನ್ನ ಪ್ರಕೃತಿ ಸಹಜವಾದ ಗುಣವನ್ನು ಬಿಟ್ಟು ...ರಿ ನೆಗೆದು ತನ್ನ ಪ್ರಾಣವನ್ನು ಬಿಡುವಂತಹದ್ದು ...ಸುವುದು.

ಅತ್ಯಂತ ಪ್ರಖ್ಯಾತವಾಗಿರುವ ಪುಣ್ಯಕೋಟಿ ಎಂಬ ...ಸುವಿನ ಕಥೆಯು ಪೂರ್ವಾಗ್ರಹಪೀಡಿತವಾಗಿದ್ದು ...ಷ್ಟೆಯು ಗೀಳಿರುವಂತಹ ವರ್ಗವೊಂದರ ಏಕಪಕ್ಷೀಯ, ಏಕ ಸಂಸ್ಕೃತಿಯ ಸಾರ್ವಭೌಮತ್ವವನ್ನು ಹೇರುವಂತಹ ಅತ್ಯಂತ ಸಂಕುಚಿತ ಕಥೆಯಾಗಿದೆ.

ಈ ಪುಣ್ಯಕೋಟಿ ಕಥೆಯು ಅರಣ್ಯಕನಾದ ಶಿವನಿಗೆ ವಿರುದ್ಧವಾಗಿದೆ.

ವ್ಯಕ್ತಿಯೊಬ್ಬನ ಸುಪರ್ದಿನಲ್ಲಿ ಉಪಭೋಗಕ್ಕೆ ಲಭ್ಯವಿರುವ ಹಸುಗಳ ಸಮೂಹವೊಂದರಲ್ಲಿ, ಪುಣ್ಯಕೋಟಿ ಎಂಬ ಹಸುವು ತನ್ನ ಕಂದನ ನೆನೆದುಕೊಂಡು ಮುನ್ನ ಹಾಲನು ಕೊಡುವೆನೆನುತ ಹಿಂಡನಗಲಿ ಅರಣ್ಯದಲ್ಲಿ ಮೇಯುತ್ತಾ ಬಂದಾಗ ಕಿಬ್ಬದೊಳಿದ್ದ ಹಸಿಹಸಿದಿದ್ದ ಹೆಬ್ಬುಲಿ ಹಸುವನ್ನು ತಿನ್ನಲೆಂದು ಹಿಡಿದುಕೊಳ್ಳುತ್ತದೆ. ಯಾರಿಗೆ ಯಾವುದಕ್ಕೆ ಸಮಯಾಸಮಯವಿಲ್ಲದಿದ್ದರೂ ಒಂದು ವರ್ಗಕ್ಕೆ ಮಾತ್ರ ಯುದ್ಧಕ್ಕೆ ಸಿದ್ಧವಾಗಿರುವಂತಹ ಕುರುಕ್ಷೇತ್ರದಲ್ಲಿಯೂ ಮಾರುದ್ಧ ಬೋಧನೆ ಮಾಡುತ್ತಾ ವಿಶ್ವರೂಪಂನ ತ್ರಿಡಿ ದೃಶ್ಯ ತೋರಿಸಲಾಗುತ್ತದೆ, ಹುಲಿಯು ಹಸಿದು ಹಸುವನ್ನು ಹರಿಯಲು ಹಿಡಿದಾಗಲೂ ವಿನಂತಿಯನ್ನು ಕೇಳಲಾಗುತ್ತದೆ.

ಹಿಂಗಿಂಗೆ ನನ್ನ ಮನೆಯಲ್ಲಿ ಪುಟ್ಟ ಕರುವಿಗೆ ಹಸಿವು, ನಾನು ಹೋಗಿ ಮೊಲೆಯ ಕೊಟ್ಟು ಬಂದು ಸೇರುವೆನಿಲ್ಲಿಗೆ, ಎಂದಾಗ ಹಸಿದವೇಳೆ ಸಿಕ್ಕಿದ ನೀನು ಹಿಂದಿರುಗಿ ಬರುವೆಯಾ ಎಂದು ಹುಲಿ ಅನುಮಾನ ತೋರಿಸಿದಾಗ, ಸತ್ಯವೇ ನನ್ನ ತಾಯಿ ತಂದೆ ಅಂಥಾ ಕಥೆ ಹೇಳಿ ಕೊಟ್ಟಿಗೆಗೆ ಹೋಗುವ ಪುಣ್ಯಕೋಟಿ, ಅಲ್ಲೊಂದು ಮೆಲೋಡ್ರಾಮ ಸೃಷ್ಟಿಸಿ, ಮುಂದೆ ಬಂದರೆ ಹಾಯಬೇಡಿ, ಹಿಂದೆ ಬಂದರೆ ಒದೆಯಬೇಡಿ ಎಂದು ಇನ್ನಿತರ ಗೋವುಗಳಿಗೆ ಬೇಡಿಕೊಂಡು ಕೊಟ್ಟ ಮಾತಿನಂತೆ ನಡೆದುಕೊಳ್ಳಲು ಹಸುವು ಖಂಡವಿದೆಕೋ ಮಾಂಸವಿದೆಕೋ, ಗುಂಡಿಗೆಯ ಬಿಸಿರಕ್ತವಿದೆಕೋ ಎಂದು ಹುಲಿಗೆ ತನ್ನ ಸಮರ್ಪಿಸಿಕೊಳ್ಳಲು, ಆ ಹುಲಿಯು ಸತ್ಯವಾಕ್ಯಕ್ಕೆ ನಡೆದುಕೊಂಡ ಹಸುವನ್ನು ಕಂಡು ಎನ್ನ ಒಡಹುಟ್ಟಕ್ಕ ನೀನು, ನಿನ್ನ ಕೊಂದು ಏನ ಪಡೆವೆನು ಎನ್ನುತಾ ಬೆಟ್ಟದಿಂದ ಹಾರಿನೆಗೆದು ತನ್ನ ಪ್ರಾಣವ ಬಿಡುವುದು. ಇದು ಪುಣ್ಯಕೋಟಿಯ ಪ್ರಧಾನ ಎಳೆ.

ಇದರಲ್ಲಿ ಶಾಖಾಹಾರಿಯಾದ ಹಸುವಿಗೂ, ಮಾಂಸಾಹಾರಿಯಾದ ಹುಲಿಗೂ ಇರುವ ಪ್ರಾಕೃತಿಕವಾಗಿರುವ ಸಹಜ ಬಂಧವನ್ನು ಕಲುಷಿತಗೊಳಿಸುವಂತಹ ಮಾನವನ ಪೂರ್ವಾಗ್ರಹಪೀಡಿತ ಅತಿಕ್ರಮಣ ಪ್ರವೇಶವಿದೆ.

ಹಸು ಹುಲ್ಲು ತಿನ್ನುವುದಾಗಲಿ, ಹುಲಿ ಮಾಂಸವನ್ನು ತಿನ್ನುವುದಾಗಲಿ ಬಹಳ ಸಹಜವಾದ ಪ್ರಕೃತಿಯಾಗಿದ್ದು, ಹುಲಿ ಹಸುವನ್ನು ಬಿಡುವುದಾಗಲಿ, ನಂತರ ಸತ್ಯವಂತ ಹಸುವನ್ನು ನೋಡಿ ನೆಗೆದು ಬಿದ್ದು ಸಾಯುವುದಾಗಲಿ ಅತ್ಯಂತ ಅಸಹಜ. ತಮ್ಮ ತೆರನಾದ ಜೀವನವನ್ನು ನಡೆಸದಿರುವವರಿಗೆ ಬದುಕುವ ಹಕ್ಕೇ ಇಲ್ಲವೆಂದು ಸಾರುವ ಕ್ರೂರ ಸಂದೇಶವನ್ನು ಹೊಂದಿರುವ ಈ ಕಥೆ ಅತ್ಯಂತ ಸೂಕ್ಷ್ಮ ವಿಚಾರಗಳನ್ನು ಜನಮನಕ್ಕೆ ದಾಟಿಸುತ್ತದೆ.

ಹುಲಿಗೆ ಮಾತು ಕೊಟ್ಟು ಕೊಟ್ಟಿಗೆಗೆ ಹಿಂದಿರುಗಿ ತನ್ನ ಕರು ಮತ್ತು ತನ್ನ ಇತರ ಸಹಜೀವಿಗಳೊಂದಿಗೆ ಸಂಭಾಷಿಸುವ ಹಸುವಿನ ಮೆಲೋಡ್ರಾಮಕ್ಕೆ ಮರುಗುವ, ಕರಗುವ ಮತ್ತು ಕಣ್ಣೀರಿಡುವ ಮಂದಿ, ಸಾವೇ ಎದುರಾದರೂ ಸತ್ಯಕ್ಕೆ ಬದ್ಧಳಾಗಿ ಜೀವನವನ್ನೇ ತ್ಯಾಗ ಮಾಡುವಂತಹ ಅದರ ಮನೋಸಿದ್ಧತೆಗೆ ಬೆರಗಾಗುತ್ತಾರೆ. ಕಾಡಿಗೆ ಹೋಗಬೇಡ ಎಂದು ಒಳಗೇ ಬೇಡುತ್ತಾರೆ. ಆದರೆ ಆ ಹಸುವಿಗೆ ಚೆನ್ನಾಗಿ ಗೊತ್ತು, ತನ್ನ ನಯನಾಜೂಕಿನ ಮೃದುವಾದ ಐಸ್ ಡ್ಯಾಗರ್ ಹುಲಿಯನ್ನು ಕೊಲ್ಲುವುದಕ್ಕೆಯೇ ಹೊರತು, ತನಗೇನೂ ಆಗುವುದಿಲ್ಲ ಎಂದು. ತಮಗಿಂತ ಬಲಶಾಲಿಯಾಗಿರುವವರನ್ನು, ಅವರ ಶಕ್ತಿಗೆ ಸಾಟಿಯಾಗಿ ನಿಲ್ಲದಿರುವಾಗ ಮೋಸ ಮಾಡಿ ಅವರನ್ನು ಬಗ್ಗುಬಡಿಯಬಹುದು ಎಂದೂ ತಿಳಿದಿದೆ. ಇದನ್ನು ಮೋಸವೆಂದು ನನ್ನಂತವರು ಕರೆಯುತ್ತಾರೆ. ಆದರೆ ಅವರು ಇದನ್ನು ಯುಕ್ತಿ ಎಂದು ಕರೆಯುತ್ತಾರೆ.

ಕಾಡಿನಲ್ಲಿರುವ ಸಿಂಹವೊಂದು ತನ್ನ ಹಸಿವೆಗೆ ಇತರ ಎಲ್ಲಾ ಪ್ರಾಣಿಗಳನ್ನೂ ಕೊಲ್ಲುತ್ತಿದ್ದಾಗ ಪ್ರಾಣಿಗಳ ಮಂಡಲಿಯು ಸಿಂಹದ ಬಳಿಗೆ ಭೇಟಿ ಕೊಟ್ಟು, ದಿನಕ್ಕೊಂದು ಪ್ರಾಣಿಯನ್ನು ಆಹಾರವಾಗಿ ಕಳುಹಿಸುವುದಾಗಿ ತಿಳಿಸಿ, ಮೊಲದ ಸರತಿ ಬಂದಾಗ, ಅದು ತಡವಾಗಿ ಬಂದು, ಸಿಂಹದ ಬಳಿ ಇನ್ನೊಂದು ಸಿಂಹದ ಸುಳ್ಳು ಕಥೆ ಕಟ್ಟಿ, ಅದನ್ನು ಕರೆದುಕೊಂಡು ಬಂದು, ಬಾವಿಯ ನೀರಿನಲ್ಲಿ ಸಿಂಹಕ್ಕೆ ಅದರದೇ ಬಿಂಬ ತೋರಿಸಿ, ಅದು ಅದರೊಳಗೆ ಎಗರಿ ತನ್ನ ಪ್ರಾಣವನ್ನು ಬಿಡುವಂತೆ ಮಾಡಿದ ಕಥೆಯನ್ನು ಬರೆದ ಮನಸ್ಥಿತಿಯವರೇ ಪುಣ್ಯಕೋಟಿಯ ಕಥೆಯನ್ನೂ ಬರೆದಿರುವಂತಹದ್ದು.

ಗಾತ್ರದಲ್ಲಿ ಕಡಿಮೆ, ಶಕ್ತಿಯಲ್ಲಿ ಕಡಿಮೆಯಿದ್ದು ಕಾಡಿನಲ್ಲಿ ಅಧಿಕಾರವೇನೂ ಇಲ್ಲದಂತಹ ಮೊಲವು ಗಾತ್ರದಲ್ಲಿ, ಶಕ್ತಿಯಲ್ಲಿ, ಅಧಿಕಾರದಲ್ಲಿ ತನ್ನ ಸ್ವಾಮಿತ್ವವನ್ನು ಸಾಧಿಸಿಕೊಂಡಿರುವ ಸಿಂಹವನ್ನು ಬಾವಿಗೆ ಹಾರಿಸಿ ಕೊಲ್ಲಿಸುತ್ತದೆ. ಅರಣ್ಯದಲ್ಲಿ ಬಾವಿ ಎಲ್ಲಿರುತ್ತದೆ, ಸಿಂಹವು ಅದುವರೆಗೂ ನೀರಿನ ಮುಖವನ್ನೇ ನೋಡಿರಲಿಲ್ಲವೇ? ಎಂದೆಲ್ಲಾ ಪ್ರಶ್ನೆಗಳನ್ನು ಕೇಳಬೇಡಿ. ಮೊಲವೂ ಸಸ್ಯಾಹಾರದ ಚಿಕ್ಕ ಪ್ರಾಣಿಯೆಂದು ನೆನಪಿನಲ್ಲಿಟ್ಟುಕೊಂಡು ಕಥೆಯ ರೂಪಕಗಳನ್ನು ಅಲಂಕಾರವಾಗಿ ಪರಿಗಣಿಸುತ್ತಾ ಒಳಾರ್ಥವನ್ನು ಮಾತ್ರ ಗಮನಿಸೋಣ.

ಪಂಚತಂತ್ರದ ಕಥೆಗಳು ಹುಟ್ಟಿದ್ದೇ ಉಡಾಳರನ್ನು ಶಿಕ್ಷಿತರನ್ನಾಗಿ ಮಾಡುವ ಉದ್ದೇಶದಿಂದ. ಆದರೆ ಎಂತಹ ಶಿಕ್ಷಣ ಎನ್ನುವುದು ಮಾತ್ರ ಭಯ ಹುಟ್ಟಿಸುವಂಥದ್ದು. ಮನುಷ್ಯರ ಸಮಾಜದಲ್ಲಿ ಭೇದವನ್ನು ಉಂಟು ಮಾಡುವಂತಹದ್ದು. ಉಪಾಯದಿಂದ ತಮಗೊಲ್ಲದವರನ್ನು ಲೋಕದಲ್ಲಿಯೇ ಇರಲು ಬಿಡದಂತಹ ತಂತ್ರಗಳು.

ಶಕ್ತಿಗಿಂತ ಯುಕ್ತಿ ಮೇಲು, ಮುಯ್ಯಿಗೆ ಮುಯ್ಯಿ ಎಂಬ ಅಮಾನವೀಯ ನೀತಿಗಳನ್ನು ಧ್ವನಿಸುವ ನಮ್ಮ ಭಾರತದ ಪಂಚತಂತ್ರದ ಕಥೆಗಳನ್ನು, ಪುಣ್ಯಕೋಟಿಯ ಪಾಪದ ಕಥೆಯನ್ನು ಬಾಲ್ಯದಿಂದಲೂ ಮಕ್ಕಳಿಗೆ ಹೇಳುತ್ತಾ ಬಂದಿರುವ ನಾವು ಯಾವ ಬಾಯಿಂದ ಬ್ರಿಟಿಷರು ನಮ್ಮನ್ನು ಒಡೆದು ಆಳಿದರು ಎಂದು ಹೇಳುತ್ತೇವೆಯೋ? ಬ್ರಾಹ್ಮಣಾಧಿಕ್ಯದ ಶ್ರೇಷ್ಠತೆಯ ಗೀಳಿನ ಪುರೋಹಿತಶಾಹಿ ವರ್ಗಕ್ಕೆ ಒಡೆದು ಅಧಿಕಾರವನ್ನು ಸ್ಥಾಪಿಸುವುದು ಭಾರತದ ಪುರಾತನ ಸಂಸ್ಕೃತಿ ಮತ್ತು ಇತಿಹಾಸದಲ್ಲಿ ಏನೂ ಹೊಸ ವಿಷಯವಲ್ಲ.

ಭಾರತದ ಅತ್ಯಂತ ಸ್ವಲ್ಪ ಸಂಖ್ಯಾತವಾಗಿರುವ ಬ್ರಾಹ್ಮಣವರ್ಗವು ಮೊಲದಂತೆ ಕಿರಿದು. ಹಸುವಿನಂತೆ ಪೂಜ್ಯ ಸ್ಥಾನವೂ ಅದಕ್ಕಿರಿಸಿಕೊಂಡಿದೆ, ಕತ್ತಿ ಹಿರಿದು ನುಗ್ಗದೇ ಅಷ್ಟೇ ಸಾತ್ವಿಕವಾಗಿ ಕಂಡುಬರುತ್ತದೆ. ಆದರೆ ಶತಮಾನಗಳಿಂದ ಬ್ರಾಹ್ಮಣೇತರವಾದ ಸಮುದಾಯಗಳ ಬೃಹತ್ ಸಮಾಜವನ್ನು ತನ್ನ ಯುಕ್ತಿಯಿಂದ ಹುಲಿ ನೆಗೆದು ಬಿದ್ದು, ಸಿಂಹ ಹಾರಿ ಧುಮುಕಿ ಸಾಯುವಂತೆ ಆತ್ಮಹತ್ಯೆ ಮಾಡಿಕೊಳ್ಳುವಂತೆ ಮಾಡುತ್ತಾ ಬಂದಿದೆ. ಈಗ ಅದು ಅತ್ಯಂತ ಸ್ಪಷ್ಟವಾಗಿ ಗೋಚರಿಸುತ್ತದೆ ಕೂಡ.

ಪಂಚಾಂಗ, ಜಾತಕ, ಮುಹೂರ್ತ, ರಾಶಿಕೂಟ, ಗಣಕೂಟಗಳನ್ನು ನೋಡುತ್ತಾ, ಎಲ್ಲರನ್ನೂ ತಮ್ಮ ಅಧೀನದಲ್ಲಿರಿಸಿಕೊಂಡು, ಇವುಗಳಿಲ್ಲದಿದ್ದರೆ ನಿಮಗೆ ಬದುಕೇ ಇಲ್ಲ ಎಂಬಂತಹ ಮೌಢ್ಯವನ್ನು ಎಲ್ಲರಲ್ಲೂ ಬಿತ್ತಿ ತಮ್ಮ ಅಧಿಕಾರದಲ್ಲಿ ಇಡೀ ಬೃಹತ್ ಸಮಾಜವನ್ನು ಅಂಕೆಯಲ್ಲಿಟ್ಟುಕೊಂಡು ಆತ್ಮಹತ್ಯೆಗೆ ದಾರಿ ಮಾಡಿಕೊಟ್ಟಿದೆ. ಸಿಂಹ ತನ್ನ ನೆರಳಿನ ಮೇಲೆ ತಾನೇ ಎರಗುತ್ತಾ ಪ್ರಾಣ ಬಿಡುವ ಹಾಗೆ. ಹುಲಿ ಹಸುವಿನ ಮೆಲೋಡ್ರಾಮದ ಸಂಮೋಹನಕ್ಕೆ ಸಿಕ್ಕು ಪ್ರಾಣ ಬಿಡುವ ಹಾಗೆ.


ಕಥೆಗಳನ್ನು, ಹಾಡುಗಳನ್ನು ಕೇಳುತ್ತಾ ಮೈಮರೆಯುವ ಜನ ಸುಂದರ ಸ್ವಪ್ನಭಾಸದಲ್ಲಿ ಕಿಂದರಿ ಜೋಗಿಯ ಹಿಂದೆ ನಡೆದು ತಮ್ಮನ್ನು ತಾವು ಮರೆತು ತಾವೇ ಇಲ್ಲವಾಗುತ್ತಾರೆ.

ಶಿವನ ಬಗ್ಗೆ ಹೇಳುತ್ತಾ ಈ ಕಥೆಗಳ ವಿಚಾರಗಳನ್ನು ಹೇಳುವ ಅಗತ್ಯವು ಬಹಳ ಗಾಢವಾಗಿದೆ. ಶಿವನ ಸ್ಥೂಲ ಮತ್ತು ಸಾಂಕೇತಿಕ ಅಭಿವ್ಯಕ್ತಿಯೇ ಅರಣ್ಯಕನದಾಗಿದ್ದು ಬೋಳೇ ಸ್ವಭಾವವೆಂದು ಲಘುವಾಗಿ ಹೇಳುವುದಾದರೂ ಪ್ರಕೃತಿ ಸಹಜತೆಯ ಮುಗ್ಧತೆಗೆ ಒಲಿಯುತ್ತದೆ.

## ಶೈವ ಸಿದ್ಧಾಂತದ ಪ್ರಕೃತಿಯ ಮೂಲ

ಮೊದಲನೆಯದಾಗಿ ಶಿವನ ತತ್ವವು ಪ್ರಕೃತಿಯ ಮೂಲದ್ದಾಗಿದೆ. ಅದೇ ಬಗೆಯಲ್ಲಿ ಮನುಷ್ಯನ ವಿಚಾರವಾಗಿ ಬಂದರೆ, ಇದೇ ಪ್ರಕೃತಿಯನ್ನು ಆಂತರಿಕ ಪ್ರಕೃತಿ ಮತ್ತು ಬಾಹ್ಯ ಪ್ರಕೃತಿ ಎಂದು ಅಧ್ಯಯನದ ದೃಷ್ಟಿಯಿಂದ ವಿಭಾಗಗಳನ್ನು ಮಾಡಿಕೊಳ್ಳಬೇಕಾಗುತ್ತದೆ.

ಪ್ರಕೃತಿಯಲ್ಲಿ ಮೂರು ಬಗೆಯ ಸ್ಥಿತಿಗಳು ಚಕ್ರವಾಗಿರುವುದನ್ನು ಗಮನಿಸಬೇಕಾಗುತ್ತದೆ. ಇರುವುದಕ್ಕೆ ತೊಡಗುವುದು (ಸೃಷ್ಟಿ), ಇರುವುದನ್ನು ಮುಂದುವರಿಸುವುದು (ಸ್ಥಿತಿ), ಇಲ್ಲವಾಗುವಂತೆ ತೋರುವುದು (ನಾಶ). ಈ ಮೂರೂ ಒಂದರೊಳಗೊಂದು ಹೆಣೆದುಕೊಂಡಿದ್ದು ಒಟ್ಟಾರೆ ಇರುವನ್ನು ಸೃಷ್ಟಿಸುತ್ತದೆ. ಈ ಬಗೆಯ ಇರುವಿಕೆಗೆ ಪ್ರೊಡಮಡುವುದು, ಇರುವುದು, ಇಲ್ಲವಾಗುತ್ತಿರುವಂತೆ ತೋರುತ್ತಾ ಮತ್ತೊಂದು ರೂಪದಲ್ಲಿ ಇರುವಿಕೆಗೆ ಮತ್ತೆ ಪ್ರಾರಂಭಿಸುವ ಈ ಪ್ರಕ್ರಿಯೆಯಲ್ಲಿ ಆದಿ ಮತ್ತು ಅಂತ್ಯವು ಸ್ಪಷ್ಟವಾದ ಗಡಿ ಅಥವಾ ಗುರುತುಗಳನ್ನು ತೋರಿಸಲಾಗದೇ ಬರಿಯ ಇರುವಿಕೆಯನ್ನು ಮಾತ್ರವೇ ಒಂದು ಹಂತಕ್ಕೆ ಗುರುತಿಸಬಹುದಾಗಿದೆ. ಇರುವಿಕೆಯ ಮಹತ್ವವನ್ನು ಒಂದು ಪಾರಿಭಾಷಿಕ ರೂಪದಲ್ಲಿ ತಿಳಿಸುವುದಾದರೆ, ಸೈದ್ಧಾಂತಿಕವಾಗಿ ನಿರೂಪಿಸುವುದಾದರೆ ಅಸ್ತಿತ್ವವಾದ ಎಂಬ ಸ್ಥೂಲ ಆವರಣದಲ್ಲಿ ಕೆಲವು ಸೂಕ್ಷ್ಮತೆಗಳನ್ನು ಅರಿವನ್ನು ವಿಸ್ತರಿಸಿಕೊಳ್ಳುವುದಕ್ಕೆ ಯತ್ನಿಸಬಹುದು. ಶೈವ ಸಿದ್ಧಾಂತವನ್ನು ಅರ್ಥ ಮಾಡಿಕೊಳ್ಳಲು ಪ್ರಾರಂಭಿಕ ಮೆಟ್ಟಿಲುಗಳನ್ನಾಗಿ ಇವನ್ನು ಕಾಣಬಹುದು.




# ಪ್ರಜ್ಞಾವಂತ ಹವ್ಯಕರಲ್ಲೊಂದು ಮನವಿ

ಹುಟ್ಟಿನಿಂದ ನಾನೊಬ್ಬ ಹವ್ಯಕ. ಆದರೆ ಜನಿವಾರ, ಜಾತಿಗಳನ್ನು ಬಿಟ್ಟು ಮೂವತ್ತಕ್ಕೂ ಹೆಚ್ಚು ವರ್ಷಗಳನ್ನು ಕಳೆದಿದ್ದೇನೆ. ಆದರೂ ಹವ್ಯಕ ಜಾತಿಯವರ ಬಗೆಗೆ ಆದರ ಮತ್ತು ಗೌರವವಿರುವುದರಿಂದ ಸಾಕಷ್ಟು ಹವ್ಯಕ ಸ್ನೇಹಿತರನ್ನು ಹೊಂದಿದ್ದೇನೆ. ವಾಸ್ತವವಾಗಿ ಹವ್ಯಕರು ಸಭ್ಯರು ಮತ್ತು ಸುಸಂಸ್ಕೃತರು. ಬ್ರಾಹ್ಮಣಿಕೆಯ ಪೊಗರನ್ನು ಹೆಚ್ಚಾಗಿ ತೋರಿಸದೆ ಎಲ್ಲರೊಡನೆ ಹೊಂದಿಕೊಂಡು ಬದುಕುವವರು. ಭಾಷೆ, ಊಟೋಪಚಾರಗಳ ವಿಶಿಷ್ಟ ಹಿನ್ನೆಲೆ ಉಳ್ಳವರು. ಹಳೆಯ ತಲೆಮಾರಿನವರು ಅಡಿಕೆ ಕೃಷಿಯನ್ನು ನಂಬಿಕೊಂಡು ಸೋಮಾರಿಗಳಾಗಿದ್ದರೂ ಇತ್ತೀಚಿನ ತಲೆಮಾರಿನವರು ವಿದ್ಯಾವಂತರಾಗಿ ಪ್ರಪಂಚದ ತುಂಬೆಲ್ಲಾ ಹರಡಿಕೊಂಡಿದ್ದಾರೆ.

ಬಡಗುತಿಟ್ಟಿನ ಯಕ್ಷಗಾನ ಕಲೆಯನ್ನು ಉಳಿಸಿ ಬೆಳೆಸುವುದರಲ್ಲಿ ಕಲಾವಿದರಾಗಿ ಮತ್ತು ಕಲಾಭಿಮಾನಿಗಳಾಗಿ ವಿಶೇಷ ಕಾಣಿಕೆಯನ್ನು ನೀಡಿದವರು ಹವ್ಯಕರು. ಕೆರೆಮನೆ ಶಿವರಾಮ ಹೆಗಡೆಯವರಂತಹ ಅದ್ಭುತ ಕಲಾವಿದರು (ಲಂಕೇಶ್‌ರಿಗೆ ಇವರ ಆತ್ಮಕಥೆ "ನೆನಪಿನ ರಂಗಸ್ಥಳ" ಬಹಳ ಇಷ್ಟವಾಗಿತ್ತು ಎಂದು ಓದಿದ ನೆನಪು), ರಂಗನಾಥ ಶರ್ಮರಂತಹ ಸಭ್ಯ ಸಂಸ್ಕೃತ ವಿದ್ವಾಂಸರು ಇದೇ ಜನಾಂಗದಿಂದ ಬಂದವರು.

ಇದೆಲ್ಲಕ್ಕಿಂತ ಹೆಚ್ಚಾಗಿ ಹವ್ಯಕರು ತಮ್ಮ ಮನೆ ಮತ್ತು ಸಮಾಜದಲ್ಲಿ ಹೆಣ್ಣುಮಕ್ಕಳಿಗೆ ಸಮಾನ ಅವಕಾಶ ಮತ್ತು ಗೌರವವನ್ನು ನೀಡುತ್ತಾರೆ. ಇಂತಹ ಜನಾಂಗದವರು ಈ ರಾಘವನೆಂಬ ಪೀಡೆಯನ್ನು ಹೇಗೆ ಸಹಿಸಿಕೊಂಡಿದ್ದಾರೆ ಎನ್ನುವುದೇ ಆಶ್ಚರ್ಯದ ವಿಚಾರ. ಇಡೀ ಹವ್ಯಕ ಸಮೂಹದವರು ನೆನಪಿಡಬೇಕಾಗಿರುವುದು ಇವನನ್ನು ಪೀಠದಿಂದ ಒದ್ದೋಡಿಸುವುದರಿಂದ ಜನಾಂಗದ ಬಗೆಗಿನ ಗೌರವಾದರಗಳೂ ಹೆಚ್ಚುತ್ತದೆಯೇ ಹೊರತು ಕುಂದುವುದಿಲ್ಲ. ಈಗ ಇವನನ್ನು ಬೆಂಬಲಿಸಿ ಅಥವಾ ಮೌನದಿಂದಿದ್ದು ಮುಂದೆ ನಾಚಿಕೆಯಿಂದ ತಲೆತಗ್ಗಿಸಬೇಕಾದ ಸಂದರ್ಭಗಳಿಗೆ ಇವರು ಏಕೆ ಅವಕಾಶ ಮಾಡಿಕೊಡುತ್ತಿದ್ದಾರೆ?

ನಮ್ಮ ದೇಶದ ರಾಜಕೀಯ ಸಂಪೂರ್ಣ ನೈತಿಕತೆಯನ್ನು ಕಳೆದುಕೊಂಡು ಪಾಶ್ಚಿಮಾತ್ಯರಿಂದ ಎರವಲು ತಂದ ಕಾನೂನುಗಳ ಆಧಾರದ ಮೇಲೆ ನಡೆಯುತ್ತಿರುವುದರಿಂದಲೇ ನಾವು ಈ ಸ್ಥಿತಿ ತಲುಪಿದ್ದೇವೆ. ವ್ಯಕ್ತಿಯೊಬ್ಬ ಅಪರಾಧಿ ಎಂದು ನ್ಯಾಯಾಲಯ ತೀರ್ಮಾನಿಸುವವರೆಗೆ ಆತ ನಿರಪರಾಧಿಯೇ ಎನ್ನುವುದು ಕಾನೂನಿನ ಮಾನದಂಡ. ಇದೇ ತತ್ವವನ್ನು ಇಟ್ಟುಕೊಂಡು ನಮ್ಮ ಸಾಕಷ್ಟು ರಾಜಕಾರಣಿಗಳು ಇವತ್ತು ಅಧಿಕಾರದಲ್ಲಿ ಮುಂದುವರೆಯುತ್ತಿದ್ದಾರೆ. ಈ ಇಡೀ ಚಿಂತನೆ ವ್ಯಕ್ತಿಸ್ವಾತಂತ್ರವನ್ನು ವೈಭವೀಕರಿಸಿರುವುದರ ಮತ್ತು ತಪ್ಪಾಗಿ ವ್ಯಾಖ್ಯಾನಿಸಿರುವುದರ ಫಲ. ಪ್ರಜಾಪ್ರಭುತ್ವದಲ್ಲಿ ಸಾರ್ವಜನಿಕ ಹಿತಾಸಕ್ತಿ ವ್ಯಕ್ತಿಸ್ವಾತಂತ್ರಕ್ಕಿಂತ ಪ್ರಮುಖವಾಗಬೇಕು. ಆಪಾದನೆಗೆ ಒಳಗಾದವನು ಅಧಿಕಾರವನ್ನು ತೊರೆದರೆ ಮುಂದೊಂದು ದಿನ ನ್ಯಾಯಾಲಯ ಅವನನ್ನು ನಿರಪರಾಧಿಯೆಂದು ಘೋಷಿಸಿದರೆ ಅವನಿಗೆ ಭಾರೀ ಅನ್ಯಾಯವಾಗುತ್ತದೆ ಎಂದು ರಾಜಕೀಯ ಪಕ್ಷಗಳು ವಾದಮಾಡಿ ತಮ್ಮತಮ್ಮ ಪಕ್ಷದ ಭ್ರಷ್ಟರಿಗೆ, ಕ್ರಿಮಿನಲ್‌ಗಳಿಗೆ ಬೆಂಬಲ ನೀಡುತ್ತವೆ. ಇವರೆಲ್ಲಾ ಇದರ ಇನ್ನೊಂದು ಮುಖವನ್ನು ಬೇಕಂತಲೇ ಮುಚ್ಚಿಡುತ್ತಾರೆ. ಇವರು ಹೇಳದೆ ಇರುವುದೇನು ಗೊತ್ತೇ? ಮುಂದೊಂದು ದಿನ ನ್ಯಾಯಾಲಯ ಆಪಾದಿತರನ್ನು ಅಪರಾಧಿ ಎಂದು ತೀರ್ಮಾನಿಸಿದರೆ, ಇಂತಹ ವ್ಯಕ್ತಿಯೊಬ್ಬ ನಮ್ಮನ್ನು ಇಷ್ಟು ವರ್ಷ ಆಳಿದ್ದ ಎನ್ನುವ ಅಂಶ ಕೋಟ್ಯಂತರ ಜನತೆಗೆ ಮಾಡಿದ ಅವಮಾನ ಮತ್ತು ಅವರ ಸ್ವಾತಂತ್ರಕ್ಕೆ ತಂದ ಕುಂದು ಆಗುವುದಿಲ್ಲವೇ? ಇದರ ಬಗೆಗೆ ನಾವೆಲ್ಲ ಧ್ವನಿಯೆತ್ತುತ್ತಲೇ ಇಲ್ಲ.

ಈ ರೀತಿಯ ವಿಕೃತ ತರ್ಕಗಳ ಮೇಲೆ ರಾಘವನನ್ನು ಪೀಠದಲ್ಲೇ ಮುಂದುವರೆಸಿದರೆ ಹವ್ಯಕರು ಇಂತಹದೇ ಅವಮಾನವನ್ನು ಎದುರಿಸಬೇಕಾಗಬಹುದು. ರಾಘವ



ನಿರಪರಾಧಿಯಾಗಿದ್ದರೆ ಪೀಠ ತೊರೆದು ಒಬ್ಬ ವ್ಯಕ್ತಿಯಾಗಿ ಅವನು ಕಳೆದುಕೊಳ್ಳುವುದು ಬಹಳ ಕಡಿಮೆ. ಆದರೆ ಆತ ಅಪರಾಧಿಯಾಗಿದ್ದರೆ...? ತೀರ್ಪು ಬರುವವರೆಗೆ ಒಬ್ಬ ಅತ್ಯಾಚಾರಿಯನ್ನು ಪೀಠದಲ್ಲಿ ಕೂರಿಸಿ ಪಾದಪೂಜೆ ಮಾಡಿ ತೀರ್ಥ ಸೇವನೆ ಮಾಡಿದ್ದೆವು ಎಂದು ಹವ್ಯಕರು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೇನು?

ಆದ್ದರಿಂದ ಪ್ರಜ್ಞಾವಂತ ಹವ್ಯಕರೇ ದಯವಿಟ್ಟು ಯೋಚಿಸಿ. ರಾಘವನನ್ನು ತಕ್ಷಣ ಒದ್ದೋಡಿಸಿ ಇಡೀ ಹವ್ಯಕ ಸಮಾಜ ನೈತಿಕತೆಯನ್ನು ಎತ್ತಿಹಿಡಿಯುವವರು ಎಂಬ ಘನತೆಯನ್ನು ಉಳಿಸಿಕೊಳ್ಳಿ ಎನ್ನುವುದೇ ನನ್ನ ಮನವಿ.

*- ನಡಹಳ್ಳಿ ವಸಂತ್, ಶಿವಮೊಗ್ಗ*

## ಅಂದು ರಾಮ ಮಾರ್ಗ, ಬಳಿಕ ಕಾಮ ಮಾರ್ಗ, ಈಗ ವಾಮ ಮಾರ್ಗ?

ವ್ಯಕ್ತಿಯೊಬ್ಬನ ಮೇಲೆ ಆರೋಪ ಬಂದಾಕ್ಷಣ ತಕ್ಷಣಕ್ಕೆ ಅದೇ ಸತ್ಯ ಎಂದೆನಿಸದು. ಆದರೆ ಆ ಸಮಯದಲ್ಲಿ ಆತ ಹಾಗು ಆತನ ಚೇಲಾಗಳೆಂದೆನಿಸಿದವರ ವರ್ತನೆಗಳು ಆ ಆರೋಪದ ಹಿಂದಿನ ಸತ್ಯಾಸತ್ಯತೆಯನ್ನ ಬಹುತೇಕ ಬಿಂಬಿಸಿ ಬಿಟ್ಟಿರುತ್ತದೆ. ನಮ್ಮ ನಡುವಿರುವ 'ಭೂಮಿಗಿಳಿದ ಭಗವಂತ' ರಾಘವೇಶ್ವರ ಸ್ವಾಮಿಯ ವಿಷಯದಲ್ಲೂ ಇದೇ ನಡೆಯುತ್ತಿದೆ.

ಪ್ರೇಮಲತಾ ಕೇಸಿನ ಸಂಬಂಧದಲ್ಲಿ ಈ ಸ್ವಾಮೀಜಿಯವರ ನಡೆ ಬಾತ್ರಬೈಲ್ ಸುರೇಶ್ ಭಟ್ಟರವರು ಹೇಳಿದಂತೆ ನಿಜಕ್ಕೂ ಅನುಮಾನಾಸ್ಪದ ರೀತಿಯಲ್ಲೇ ಇದೆ. ದೇಶದ ಕಾನೂನಿಗೆ ಗೌರವ ಕೊಡುವ ಬದಲು ಹಿಂಬಾಲಕರ ಆಟಾಟೋಪಗಳೇ ಇಲ್ಲಿ ಅತಿಯಾಗುತ್ತಿದೆ. "ಏಕಾಂತ ದರ್ಶನ" ಸಮಯದಲ್ಲಾದ ಈ ಘಟನೆಗಳ ಸತ್ಯಾಸತ್ಯತೆ ಯಾರಿಗೂ ತಿಳಿದಿಲ್ಲ. ಆದರೂ ಇಲ್ಲಿ ಸ್ವಾಮೀಜಿ ಎನ್ನುವ ಕಾರಣಕ್ಕೆ ಏಕಪಕ್ಷೀಯವಾಗಿ ದೂರುದಾರಳ ಮೇಲೆ ವಾಮಮಾರ್ಗದ ದಾಳಿಯನ್ನು ಶುರುವಿಟ್ಟುಕೊಂಡಿರುವುದು ಅಮಾನವೀಯವೆನಿಸಿದೆ. ಒಂದುವೇಳೆ ಈ ರಾಘವೇಶ್ವರರ ಸ್ಥಾನದಲ್ಲಿ ಕೆಳಜಾತಿಯವನೊಬ್ಬ ಇಲ್ಲ ಅನ್ಯಧರ್ಮೀಯನು ಇದ್ದಿದ್ದರೆ ಪ್ರೇಮಲತಾ ಅಥವಾ ಅಂಶುಮತಿಯರನ್ನು ಇವರುಗಳು ಹೀಗೆಲ್ಲ ಬಿಂಬಿಸುತ್ತಿದ್ದರೆ?

ಸ್ವತಃ ಹವ್ಯಕರಾದ ಶ್ರೀಯುತ ಸುರೇಶ್ ಭಟ್ಟ ಅವರು ಹಿಂದೊಮ್ಮೆ ಹವ್ಯಕರಲ್ಲಿ ಸ್ತ್ರೀಯರನ್ನ ಪ್ರಾಣಿ ಹಾಗು ಜಡ ವಸ್ತುಗಳಂತೆ ಅದು-ಇದು ಎಂದೇ ಸಂಬೋಧಿಸುತ್ತಾರೆ ಎಂದಿದ್ದರು. ಇದು ಕೇವಲ ರೂಢಿಯಲ್ಲಿ ಬಂದಂತಹ ಶಬ್ದ ಬಳಕೆಯೇ ಹೊರತು ಹವ್ಯಕರಲ್ಲಿ ಸ್ತ್ರೀಯರ ಕುರಿತು ಈ ಭಾವನೆ ಇರಲಾರದು ಎಂದು ನಂಬಿದ್ದ ನನ್ನಂತವರಿಗೆ ಈ ಪ್ರೇಮಲತಾ ಪ್ರಕರಣ ನಿಜಸ್ಥಿತಿಯನ್ನ ತೋರಿಸುತ್ತಿದೆ.

ತನಿಖೆ ಇನ್ನೂ ನಡೆಯುತ್ತಿದ್ದರೂ ಪದ್ಮಾ ಎಂಬಾಕೆ ತನ್ನ ಪತ್ರಿಕೆಯಲ್ಲಿ ಸ್ವಾಮಿಯ ಹಿಕ್ಮತ್ತಿನಂತೆ ತನ್ನದೇ ಜಾತಿಯ ಹೆಣ್ಣಿನ ತೇಜೋವಧೆಗಿಳಿದು ಸ್ವಾಮಿಯನ್ನು 'ದೇವಾಂಶ ಸಂಭೂತ'ನೆಂದು ಕರೆದಿದ್ದಾಳೆ. ಇದರ ಜೊತೆಗೆ ಪ್ರೇಮಲತಾರ ಪುತ್ರಿಯರ ವಿರುದ್ಧವೂ ನಡತೆಗೆಟ್ಟವರೆಂದು ಪುಟಗಟ್ಟಲೆ ಬರೆದಿದ್ದಾಳೆ. ಫೇಸ್‌ಬುಕ್ ನಂತಹ ಸಾಮಾಜಿಕ ತಾಣಗಳಲ್ಲೂ ಇನ್ನಿಲ್ಲದಂತೆ ಇವರೆಲ್ಲರ ಮಾನಹಾನಿ ನಡೆಯುತ್ತಿದ್ದು ಮೊನ್ನೆ ಸನತ್, ಸಂತೋಷ್ ಎನ್ನುವ ಇಬ್ಬರು ಹವ್ಯಕ ಹುಡುಗರನ್ನು ಪೊಲೀಸರು ಒದ್ದು ಒಳತಳ್ಳಿದ್ದರು.

ಸ್ವಾಮೀಜಿಗಳಲ್ಲೂ ಪ್ರಭೇದಗಳಿವೆ. ನಿತ್ಯಾನಂದ, ಕಾಳಿ ಸ್ವಾಮಿಯರ ಬಗ್ಗೆ ಕೀಳಾಗಿ ಮಾತಾಡುವ ಮಂದಿ ಈ ರಾಘವೇಶ್ವರ ಕೇವಲ ತಮ್ಮವನೆನ್ನುವ ಕಾರಣಕ್ಕೆ ಪರವಹಿಸಿ ಬಿಡುತ್ತಾರೆ. ವಿ. ಭಟ್ಟರ ಛಾನೆಲ್‌ನಲ್ಲಿ ತೀರಾ ಕ್ಷುಲ್ಲಕ ಕಾರಣಕ್ಕೆ ಕಾಳಿ ಸ್ವಾಮಿ (ಆತ ಎಂಥವನೇ ಆಗಿರಲಿ)ಯ ಪೇಟಕ್ಕೆ ಕೈಹಾಕಿ, ಕಿತ್ತು ಅವಮಾನಿಸಿದ ಬಳಿಕ ಅದನ್ನೇ ಸಾಹಸವೆಂಬಂತೆ ಬಾರಿಬಾರಿಗೂ ತೋರಿಸಲಾಗಿತ್ತು. ಆದರೆ ಹವ್ಯಕ ಸ್ವಾಮಿ ಎನ್ನುವ ಕಾರಣಕ್ಕೆ ರಾಘವೇಶ್ವರರದ್ದು ಮಾತ್ರ ಕಾಟಾಚಾರಕ್ಕೆ ಸಣ್ಣ ಸುದ್ದಿ ಬಿತ್ತರವಾಗುತ್ತಿದೆ. ಇದು ಅವರ ಪತ್ರಿಕಾ ಧರ್ಮ. ಇನ್ನೂ ತಮಾಷೆಯೆಂದರೆ ಕಲಿ ಯಾನೆ ಕಳಿ (ಅರ್ಥಾತ್ ತುಳುವಲ್ಲಿ ಕಳ್ಳು ಹೆಂಡ) ಯೋಗೀಶ್ ಎನ್ನುವ ರೌಡಿಯೊಬ್ಬನಿಂದ ಪ್ರೇಮಲತಾರ ಪತಿಗೆ ಜೀವಬೆದರಿಕೆಯನ್ನು ಹಾಕಲಾಗಿದೆ. ಹವ್ಯಕರಿಗೆ ರೌಡಿಯೊಬ್ಬನ ಕೈಕಾಲು ಹಿಡಿದು ಸ್ವಾಮಿ ಕಾರ್ಯ ನಡೆಸುವಂತಹ ಕಲಿಗಾಲ ಬಂದದ್ದು ಇಲ್ಲಿ ತಮಾಷೆಯಾಗಿದೆ.


ರಾಘವೇಶ್ವರ ಸ್ವಾಮಿ ತಾನು ದೈಹಿಕವಾಗಿ ಪರಿಶುದ್ಧ (ಲೈಂಗಿಕವಾಗಿಯೂ)ನಿದ್ದೇನೆ ಎಂದಿದ್ದಾರೆ. ಯಾವುದೇ ಆಸೆಆಕಾಂಕ್ಷೆಗಳನ್ನು ತ್ಯಜಿಸುವುದು ಬೇರೆ, ಅದುಮಿಟ್ಟು ಕೊಳ್ಳುವುದು ಬೇರೆ (ಸುಬ್ರಹ್ಮಣ್ಯ ಮಠದ ಸಂಗೀತಗಾರ ಸ್ವಾಮಿ ಮದುವೆಯಾಗಿದ್ದು ಇದೇ ಕಾರಣಕ್ಕೆ). ಆಸೆ ಇದ್ದೂ ಅದುಮಿಟ್ಟುಕೊಂಡರೆ ಅದರ ಪರಿಣಾಮ ಭಯಂಕರವಾಗಿರುತ್ತದೆ ಅಥವಾ ಅಸಹಜವಾಗಿರುತ್ತದೆ. ಅಂದರೆ, ಏಕಾಂತ ದರ್ಶನಗಳೂ, ಮಾಲವಿಕಾ ಶೆರಾವತ್‌ಳಂತಹ ನಟಿಮಣಿಯರ ಆಕರ್ಷಣೆ, ಜೋಷಿ ಎಂಬುವವರ ಪತ್ನಿಗೆ ದೊಡ್ಡ ಮಟ್ಟದ ವಿಮಾ ಪಾಲಿಸಿಯ ಕೊಡುಗೆ ಮೊದಲಾದ ಅಡ್ಡಪರಿಣಾಮಗಳು ಈ ಕಾರಣಕ್ಕೆ ಘಟಿಸಬಹುದು.

ಅದೇನೇ ಇರಲಿ, ಪ್ರೇಮಲತಾ ಪ್ರಕರಣ ನ್ಯಾಯಾಲಯದಲ್ಲಿದೆ. ಸ್ವಾಮಿ ಹಾಗು ಸ್ವಾಮಿಯ ಬೆಂಗಾವಲು ಪಡೆ ತಮ್ಮ ಸಮುದಾಯದ ಮಹಿಳೆಯರ ಮಾನಹಾನಿ ಮಾಡುವಂತಹ ಕೀಳು ತಂತ್ರಕ್ಕಿಳಿಯುವ ಬದಲು ಸಂಯಮದಿಂದ ವರ್ತಿಸಲಿ. ತಪ್ಪು ಯಾರದ್ದೇ ಆಗಿರಲಿ ಶಿಕ್ಷೆಯಂತೂ ಮುಂದೆ ಕಾದಿದೆ. ಈಗಲೇ ಯಾವುದೋ ವಶೀಲಿಗೆ ಬಿದ್ದಂತೆ ಹಾರಾಡುವುದೆಲ್ಲ ಯಾತಕ್ಕೆ?

*- ಅವಿನಾಶ್ ಎಮ್.ಎಸ್. ನೆಲ್ಲಿಕಾರ್*

## ಕರ್ಣ, ಗಣಪತಿ, ಕೌರವರಿಗೆ ಹೊಕ್ಕಳೇ ಇಲ್ಲ?!!

ಟೆಸ್ಟ್ ಟ್ಯೂಬ್ ಬೇಬಿ ಅಥವಾ ಕ್ಲೋನಿಂಗ್ ಎಂದಾಕ್ಷಣ ಆ ಜೀವ ಪೂರ್ತಿ ಒಂಭತ್ತು ತಿಂಗಳುಗಳ ಕಾಲ ಲ್ಯಾಬ್ ಅಥವಾ ಟೆಸ್ಟ್ ಟ್ಯೂಬ್ (In vitro fertilization -IVF) ನಲ್ಲೇ ಬೆಳೆಯುತ್ತದೆ ಎಂದು ಭಾವಿಸಿದವರಿದ್ದಾರೆ.



ಆದರೆ ಅಲ್ಲಿ ನಡೆಯುವುದು ಕೇವಲ ಒಂದು ಸಣ್ಣ ಹಂತದ ಪ್ರಕ್ರಿಯೆ ಅಷ್ಟೇ. ಫರ್ಟಿಲೈಸೇಷನ್ ನಂತರ ಮಗುವನ್ನು ಪೂರ್ತಿಯಾಗಿ ಬೆಳೆಯಲು ತಾಯಿ ಅಥವಾ ಬಾಡಿಗೆ ತಾಯಿಯ ಗರ್ಭಕ್ಕೆ ಸೇರಿಸದೇ ವಿಧಿಯೇ ಇಲ್ಲ. ಹೃದಯದಿಂದ ಹಿಡಿದು ಕಿಡ್ನಿವರೆಗೆ ಎಂತೆಂತದಕ್ಕೋ ಪರ್ಯಾ ಯಗಳನ್ನು ವಿಜ್ಞಾನ ಕಂಡುಹಿಡಿದಿದೆ ಅಥವಾ ಕಂಡುಕೊಳ್ಳು ಯತ್ನದಲ್ಲಿದೆ. ಆದರೆ ತಾಯಿಯ ಗರ್ಭಾಶಯ ಪರ್ಯಾಯವಾಗಿ ಇನ್ನೂ ಯಾವ ಆವಿಷ್ಕಾರವೂ ನಡೆ (ಪ್ರಿಮೆಚ್ಯೂರ್ ಬೇಬಿಗಳಿಗಾಗಿ ಇರುವ ಇಂಕ್ಯುಬೇಟ ಗರ್ಭಾಶಯಕ್ಕೆ ಹೋಲಿಕೆಯೆನಿಸದು). ಶಿಶುವಿನ ಬೆಳವಣಿ ಸೂಕ್ತ ಆಹಾರ ಪೂರೈಕೆಯ ವ್ಯವಸ್ಥೆ ಸೂಕ್ತ ಉಷ್ಣತೆ ನಿಯಂತ್ರಣ ಮೊದಲಾದವುಗಳನ್ನು ಬೇಕಾದ ಅವಧಿ ತನಕ ನಿಯಂತ್ರಿಸುವುದು ಸುಲಭದ ಮಾತಲ್ಲ. ಈ ಕಾರಣಕ್ಕೇ ತಾಯಿಯ ಗರ್ಭವನ್ನು ಪೂರ್ತಿಯ ಕಡೆಗಣಿಸಲು ವಿಜ್ಞಾನಕ್ಕೆ ಈ ತನಕ ಸಾಧ್ಯವಾಗಿಲ್ಲ.

ಪ್ರಾಣಿ ಸಾಮ್ರಾಜ್ಯದ ಸಸ್ತನಿಗಳಲ್ಲಿ ಸಾಮಾನ್ಯವಿ ಈ ಪ್ರಕ್ರಿಯೆ ಒಂದು ವೇಳೆ ಮೇಲಿನಂತೆ ಪೂ ರೀತಿಯಲ್ಲಿ ಇಲ್ಲವಾಗಿಸಿದರೆ ಅದು ತಾಯಿ ಹಾ ಮಗುವಿನ ಮೇಲೆ ಖಂಡಿತ ಪರಿಣಾಮ ಬೀರಬಲ್ಲ ಹೇಗೆಂದರೆ, ಗರ್ಭದಲ್ಲಿ ಶಿಶು ಬೆಳೆದಂತೆ ಅದಕ್ಕೆ ಪೂರಕ ತಾಯಿಯಲ್ಲೂ ಅದಕ್ಕೆ ತಕ್ಕಂತೆ ಹಾಲಿನ ಉತ್ಪತ್ತಿ ಮೊದ ಮಾರ್ಪಾಟುಗಳು ಪ್ರಾಕೃತಿಕವಾಗಿ ಕಾಣಿಸಿಕೊಳ್ಳುತ್ತದೆ. ಅ ಸಂಬಂಧವೇ ಇಲ್ಲದಂತೆ ಹೊರಗೇ ಬೆಳೆದ ಮಗುವಿ ತಾಯಿ ಎನಿಸಿಕೊಂಡವಳಲ್ಲಿ ಇಂತಹ ಬೆಳವಣಿಗೆ ಅಸಾ ಮಾತು.

ಮಹಾಭಾರತದ ಕಥೆಯಂತೆ ಧೃತರಾಷ್ಟ್ರ ನಪುಂಸ ಗಿರಲಿಲ್ಲ, ಆತನಿಗೆ ಗಾಂಧಾರಿಯ ಹೊರತಾಗಿ ಹು ಯುಯುತ್ಸು ಎಂಬ ಮಗನೊಬ್ಬನಿದ್ದ (ಯುದ್ಧ ಕಾಲ ಆತ ಪಾಂಡವರನ್ನು ಸೇರಿಕೊಳ್ಳುತ್ತಾನೆ). ಆದರೂ ಗಾಂಧಾ ವ್ಯಾಸ ನೂರೊಂದು ಮಕ್ಕಳನ್ನು ಕರುಣಿಸುವ ವಿಚಿತ್ರವಾಗಿದೆ.. ಅಂಗಾಂಶದಿಂದ ಪೂರ್ತಿಯ ಬಾಹ್ಯರೀತಿಯಲ್ಲಿ ಮಕ್ಕಳು ಅದೂ ಪೂರ್ವ ನಿರ್ಧ ಲಿಂಗಾಧರಿತವಾಗಿ (ನೂರು ಗಂಡು ಒಂದು ಹೆಣ್ಣು ಬೇಕ ವ್ಯಾಸರಲ್ಲಿ ಗಾಂಧಾರಿ ಕೇಳಿದ್ದಳಂತೆ) ಸೃಷ್ಟಿ ಸಾಧ್ಯವೆ ಅದು ನಂಬಲು ಕಷ್ಟ.

ಮೊಟ್ಟೆಯಿಡುವ ಪ್ರಾಣಿಗಳಾದ ಪಕ್ಷಿಗಳು, ಹಾ ಹಲ್ಲಿಯಂತಹ ಸರೀಸೃಪಗಳ ವೈವಿಧ್ಯತೆ ಇನ್ನೊ ರೀತಿಯದ್ದು. ಈ ಜೀವಿಗಳ ಹೊಟ್ಟೆಯ ಮೇಲ್ಭಾಗ ಹೊಕ್ಕಳ ರಚನೆಯೇ ಇರುವುದಿಲ್ಲ. ನಮ್ಮಂತಹ ಸಸ್ತನಿ ಬೆಳೆಯುವಾಗ ತಾಯಿಯ ಮೂಲಕ ಈ ಹೊ ಬಳ್ಳಿ(Placenta)ಯೇ ನಮಗೆ ಆಹಾರ ಇತ್ಯಾದಿಗ ತಾಯಿಯಿಂದ ಪೂರೈಸಿರುತ್ತದೆ. ಆಹಾರ ಪೂರೈಕೆಯ ಶಿಶು ದೇಹದಲ್ಲಿನ ಗ್ಯಾಸ್ ಹಾಗು ಇನ್ನಿತರ ತ್ಯಾಜ್ಯ ತಾಯಿಯ ಮುಖಾಂತರ ವಿಸರ್ಜನೆಗೂ ಈ ಮಾ ಅತ್ಯವಶ್ಯ, ಆದರೆ ತಾಯಿಯ ಸಂಪರ್ಕವೇ ಇಲ್ಲದೇ ಬ ಕರ್ಣ, ಗಣಪತಿ, ಕೌರವರು, ಮೊದಲಾದವರಿಗೆ ಹೊ ಇರುವುದಾದರೂ ಹೇಗೆ?

ಇಂತಹ ಪುರಾಣ ಪುರುಷರ ಚಿತ್ರ ಬರೆಯು ಇನ್ನು ಮುಂದೆ ಹೊಕ್ಕಳನ್ನು ಬರೆಯಬಾರದು ಆದೇಶ ಮೋದಿ ಸಾಹೇಬರಿಂದ ಬಂದರೂ ಬಂದಿ ಏನಂತೀರಿ?!

*- ಶಶಿ ಪುತ್ತೂರು*


## ಅಸುರ ಪದ ಬಳಕೆ ಬೇಡ

ಬಲಿ ಚಕ್ರವರ್ತಿ ಹಾಗೂ ಮಹಿಷರ ಕುರಿತು ಮೆಚ್ಚಿನ ಗೌರಿ ಮೇಡಂ ಬರೆದ ಲೇಖನ (ನವೆಂಬರ 2014ರ ಸಂಚಿಕೆ) ಹಲವಾರು ಒಳನೋಟಗ ಪರಿಚಯಿಸುತ್ತದೆ. ತಮ್ಮ ವಿರುದ್ಧ ಧ್ವನಿ ಎತ್ತಿದವ 'ರಾಕ್ಷಸ' ಎಂದು ಹೆಸರಿಸುವುದರಲ್ಲಿ ವೈದಿಕಶಾ ಹುನ್ನಾರ ಎದ್ದು ಕಾಣುವಂಥದ್ದು. ಎಲ್ಲಾ ಸರಿ. ಲೇಖನದ ಶೀರ್ಷಿಕೆಯಲ್ಲಿ ಗೌರಿ ಮೇಡಂ ಸಹ ಚಕ್ರವರ್ತಿಯನ್ನು ಅಸುರ ಎಂದು ಕರೆಯುವುದೆ? ಬದಲು ಬಲಿ ಚಕ್ರವರ್ತಿ, ಮಹಿಷ ಚಕ್ರವರ್ತಿ ಕರೆಯೋಣ. ಅಸಲಿಗೆ ಅಸುರ ಕುಲ ಒಂದಿತ್ತೇ? ಅದು ನಾಮಾವಶೇಷವಾಗಿ ಹೋಯಿತೇ? ಪುರಾ ಸೃಷ್ಟಿಸಿದ ಅನೇಕ ಜೊಳ್ಳು ಪದಗಳಲ್ಲಿ ಅಸುರ ಪ ಒಂದಿರಬಹುದೇ?

ಚರಿತ್ರೆಯನ್ನು, ಪುರಾಣವನ್ನು ವಿರೂಪಗೊಳಿಸಿ ಬಂದಿರುವ ಆರ್ಯರೇ ನಿಜವಾದ ಅಸುರರಿರಬ ಎಂಬುದು ನನ್ನ ಗುಮಾನಿ.

*- ಎನ್.ಕೆ. ವರದರಾಜ್, ಕೊ*

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ಪ್ರತಿಕ್ರಿಯೆಗಳನ್ನು 9980331427 ನಂಬರ ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬ





# ಸೆಕ್ಸಿ ಸ್ಟಾರ್ ಲಿಯೋನಾರ್ಡೋ ಡಿಕಾಪ್ರಿಯೋ

'ಟೈಟಾನಿಕ್', 'ದಿ ಡಿಪಾರ್ಟೆಡ್', 'ದಿ ವುಲ್ಫ್ ಆಫ್ ವಾಲ್ ಸ್ಟ್ರೀಟ್', 'ವಾಟ್ಸ್ ಈಟಿಂಗ್ ಗಿಲ್ಬರ್ಟ್ ಗ್ರೇಪ್', 'ದಿ ಏವಿಯೇಟರ್', 'ಕ್ಯಾಚ್ ಮಿ ಇಫ್ ಯು ಕ್ಯಾನ್', 'ಇನ್ಸೆಪ್ಷನ್', 'ಬ್ಲಡ್ ಡೈಮಂಡ್', 'ರೋಮಿಯೋ ಜೂಲಿಯೆಟ್', 'ಗ್ಯಾಂಗ್ಸ್ ಆಫ್ ನ್ಯೂಯಾರ್ಕ್' ಸೇರಿದಂತೆ ಸುಮಾರು ನಲವತ್ತು ಚಿತ್ರಗಳಲ್ಲಿ ನಟಿಸಿ ವಿಶ್ವದಾದ್ಯಂತ ಅಪಾರ ಜನಪ್ರೀತಿ ಗಳಿಸಿರುವ ನಟ ಲಿಯೋನಾರ್ಡೋ ಡಿಕಾಪ್ರಿಯೋ ಪತ್ರಕರ್ತರೊಬ್ಬರೊಂದಿಗೆ ತಾನು ಹಂಚಿಕೊಂಡಿದ್ದ ಮಾತುಗಳನ್ನು ಇಲ್ಲಿ ಕನ್ನಡಕ್ಕೆ ಅನುವಾದಿಸಿ ಕೊಡಲಾಗಿದೆ...

*ಪ್ರಶ್ನೆ: ನೀವು ನಟರಾಗಿದ್ದು ಹೇಗೆ?*


ಡಿಕಾಪ್ರಿಯೋ : ನನಗೆ ಮೊದಲಿನಿಂದಲೂ ನಟನಾಗುವ ಬಯಕೆಯಿತ್ತು. ಈ ಬಯಕೆಗೆ ಪೂರಕವಾಗಿ ನಾನು ಬೆಳೆದ ವಾತಾವರಣವೂ ಸಹಕರಿಸಿತ್ತು ಅನ್ನಬಹುದು. ನಾನು ಬೆಳೆಯುತ್ತ ಆಸಕ್ತನಾಗುವಲ್ಲಿ ನನ್ನ ಹೆತ್ತವರ ಪಾತ್ರವೂ ದೊಡ್ಡದೇ. ಅವರು ನನ್ನನ್ನು ಮ್ಯೂಸಿಯಂಗೆ ಕರೆದೊಯ್ಯುತ್ತಿದ್ದರು. ಅಲ್ಲಿಯ ಕಲೆಯನ್ನು ಸೂಕ್ಷ್ಮವಾಗಿ ಗಮನಿಸಲು ಅವಕಾಶ ಮಾಡಿಕೊಡುತ್ತಿದ್ದರು. ಹಾಗೆಯೇ ನಾನು ಶಾಲಾ ಪುಸ್ತಕಗಳಾಚೆಗೂ ಹೆಚ್ಚು ಹೆಚ್ಚು ಓದಲು ಅವಕಾಶ ಕಲ್ಪಿಸಿಕೊಟ್ಟರು. ನನ್ನಮ್ಮ ಪ್ರತಿ ದಿನ ಎರಡು ಗಂಟೆಗಳ ಕಾಲ ಕಾರು ಓಡಿಸಿಕೊಂಡು ನನ್ನನ್ನು ಯೂನಿವರ್ಸಿಟಿ ಎಲಿಮೆಂಟರಿ ಸ್ಕೂಲಿಗೆ ಕರೆದೊಯ್ಯುತ್ತಿದ್ದಳು. ಕ್ಲಾಸ್ ಮುಗಿದ ಮೇಲೆ ನನ್ನಪ್ಪ ಬಂದು ನನ್ನನ್ನು ಪಿಕ್ ಅಪ್ ಮಾಡುತ್ತಿದ್ದ. ನನ್ನಪ್ಪ ಅರವತ್ತರ ದಶಕದಲ್ಲಿ ನ್ಯೂಯಾರ್ಕಿನ ಪ್ರಸಿದ್ಧ ಹಾಸ್ಯಗಾರರಲ್ಲಿ ಒಬ್ಬನಾಗಿದ್ದ. ಆತ ಬರೆದಿಟ್ಟ ಕಾಮಿಕ್ಸ್ ಬುಕ್ಸ್ ಇತ್ಯಾದಿಗಳನ್ನು ಆ ಕಾಲಕ್ಕೆ ನ್ಯೂಯಾರ್ಕಿನುದ್ದಕ್ಕೂ ಹಂಚಿದ್ದ. ನಾನು ಸಣ್ಣವನಿದ್ದಾಗ ಆತನೊಂದಿಗೆ ಅನೇಕ ಬಾರಿ ಕಾಮಿಕ್ಸ್ ಬುಕ್ಸ್ ಅಂಗಡಿಗಳಿಗೆ ಹೋಗಿದ್ದೂ ಉಂಟು. ಅದೆಲ್ಲವೂ ಸಾಹಿತ್ಯ ಮತ್ತು ಕಲೆಯತ್ತ ನನಗೆ ಆಸಕ್ತಿ ಬೆಳೆಯಲು ಕಾರಣವಾಯಿತು ಅನ್ನಬಹುದು. ಇಷ್ಟಕ್ಕೂ ಶಾಲಾದಿನಗಳಲ್ಲಿ ನನಗೆ ಓದಿನತ್ತ ಅಷ್ಟಾಗಿ ಆಸಕ್ತಿ ಇರಲಿಲ್ಲ. ಗಣಿತ ನನ್ನ ಪಾಲಿಗೆ ವರ್ಸ್ಟ್! ಆದ್ದರಿಂದ ನನಗೆ ಓದಿನತ್ತ ಏಕಾಗ್ರತೆ ವಹಿಸಲು ಕಡೆಗೂ ಆಗಲೇ ಇಲ್ಲ. ಜನ ಯಾವಾಗಲೂ ಹೇಳುತ್ತಿರುತ್ತಾರೆ "ಯೂ ಶುಡ್ ಹ್ಯಾವ್ ಟ್ರೈಡ್ ಹಾರ್ಡ್" ಅಂತ. ಆದರೆ ನನಗೆ ಅದೆಲ್ಲಾ ತಮಾಷೆಯಾಗಿ ಕಾಣುತ್ತಿತ್ತು. ಒಂದೇ ಕಡೆ ಕೂತು ಹೋಂ ವರ್ಕ್ ಮಾಡುವುದೆಂದರೆ ಆ ಕಾಲಕ್ಕೆ ನನಗೆ ಬೋರು. ನಾನು ಇಷ್ಟಕ್ಕೂ ಶಾಲೆಗೆ ಹೋಗುತ್ತಿದ್ದದ್ದು ಓದುವ ಸಲುವಾಗಿ ಅಲ್ಲ, ಲಂಚ್ ಟೈಮ್‌ನಲ್ಲಿ ಸ್ನೇಹಿತರ ಮುಂದೆ ಬ್ರೇಕ್ ಡಾನ್ಸ್ ಮಾಡುವ ಸಲುವಾಗಿ. ನಾನು ಐದು ವರ್ಷದವನಾಗಿದ್ದಾಗ ಏನಾಯಿತೆಂದರೆ ನನ್ನಮ್ಮ 'ರೋಂಪರ್ ರೂಂ' ಷೋಗೆ ನನ್ನನ್ನು ಕರೆದುಕೊಂಡು ಹೋಗಿದ್ದಳು. ಅದು ನನ್ನ ಫೇವರಿಟ್ ಷೋ ಆಗಿತ್ತು. ಆ ದಿನ ನಾನು ಎಷ್ಟು ಎಕ್ಸೈಟ್ ಆಗಿದ್ದೆನೆಂದರೆ ಸೀದಾ ಓಡಿಹೋಗಿ ಕ್ಯಾಮೆರಾ ಮುಂದೆ ನಿಂತಿದ್ದೆ. ಅದರ ಟೇಪ್ ನೋಡಿ ಈಗಲೂ ನಾನು ಸಂಭ್ರಮಿಸಬಲ್ಲೆ. ಆ ಘಟನೆ ನನ್ನ ಪಾಲಿಗೆ ಒಂದು ಸದಾ ಕಾಡುವ ನೆನಪು. ಇಂಥದೇ ಇನ್ನೊಂದು ನೆನಪೆಂದರೆ ನಾನು ಹತ್ತು ವರ್ಷದವನಾಗಿದ್ದಾಗ ನನ್ನದೇ ವಯಸ್ಸಿನ ಐದು ಮಂದಿ ಹುಡುಗರನ್ನು ಷೋಒಂದಕ್ಕೆ ಕರೆದರು. ನಾನು ಇನ್ನೇನು ಸ್ಟೇಜ್ ಹತ್ತಬೇಕು ಅನ್ನುವಷ್ಟರಲ್ಲಿ ಅಲ್ಲಿದ್ದ ಇತರ ಹುಡುಗರು ನನ್ನ ಕಡೆ ಕೈ ತೋರಿಸುತ್ತಾ 'ನಾಟ್ ಹಿಮ್...ನಾಟ್ ಹಿಮ್...' ಅಂತ ಅಲ್ಲಿನ ಆಯೋಜಕರಿಗೆ ಹೇಳುತ್ತಿದ್ದರು. ಆ ದಿನ ಸ್ಟೇಜ್ ಹತ್ತಲು ಆಗಲಿಲ್ಲ. ಅವತ್ತು ನನಗೆ ನಿಜಕ್ಕೂ ದುಃಖವಾಯಿತು. ಆ ದುಃಖ ಎಷ್ಟಿತ್ತೆಂದರೆ ವಾಪಾಸು ಕಾರಿನಲ್ಲಿ ಮನೆಗೆ ಹೋಗುವಾಗ "ಡ್ಯಾಡ್, ಹೇಗಾದರೂ ಸರಿಯೇ.. ನಾನೊಬ್ಬ ನಟ ಆಗಬೇಕು" ಎಂದು ಅಪ್ಪನಲ್ಲಿ ನನ್ನ ಆಶಯ, ಹತಾಶೆ ಎರಡನ್ನು ತೋಡಿಕೊಂಡಿದ್ದೆ. ನನ್ನ ಆಳದ ವ್ಯಾಕುಲತೆಯನ್ನು ಗಮನಿಸಿದ ಅಪ್ಪ "ಚಿಂತಿಸಬೇಡ ಲಿಯಾನಾರ್ಡೋ, ಒಂದಲ್ಲ ಒಂದು ದಿನ ನಿನ್ನ ಕನಸು ನನಸಾಗುತ್ತದೆ. ಜಸ್ಟ್ ರಿಲ್ಯಾಕ್ಸ್" ಎಂದು ಬೆನ್ನು ತಟ್ಟಿ ಸಮಾಧಾನಪಡಿಸಿದ್ದ. ನಾನು "ಒಕೆ" ಅಂತ ಹೇಳಿ ಅಳುವುದನ್ನು ನಿಲ್ಲಿಸಿದ್ದೆ.

*ಪ್ರಶ್ನೆ: ನಿಮ್ಮ ಹೆತ್ತವರು ಡೈವೋರ್ಸ್ ಪಡೆದಿದ್ದು ಯಾವಾಗ?*

ಡಿಕಾಪ್ರಿಯೋ: ನಾನು ಹುಟ್ಟುವ ಮೊದಲೇ! ಆ ಕಾರಣದಿಂದಲೇ ನನಗೆ ಎರಡು ಬೇರೆ ಬೇರೆ ಜಗತ್ತುಗಳ ಪರಿಚಯವಾಗಿದ್ದು, ಬದುಕಿನ ಆಳದ ಸೂಕ್ಷ್ಮಗಳು ಸ್ಪಷ್ಟವಾಗಿ ಅರ್ಥವಾಗತೊಡಗಿದ್ದು.

*ಪ್ರಶ್ನೆ: ನಿಮ್ಮ ಹೈಸ್ಕೂಲು ದಿನಗಳ ಬಗ್ಗೆ ಹೇಳುತ್ತೀರಾ?*

ಡಿಕಾಪ್ರಿಯೋ: ನಾನು ಅಂತಹ ಹೇಳಿಕೊಳ್ಳುವಂತಹ ಸ್ಟೂಡೆಂಟ್ ಆಗಿರಲಿಲ್ಲ. ಹೆಚ್ಚೆಂದರೆ ಹನ್ನೊಂದನೇ ಗ್ರೇಡ್ ಅಥವಾ ಹನ್ನೆರಡನೇ ಗ್ರೇಡ್ ಪಡೆಯುತ್ತಿದ್ದೆ. ಅಷ್ಟೊತ್ತಿಗಾಗಲೇ ನನ್ನ ಹೈಸ್ಕೂಲು ಮುಗಿಯುವ ಹಂತದಲ್ಲಿದ್ದ 'ದಿಸ್ ಬಾಯ್ಸ್



ಲೈಫ್' ಎಂಬ ಟಿವಿ ಷೋಗೆ ಆಡಿಶನ್ ನಡೆಯುತ್ತಿತ್ತು. ನಾನೂ ಕೂಡ ಅದರಲ್ಲಿ ಭಾಗವಹಿಸಿದ್ದೆ. 'ಪೇರೆಂಟ್‌ಹುಡ್' ನನ್ನ ಮೊಟ್ಟಮೊದಲ ಟಿವಿ ಷೋ. ಅದರಲ್ಲಿ ನಾನು ಮಾಡಿದ್ದ ಪಾತ್ರದ ಹೆಸರು ಗ್ಯಾರಿ ಬುಕ್‌ಮ್ಯಾನ್ ಅಂತ. ಹಸ್ತಮೈಥುನ ಮಾಡಿಕೊಳ್ಳುವ ಹುಡುಗನ ಪಾತ್ರವದು. ಆ ಸಂದರ್ಭದಲ್ಲಿ ನನಗೆ ನೆನಪಾದದ್ದೆಂದರೆ ನಟ ಪಾಲಿ ಶೋರ್ ಮತ್ತು ಆತನೊಂದಿಗೆ ನಾನು ಮಾತಾಡುತ್ತಿದ್ದ ಸೆಕ್ಸ್ ಬಗೆಗಿನ ಬೆಚ್ಚಗಿನ ವಿಷಯಗಳು.

*ಪ್ರಶ್ನೆ: ರಿಯಲಿ?*

ಡಿಕಾಪ್ರಿಯೋ: ಒಂದು ದಿನ ನಾವಿಬ್ಬರು ಸುಮಾರು ಒಂದು ಗಂಟೆಯ ಕಾಲ ಸೆಕ್ಸ್ ಬಗ್ಗೆ ಮಾತಾಡಿದ್ದೆವು. ಯಾಕೆಂದರೆ ನನಗೆ ಸೆಕ್ಸ್ ಬಗ್ಗೆ ಎಲ್ಲಿಲ್ಲದ ಕುತೂಹಲವಿತ್ತು. ಅವತ್ತು ಪಾಲಿ ಶೋರ್ ನನಗೆ ಹುಡುಗಿಯರ ಬಗ್ಗೆ ಮತ್ತು ಸೆಕ್ಸ್ ಕುರಿತ ಎಲ್ಲದರ ಬಗ್ಗೆ ಹೇಳಿದ್ದ.

*ಪ್ರಶ್ನೆ: ಆಗ ನಿಮಗೆ ಎಷ್ಟು ವಯಸಾಗಿತ್ತು?*

ಡಿಕಾಪ್ರಿಯೋ: ಸುಮಾರು ಹದಿನಾಲ್ಕೋ, ಹದಿನೈದೋ ಇರಬೇಕು.

*ಪ್ರಶ್ನೆ: ಸೆಕ್ಸ್ ಕುರಿತಂತೆ ನಿಮ್ಮ ನಿಲುವು ಎಂಥಾದ್ದು ಎಂಬುದರ ಬಗ್ಗೆ ಹೇಳಿ ಹಾಗಾದರೆ...*


ಡಿಕಾಪ್ರಿಯೋ: ಅದರ ಬಗ್ಗೆ ಸಂದರ್ಭ ಬಂದಾಗಲೆಲ್ಲಾ ಮಾತಾಡಿದ್ದೇನೆ. ಐ ಡೋಂಟ್ ನೋ ಮೈ ಸೆಲ್ಫ್ ಕಂಪ್ಲೀಟ್ಲಿ.

*ಪ್ರಶ್ನೆ: ಸೆಕ್ಸ್ ಬಗ್ಗೆ ಮಾತಾಡುವುದೇ ಅಪಾಯಕಾರಿ ಅನ್ನಿಸುತ್ತೆ ನನಗೆ. ಯಾಕೆಂದರೆ ಈ ವಿಷಯದಲ್ಲಿ ಅಂತಃಪ್ರಜ್ಞೆ ಜಾಗರೂಕವಾಗುವ ಸಂಭವವುಂಟು!*

ಡಿಕಾಪ್ರಿಯೋ: ಓಕೆ, ಈ ಸೆಕ್ಸಿನೆಸ್ ಅನ್ನೋದಿದೆಯಲ್ಲ ಅದು ಗ್ರಹಿಕೆಗೆ ಸಿಗದ ವಿಚಾರ. ಇದೊಂದು ಸುಪ್ತಮನಸ್ಸಿಗೆ ಸಂಬಂಧಿಸಿದ ಸಂಗತಿ, ಡೆಫಿನೇಟ್ಲಿ ಯೂ ಡೋಂಟ್ ಹ್ಯಾವ್ ಪ್ಲಾನ್. ಈ ವಿಷಯದಲ್ಲಿ ನನ್ನ ನಿಲುವು ಏನು ಎಂಬುದರ ಬಗ್ಗೆ ನಾನು ಚಿಂತಿಸಬೇಕಾದ ಅನಿವಾರ್ಯತೆ ಇಲ್ಲ ಅನ್ನಿಸುತ್ತೆ... ಈ ವಿಚಾರದಲ್ಲಿ ಜನ ನನ್ನ ಬಗ್ಗೆ ಏನೇ ಮಾತಾಡಿಕೊಂಡರೂ ನನಗೆ ಚಿಂತೆಯಿಲ್ಲ.

*ಪ್ರಶ್ನೆ: ನೀವು ಬದಲಾಗಿದ್ದೀರಾ ಅನ್ನಿಸ್ತಿಲ್ವಾ?*

ಡಿಕಾಪ್ರಿಯೋ: ನನಗೆ ಗೊತ್ತು, ನಾನು ಬದಲಾಗಿದ್ದೇನೆ. "ಹೌ ಡು ಯು ಡೀಲ್ ವಿತ್ ಫೇಮ್?" ಎಂದು ಜನ ನನ್ನನ್ನು ಕೇಳುತ್ತಾರೆ. ಈ ಪ್ರಶ್ನೆಗೆ ನನ್ನ ಬಳಿ ಉತ್ತರವಿಲ್ಲ. ಯಾರಾದರೂ ನನ್ನ ಹತ್ತಿರ ಬಂದು "ನಿಜಕ್ಕೂ ನಿಮ್ಮ ಪರ್ಫಾರ್ಮೆನ್ಸ್ ಇಷ್ಟವಾಯ್ತು" ಅಂದಾಗ ಪ್ರಾಮಾಣಿಕವಾಗಿ 'ಥ್ಯಾಂಕ್ಸ್' ಅಂತಷ್ಟೇ ಹೇಳಿ ಮುಗುಳ್ನಗುತ್ತೇನೆ. ನಾನೊಬ್ಬ ಸಭ್ಯ ಅಂತ ಯಾರಲ್ಲೂ ಹೇಳಿಕೊಳ್ಳಲು ಇಷ್ಟಪಡುವುದಿಲ್ಲ. ಆದರೆ ನನ್ನ ಬಗ್ಗೆ ಯಾರು ಏನೇ ಹೇಳಿದರೂ ಆ ಮಾತನ್ನು ಗೌರವಿಸುತ್ತೇನೆ. ನಾನು 'ವಾಟ್ಸ್ ಈಟಿಂಗ್ ಗಿಲ್ಬರ್ಟ್ ಗ್ರೇಪ್' ಸಿನಿಮಾ ಮಾಡುವಾಗ ನನಗೆ ಯಾವುದೇ



ಒತ್ತಡಗಳಿರಲಿಲ್ಲ. ಹಾಗೆ ನೋಡಿದರೆ ಆಗ ನಿಜಕ್ಕೂ ನನ್ನ ಮೇಲೆ ಒತ್ತಡವಿತ್ತು, ಆದರೆ ಅದು ನನ್ನ ಅರಿವಿಗೆ ಬಂದಿರಲಿಲ್ಲ. ಇಷ್ಟಕ್ಕೂ 'ವಾಟ್ಸ್ ಈಟಿಂಗ್ ಗಿಲ್ಬರ್ಟ್ ಗ್ರೇಪ್'ನಲ್ಲಿ ನಾನು ಒಬ್ಬ ನಟನಾಗಿ ಹೇಗೆ ನನ್ನ ಜವಾಬ್ದಾರಿ ನಿಭಾಯಿಸಿದೆ ಎಂಬುದು ಇನ್ನೂ ಗೊತ್ತಾಗುತ್ತಿಲ್ಲ.

*ಪ್ರಶ್ನೆ: ನೀವು ಈವರೆಗೆ ಆಯ್ಕೆ ಮಾಡಿಕೊಂಡ ಅಷ್ಟೂ ಪಾತ್ರಗಳಿಗೆ ಒಗ್ಗುತ್ತೀರಿ. ಅದರ ಹಿಂದಿನ ರಹಸ್ಯವೇನು?*

ಡಿಕಾಪ್ರಿಯೋ: ನನ್ನ ಪ್ರಕಾರ ನಟರು ಮಾಡುವ ಒಂದು ದೊಡ್ಡ ಮಿಸ್ಟೇಕ್ ಅಂದರೆ ವೃತ್ತಿಬದುಕಿನಲ್ಲಿ ಬಿಸಿನೆಸ್‌ಗೆ ಹೆಚ್ಚು ಆದ್ಯತೆ ಕೊಡುವುದು. ಎಷ್ಟೋ ಸಲ ಏನಾಗುತ್ತದೆ ಎಂದರೆ ಈ ವ್ಯವಹಾರಿಕ ಮನಸ್ಥಿತಿ ತೀರಾ ಪ್ರಬಲವಾಗುತ್ತಾ ಹೋದಾಗ ನಟನೊಬ್ಬ ಕರಪ್ಟ್ ಆಗುವ ಸಂಭವವಿದೆ. ಆಗ ಎಲ್ಲೋ ಒಂದುಕಡೆ ತಮ್ಮೊಳಗಿನ ಕಲೆಗೆ ಹೊಡೆತ ಬಿದ್ದು ಮತ್ತೆ ತಾವು ಮೊದಲು ಎಲ್ಲಿದ್ದರೋ ಅಲ್ಲಿಗೇ ತಲುಪಬೇಕಾಗಬಹುದು. ಅದಕ್ಕೆ ನಾನು ಹೇಳೋದು ಬಿಸಿನೆಸ್ ಅನ್ನುವುದು ಕ್ರೂರವಾದದ್ದು. ಯಾಕೆಂದರೆ ಅದು ನೀವೇನೂ ಕಲಿಯದಂತೆ ಮಾಡಿಬಿಡುತ್ತೆ. ಆದ್ದರಿಂದ ಅದರ ಬಗ್ಗೆ ನನಗೆ ಒಂಥರಾ ಅಸಡ್ಡೆಯ ಭಾವ. ಸ್ನಿಡೀ ಬದುಕಿನಲ್ಲಿ ನಾನು ಯಾವತ್ತೂ ಬಿಸಿನೆಸ್‌ಗೆ ಆದ್ಯತೆ ನೀಡಲಿಲ್ಲ. ಇಷ್ಟಕ್ಕೂ ನಾನು ಪಾತ್ರಗಳ ಜೀವಂತಿಕೆಗೆ ಹೆಚ್ಚು ಒತ್ತು ಕೊಡುತ್ತೇನೆ.

*ಪ್ರಶ್ನೆ: ನಿಮ್ಮ ತಂದೆಗಾಗಿ ಒಂದು ಕಾರನ್ನು ಉಡುಗೊರೆಯಾಗಿ ಕೊಡಬೇಕೆಂದು ನೀವು ಬಯಸಿದ್ದೀರಿ ಅಂತ ಕೇಳಿಪಟ್ಟಿದ್ದೆ. ಅದರ ಬಗ್ಗೆ ಹೇಳುತ್ತೀರಾ?*

ಡಿಕಾಪ್ರಿಯೋ: ನನ್ನ ತಂದೆಗೆ ಒಂದೊಳ್ಳೆ ಕಾರಿನ ಅಗತ್ಯವಿರುವುದರ ಬಗ್ಗೆ ನಾನು ಖಂಡಿತ ಬಲ್ಲೆ. ಅದಕ್ಕಾಗಿ ಆತನ ಐವತ್ತನೇ ಹುಟ್ಟುಹಬ್ಬದಂದು ಉಡುಗೊರೆಯಾಗಿ ಒಂದು ಕಾರು ಕೊಡೋಣ ಅಂದುಕೊಂಡಿದ್ದೇನೆ. ಆ ಹುಟ್ಟುಹಬ್ಬದಂದು ಆತನ ಎಲ್ಲಾ ಸ್ನೇಹಿತರು, ನಮ್ಮ ಇಡೀ ಕುಟುಂಬ ಅಲ್ಲಿ ನೆರೆಯಬೇಕು ಅನ್ನೋದು ನನ್ನಾಸೆ. ಆ ದಿನ ಅಲ್ಲಿ ಮಧುರವಾದ ಸಂಗೀತವಿರಬೇಕು, ಆ ಸಂಗೀತದ ನಡುವೆ ನನ್ನಪ್ಪ ತನ್ನೆಲ್ಲಾ ಸ್ನೇಹಿತರ, ಕುಟುಂಬ ಸದಸ್ಯರ ನಡುವೆ ಕೇಕ್ ಕತ್ತರಿಸಬೇಕು. ಆ ಕ್ಷಣದ ನೆನಪಿಗೆ ನಾನು ಆತನಿಗೊಂದು ಕಾರು ಕೊಡಬೇಕು. ನಾನು ಹಾಕಿಕೊಂಡಿರುವ ಈ ಯೋಜನೆಯ ಬಗ್ಗೆ ಆತನಿಗೆ ಮೊದಲೇ ತಿಳಿದಿರಬಾರದು. ಆತನ ಮುಖ ಅರಳುವ ಆ ಘಳಿಗೆ ಈ ಕಾರು ಕೊಡುವ ಖುಷಿ ನನ್ನದಾಗಬೇಕು. ಇಷ್ಟಕ್ಕೂ ಈ ಕಾರು ನನ್ನೆಲ್ಲಾ ಭಾವನೆಗಳ ಸಂಕೇತ ಅಂತೇನೂ ಇಲ್ಲ. ಇದರಾಚೆಗೂ ನನ್ನ ಹೆತ್ತವರ ಜೊತೆ ಸಮಯ ಕಳೆಯಲು ನಾನು ಬಯಸುತ್ತೇನೆ. ನಾನು ನನ್ನ ಹೆತ್ತವರ ಬಗ್ಗೆ ಧ್ಯಾನಿಸಿದಾಗಲೆಲ್ಲಾ ನನ್ನ ಮನಸಿನ ತುಂಬೆಲ್ಲಾ ನನ್ನ ಬಾಲ್ಯವೇ ತುಂಬಿಕೊಳ್ಳುತ್ತದೆ- ಪ್ರತಿ ಭಾನುವಾರದ ಬೆಳಗ್ಗೆ ನನ್ನ ಅಪ್ಪನ ಜೊತೆ ಫ್ರೆಂಚ್ ಟೋಸ್ಟ್ ತಿನ್ನುತ್ತಿದ್ದದ್ದು, ನನ್ನ ಅಮ್ಮನೊಡಗೂಡಿ ಕ್ರಿಸ್ಮಸ್ ಟ್ರೀ ಅಲಂಕರಿಸುತ್ತಿದ್ದದ್ದು... ಒಬ್ಬ ಮನುಷ್ಯನಿಗೆ ಇಂತಹ ನೆನಪುಗಳು ಯಾವತ್ತಿಗೂ ಉಪಯುಕ್ತ.


*ಪ್ರಶ್ನೆ: ನಿಮಗೆ ಬರೆಯುವುದರ ಬಗ್ಗೆ ಏನಾದರೂ ಆಸಕ್ತಿ ಇದೆಯಾ?*

ಡಿಕಾಪ್ರಿಯೋ: ನನಗೆ ನಟನೆಯಷ್ಟೇ ಸಾಕು ಅನ್ನಿಸುತ್ತೆ. ಸಾಧ್ಯವಾದರೆ ಒಬ್ಬನೇ ಸಿಕ್ಕಸಿಕ್ಕಲ್ಲಿಗೆ ಪ್ರಯಾಣ ಮಾಡಲು ಬಯಸುತ್ತೇನೆ. ಹಾಗೆಯೇ ಪ್ರೀತಿಯಲ್ಲಿ ಬೀಳುವುದರ ಬಗ್ಗೆಯೂ ನನಗೆ ಯೋಜನೆಯುಂಟು.

*ಪ್ರಶ್ನೆ: ಅಂದರೆ... ಈಗಾಗಲೇ ಪ್ರೀತಿಯಲ್ಲಿ ಬಿದ್ದಿದ್ದೀರಿ...*

ಡಿಕಾಪ್ರಿಯೋ: ಇಲ್ಲ, ಸದ್ಯಕ್ಕೆ ಬೇಡ. ನಾನು ಮುಂದೊಮ್ಮೆ ನನ್ನ ಸಂಗಾತಿ, ಅಂದರೆ ನನ್ನ ಹೆಂಡತಿಯೊಡಗೂಡಿ ಎಲ್ಲೋ ಒಂದು ಕಡೆ ಪ್ರಯಾಣ ಬೆಳೆಸುತ್ತೇನೆ ಎಂಬ ಕಲ್ಪನೆಯೇ ನನಗೆ ಬರುತ್ತಿಲ್ಲ. ಇದು ನಿಮಗೂ ಬೇಡವಾದ ವಿಷಯ. ಆದರೂ ನಾನು ಯಾವ ಬಗೆಯ ಮನುಷ್ಯನೆಂದರೆ ಇದೆಲ್ಲವನ್ನೂ ನಿಮ್ಮಂತಹ ಯಾರೊಂದಿಗಾದರೂ ಹಂಚಿಕೊಳ್ಳಬಯಸುವವನು. ಆ ಕಾರಣದಿಂದಲೇ ನನ್ನ 'ದಿ ಬಾಸ್ಕೆಟ್ ಬಾಲ್ ಡೈರೀಸ್' ಚಿತ್ರ ಮುಗಿಯುತ್ತಿದ್ದಂತೆಯೇ ನನ್ನ ಅಮ್ಮನ ಜೊತೆಗೂಡಿ ಒಂದು ಟ್ರಿಪ್ ಹಾಕಿದ್ದೆ. ಆ ಮೂಲಕ ನನ್ನ ಅಮ್ಮನ ಜೊತೆ ಒಂದಿಷ್ಟು ಸಮಯ ಕಳೆಯುವ ಬಯಕೆ ನನ್ನದಾಗಿತ್ತು. ಆದ್ದರಿಂದ ಮತ್ತೊಮ್ಮೆ ಸ್ಪಷ್ಟಪಡಿಸುತ್ತೇನೆ... ಇದು ನನ್ನ ಪಾಲಿಗೆ ಪ್ರೀತಿಯಲ್ಲಿ ಬೀಳುವ ಕಾಲವಲ್ಲ; ನೆನಪುಗಳಲ್ಲಿ ಮುಳುಗುವ ಹೊತ್ತು!

● ಹೃದಯಶಿವ



Registered No.RNP/KA/BGS/2036/2014-16 Posted at : GPO, Bangalore-01. Friday R B P LANKESH, Kannada Weekly Price Rs. 15/- 19-11-2014 RNI No. KARKAN2005/14

# ಕನ್ನಡ ವರ್ಸಸ್ ತೆಲುಗು




ಜನರ ಪ್ರೀತಿ, ಅಭಿಮಾನವನ್ನು ಪಡೆಯುವ ಚಿತ್ರತಾರೆಯರು 'ಜನರಿಗೆ ಏನು ನೀಡಿದ್ದಾರೆ?' ಎಂಬ ಪ್ರಶ್ನೆ ಮೊದಲಿನಿಂದಲೂ ಇರುವಂಥದ್ದೇ. ತಾವು ಮನರಂಜನೆ ನೀಡುವು ದಿಲ್ಲವೇ, ಜನರನ್ನು ರಂಜಿಸುವು ದಿಲ್ಲವೇ ಎಂದು ಕೆಲವರು ಈ ಪ್ರಶ್ನೆಗೆ ಉತ್ತರಿಸಲು ಮುಂದಾಗಬಹುದು. ಆದರೆ ಇಲ್ಲಿ ಏಳುವ ಇನ್ನೊಂದು ಮಾತೆಂದರೆ ಚಿತ್ರತಾರೆಯರು ಪುಕ್ಕಟೆಯಾಗಿ ಮನರಂಜನೆ ನೀಡುವುದಿಲ್ಲವಲ್ಲ... ನಿರ್ಮಾಪಕರಿಂದ ಕೋಟಿಗಟ್ಟಲೆ ಸಂಭಾವನೆ ಪಡೆದು ನಟಿಸುವ ಅವರು ತಮ್ಮನ್ನು ತಾವು ಮಾರ್ಕೆಟಿಂಗ್ ಮಾಡಿಕೊಳ್ಳುತ್ತಿದ್ದಾರಲ್ಲಾ...

ಹಾಗಾಗಿ ತಮಗೆ ಹಣ, ಕೀರ್ತಿ, ಸೆಲೆಬ್ರಿಟಿ ಎಂಬ ಪಟ್ಟ ಇತ್ಯಾದಿಗಳನ್ನು ತಂದುಕೊಡುವ ಪ್ರೇಕ್ಷಕರಿಗೆ ಅಂತಲೇ ಅವರೇನು ಸೇವೆ ಸಲ್ಲಿಸುತ್ತಿದ್ದಾರೆ? ಯಾವುದಾದರು ಬಡಮಕ್ಕಳನ್ನು ದತ್ತು ಪಡೆದು ಓದಿಸುತ್ತಿದ್ದಾರಾ? ಅಸಹಾಯಕ ವೃದ್ಧರನ್ನು ಪೋಷಿಸಲು ನೆರವಾಗುತ್ತಿದ್ದಾರಾ? ಸ್ಲಮ್ಮುಗಳಲ್ಲಿ ವಾಸಿಸುವ ಬಡಜನರ ಬದುಕಿಗೆ, ಚಿಕಿತ್ಸೆಗೂ ಕಾಸಿಲ್ಲದ ಬಡರೋಗಿಗಳ ಸಹಾಯಕ್ಕೆ ಕೈ ಚಾಚಿದ್ದಾರಾ? ತಮ್ಮ ಹೆಸರಿನಲ್ಲಿ ಉಚಿತ ಆಸ್ಪತ್ರೆ, ಕಡಿಮೆ ಶುಲ್ಕದ ಶಾಲಾಕಾಲೇಜುಗಳನ್ನು ಕಟ್ಟಿಸಿದ್ದಾರಾ? ಇಲ್ಲವಲ್ಲ....

ಹೀಗಿರುವಾಗ ಇವರನ್ನು ಸಾಂಸ್ಕೃತಿಕ ನಾಯಕರು ಅಂತ ಹೇಗೆ ಕರೆಯಲು ಸಾಧ್ಯ? ಇವರೇನಿದ್ದರೂ ಸಂಭಾವನೆ ಪಡೆದು ನಟಿಸುವ ವ್ಯಾಪಾರಿಗಳಷ್ಟೇ... ಹೀಗೆ ಜನ ಆಗಾಗ ಅಲ್ಲಲ್ಲಿ ಮಾತಾಡಿಕೊಳ್ಳುವುದು ನಿಮಗೆ ಗೊತ್ತಿದೆ. ಇದು ವಾಸ್ತವ ಕೂಡ. ಯಾವೊಬ್ಬ ನಟನೂ ತನ್ನ ವೈಯಕ್ತಿಕ ಹಣವನ್ನು, ದುಡಿಮೆಯ ದುಡ್ಡನ್ನು ಸಮಾಜದ ಹಿತಕ್ಕೆ ಬಳಸೋದು ಕಡಿಮೇನೆ...

ಆದರೆ ಈ ಮಾತಿಗೆ ವ್ಯತಿರಿಕ್ತವಾಗಿ ಕನ್ನಡ ಮತ್ತು ತೆಲುಗು ಚಿತ್ರರಂಗದ ಕೆಲವು ಸ್ಟಾರ್‌ಗಳು ಒಂದು ಒಳ್ಳೆ ಕೆಲಸಕ್ಕೆ ಕೈಹಾಕುತ್ತಿದ್ದಾರೆ. ಅದೇನೆಂದರೆ ಎರಡೂ ಇಂಡಸ್ಟ್ರಿಯ ಸಿನಿಮಾ ನಟರು ಪರಸ್ಪರ ಒಂದೊಂದು ತಂಡ ಕಟ್ಟಿಕೊಂಡು ಕ್ರಿಕೆಟ್ ಆಡುವುದು. ಆ ಪಂದ್ಯದಲ್ಲಿ ಸಂಗ್ರಹವಾಗುವ ಹಣವನ್ನು ಇತ್ತೀಚೆಗಷ್ಟೇ ಆಂಧ್ರಪ್ರದೇಶದಲ್ಲಿ ಸಂಭವಿಸಿದ ಹುಡ್‌ಹುಡ್ ಪ್ರವಾಹಕ್ಕೆ ಸಿಲುಕಿ ನಲುಗಿ ಹೋದವರ ನೆರವಿಗೆ ನೀಡುವುದು...

ನವೆಂಬರ್ ತಿಂಗಳ ಮೂರನೇ ವಾರದಲ್ಲಿ ಬೆಂಗಳೂರಿನಲ್ಲಿ ನಡೆಯಬಹುದಾದ ಈ ಪಂದ್ಯ ಎರಡೂ ಚಿತ್ರೋದ್ಯಮಗಳ ಅಭಿಮಾನಿಗಳ ವಲಯದಲ್ಲಿ ಕುತೂಹಲ ಹುಟ್ಟಿಸಲಿರುವುದಂತೂ ಖಾತ್ರಿ ಅನ್ನಬಹುದು... ಹೀಗೆಯೇ ಇಂತಹ ಇನ್ನಷ್ಟು ಸಮಾಜಪರ, ಜೀವಪರ ಕೆಲಸಗಳಲ್ಲಿ ನಮ್ಮ ನಟನಟಿಯರು ಪಾಲ್ಗೊಂಡರೆ ಅದಕ್ಕಿಂತಲೂ ಹೆಮ್ಮೆಯ ವಿಚಾರ ಬೇರೇನಿದೆ?

# ಮತ್ತೆ ಸಿಸಿಎಲ್



'ಸೆಲೆಬ್ರಿಟಿ ಕ್ರಿಕೆಟ್ ಲೀಗ್' ಮತ್ತೆ ಶುರುವಾಗಲಿದೆ. ಅಂದರೆ ಜನವರಿ ಮೊದಲನೇ ವಾರದ ನಂತರ ಈ ಲೀಗ್‌ನ ಐದನೇ ಆವೃತ್ತಿ ಆರಂಭವಾಗಲಿದೆ. ಈ ಬಾರಿ ಒಟ್ಟು ಎಂಟು ತಂಡಗಳಿದ್ದು ಭಾರೀ ಕುತೂಹಲ ಕೆರಳಿಸುವ ನಿರೀಕ್ಷೆಯಂತೂ ಉಂಟು. ಬೇರೆ ಬೇರೆ ಸಿನಿಮಾಗಳಲ್ಲಿ ಬ್ಯುಸಿಯಿರುವ ನಟರ ಡೇಟ್ಸ್ ನೋಡಿಕೊಂಡು ಪಂದ್ಯಗಳ ಶೆಡ್ಯೂಲ್ ಹಾಕಿಕೊಳ್ಳುವ ಯೋಜನೆ ಈಗಾಗಲೇ ಚಾಲ್ತಿಯಲ್ಲಿದೆಯಂತೆ. ಆದಷ್ಟೂ ಬೆಂಗಳೂರು, ಹೈದರಾಬಾದ್, ಚೆನ್ನೈಗಳಲ್ಲಿ ಪಂದ್ಯಗಳು ನಡೆಯಲಿದ್ದು ಈ ನಿಟ್ಟಿನಲ್ಲಿ ಪೂರ್ವತಯಾರಿಗಳು ನಡೆಯುತ್ತಿವೆಯಂತೆ.

ಈ ಕುರಿತು ಸದ್ಯದಲ್ಲೇ ಅಧಿಕೃತವಾಗಿ ಪ್ರಕಟಿಸಲಾಗುವುದಂತೆ. ಕಳೆದ ಎರಡು ಆವೃತ್ತಿಗಳಲ್ಲಿ ಭರ್ಜರಿ ಪ್ರದರ್ಶನ ನೀಡಿ ವಿಜಯದ ಕೇಕೆ ಹಾಕಿದ್ದ ಸುದೀಪ್ ನಾಯಕತ್ವದ ಕರ್ನಾಟಕ ಬುಲ್ಡೋಜರ್ಸ್ ತಂಡ ಈ ಬಾರಿ ಹೇಗೆ ತನ್ನ ಚುರುಕುತನ ತೋರಿಸುತ್ತದೆ ಎಂಬುದು ಕನ್ನಡಿಗರ ಕುತೂಹಲ.

# ಲೇಡಿ ಸಿಂಗಂ ಯಾರು?

ತಮ್ಮ ಸೆಂಟಿಮೆಂಟಲ್ ಸಿನಿಮಾಗಳ ಮೂಲಕ ಕನ್ನಡ ಪ್ರೇಕ್ಷಕರ ಕಣ್ಣಲ್ಲಿ ನೀರು ತರಿಸಿದ ಸಾಯಿಪ್ರಕಾಶ್ ಅದೇಕೋ ಇತ್ತೀಚಿನ ವರ್ಷಗಳಲ್ಲಿ ತವರು, ಕರುಳು, ಕಂಬನಿ ಇತ್ಯಾದಿ ಬಗೆಯ ಕತೆಗಳಿಂದ ದೂರ ಉಳಿದು ಆಕ್ಷನ್ ಸಿನಿಮಾ ಮಾಡುವತ್ತ ಆಸಕ್ತಿ ತೋರುತ್ತಿದ್ದಾರೆ. ಅಂಥದೇ ಒಂದು ಪ್ರಯತ್ನದಲ್ಲಿ ಈಗ 'ಲೇಡಿ ಸಿಂಗಂ' ಎಂಬುದೊಂದು ಪಕ್ಕಾ ಹೊಡಿಬಡಿ, ಹಾರಾಡು,



ಚೀರಾಡು ಸಿನಿಮಾ ಮಾಡಲು ಮುಂದಾಗಿದ್ದಾರೆ. ಈ ಚಿತ್ರಕ್ಕೆ ಮಾಜಿ ಚೇಂಬರ್ ಅಧ್ಯಕ್ಷ ಬಿ.ವಿಜಯ್‌ಕುಮಾರ್ ನಿರ್ಮಾಪಕರಾಗಿದ್ದು ಈ ಲೇಡಿ ಸಿಂಗಂ ಪಾತ್ರ ಮಾಡಲು ಯಾರು ಕರೆಕ್ಟ್ ಅಂತ ಇಷ್ಟು ದಿನ ಚಿತ್ರತಂಡ ತಲೆ ಬಿಸಿ ಮಾಡಿಕೊಂಡಿತ್ತು. ಒಂದಿಷ್ಟು ಹೀರೋಯಿನ್‌ಗಳ ಹೆಸರುಗಳು ಕೇಳಿಬಂದಿದ್ದೂ ಉಂಟು. ಆದರೆ ಈಗ ಆಗಿರುವ ಬೆಳವಣಿಗೆ ಏನೆಂದರೆ ಈ ಲೇಡಿ ಸಿಂಗಂ ಪಾತ್ರಕ್ಕೆ ಒಬ್ಬ ಪ್ರಸಿದ್ಧ ಬಾಲಿವುಡ್ ನಟಿಯನ್ನು ಕರೆತರುವ ಯೋಜನೆ ಸಿದ್ಧವಾಗಿದೆಯಂತೆ. ಆದರೆ ಆ ಬಾಲಿವುಡ್ ನಟಿ ಯಾರೆಂಬ ಗುಟ್ಟು ಇನ್ನೂ ರಟ್ಟಾಗಿಲ್ಲ. ಒಂದು ಕಾಲದಲ್ಲಿ ವಿಜಯಶಾಂತಿ, ಮಾಲಾಶ್ರೀ ತರಹದವರು ಲೇಡಿ ಹೀರೋಗಳಾಗಿ ಮಿಂಚಿದ್ದನ್ನು ನೆನೆಯಬಹುದು. ಹಾಗೆಯೇ ಇತ್ತೀಚಿನ ದಿನಗಳಲ್ಲಿ ರಾಗಿಣಿ ದ್ವಿವೇದಿ ಕೂಡ ಖಾಕಿ ಪ್ಯಾಂಟು ಧರಿಸಿ ಘರ್ಜಿಸಿದ್ದೂ ಉಂಟು- ಅಂದಹಾಗೆ ಲೇಡಿ ಸಿಂಗಂ ಯಾರು ಅನ್ನೋದು ಈಗಿನ ಕುತೂಹಲ.




# ಅರ್ಜುನ್ ಕಣ್ಣು 'ದುರ್ಗಾಸ್ತಮಾನ'ದ



ಒಂದು ಕಾಲದಲ್ಲಿ ಕರ್ನಾಟಕದಲ್ಲಿ ಸರಿಯಾದ ಮನ್ನಣೆ, ಗೌರವ, ಅವಕಾಶ ಸಿಗದೇ ಬೇಸತ್ತ ಒಂದಿಷ್ಟು ಕನ್ನಡದ ಪ್ರತಿಭಾವಂತ ನಟರು ಮದರಾಸಿಗೆ ಹೋಗಿ ತಮ್ಮೊಳಗಿನ ಪ್ರತಿಭೆಯನ್ನು ಹೊರಹಾಕುವಲ್ಲಿ ಯಶಸ್ವಿಯಾದ ಉದಾಹರಣೆಗಳು ನಮ್ಮಲ್ಲಿ ಸಾಕಷ್ಟು ಸಿಕ್ಕುತ್ತವೆ. ಆ ಪೈಕಿ ರಜನಿಕಾಂತ್, ಪ್ರಕಾಶ್ ರೈ ಅರ್ಜುನ್ ಸರ್ಜಾ ಪ್ರಮುಖರು. ರಜನಿಕಾಂತ್ ಒಂದು ವೇಳೆ ಕನ್ನಡದಲ್ಲೇ ಇದ್ದಿದ್ದರೆ ಇವತ್ತು ಅವರು ಬೆಳೆದಿರುವ ಮಟ್ಟಕ್ಕೆ ಬೆಳೆಯಲು ನಿಜಕ್ಕೂ ಪ್ರಯಾಸವಾಗುತ್ತಿತ್ತು. ಹಾಗೆಯೇ 'ನಾಗಮಂಡಲ'ದಂತಹ ಚಿತ್ರದಲ್ಲಿ ಅದ್ಭುತವಾಗಿ ನಟಿಸಿದ ನಂತರವೂ ಪ್ರಕಾಶ್ ರೈರನ್ನು ಕನ್ನಡ ಚಿತ್ರರಂಗದ ಮಂದಿ ಅದೇಕೋ ಸೀರಿಯಸ್ಸಾಗಿ ತೆಗೆದುಕೊಳ್ಳ ಪ್ರಕಾಶ್ ರೈ ಆ ಕಾಲದಲ್ಲಿ ತಮಿಳಿಗೆ ಹೋಗಿರದಿದ್ದರೆ ಇವತ್ತು ಅವ ಅಭಿಜಿತ್, ರಾಮಕೃಷ್ಣ ರಘುವೀರ್ ಮುಂತಾದರ ಸಾಲಿಗೆ ಸೇರಿ ಸಿಕ್ಕ ಅವಕಾಶಗಳಲ್ಲೇ ತೃಪ್ತಿಪಟ್ಟುಕೊಳ್ಳಬೇಕಿತ್ತೇನೋ...


ಅರ್ಜುನ್ ಸರ್ಜಾ ಕೂಡ ಇದರಿಂದ ಹೊರತಲ್ಲ... ಶಕ್ತಿ ಪ್ರಸಾ ಅಪ್ಪ ಇದ್ದುಕೊಂಡೂ ಅರ್ಜುನ್ ಇಲ್ಲಿ ಮುಖ್ಯವಾಹಿನಿಯ ಹೀ ಸಾಲಿನಲ್ಲಿ ಗುರ್ತಿಸಿಕೊಳ್ಳಲು ಹೆಣಗಾಟ ನಡೆಸಬೇಕಾಯಿತು. ಕಡೆಗೆ ಚೆನ್ನೈ ದಾರಿ ಹಿಡಿಯಬೇಕಾಯಿತು.. ಇವತ್ತು ಅರ್ಜುನ್ ಸರ್ಜಾ ಸ್ಥಾನವನ್ನು ನೆನೆದರೆ ಎಂಥವರಿಗೂ ಖುಷಿ ಆಗುತ್ತದೆ.

ಇಷ್ಟೆಲ್ಲಾ ಯಾಕೆ ಹೇಳಬೇಕಾಯಿತು ಎಂದರೆ ಹೀಗೆ ಒಂದು ಕನ್ನಡ ಚಿತ್ರರಂಗದಲ್ಲಿ ಸರಿಯಾಗಿ ಅವಕಾಶ ಸಿಕ್ಕದೆ ಮದರಾಸು ಸೇ ತರಹದ ಕೆಲವರು ಇತ್ತೀಚಿನ ವರ್ಷಗಳಲ್ಲಿ ಮತ್ತೆ ಕನ್ನಡದಲ್ಲಿ ಮಾಡುವ ಆಸಕ್ತಿ ತೋರುತ್ತಿದ್ದಾರೆ. ಆ ನಿಟ್ಟಿನಲ್ಲಿ ಪ್ರಕಾಶ್ ರೈ ' 'ನಾನು ನನ್ನ ಕನಸು' ತರಹದ ಸಿನಿಮಾಗಳನ್ನು ಕನ್ನಡದಲ್ಲಿ ಮಾ ಅರ್ಜುನ್ ಸರ್ಜಾ ಕೂಡ ತಮ್ಮ ಹುಡುಗರಾದ ಚಿರಂಜೀವಿ ಸರ್ಜಾ ಸರ್ಜಾರನ್ನು ಕನ್ನಡದ ಮೂಲಕ ಬೆಳ್ಳಿತೆರೆಗೆ ಪರಿಚಯಿಸಿದ್ದಲ್ಲದೇ ಕೂಡ ಅಶೋಕ್ ಖೇಣಿ ನಿರ್ಮಾಣದ 'ಪ್ರಸಾದ್' ಚಿತ್ರದಲ್ಲಿ ನಟಿ ಇಂತಹ ಅರ್ಜುನ್ ಸರ್ಜಾ ಈಗ ಇಂಥದೇ ಒಂದು ಕೆಲಸಕ್ಕೆ ಕೈಹಾಕ ಅದೇನೆಂದರೆ ಐತಿಹಾಸಿಕ ಕಥಾವಸ್ತುವುಳ್ಳ ಕಾದಂಬರಿ 'ದುರ್ಗಾಸ್ತಮ ಸಿನಿಮಾ ಮಾಡಲು ಹೊರಟಿದ್ದಾರೆ.

ಸಿನಿಮಾ ಮಾಡೋದು ದುಡ್ಡು ಮಾಡುವ ಸಲುವಾಗಿಯೇ ಅನೇಕರು ನಂಬಿಕೊಂಡಿರುವ ಈ ದಿನಗಳಲ್ಲಿ 'ದುರ್ಗಾಸ್ತಮಾನ'ದಂತಹ ಹೆಮ್ಮೆಯ ಕಾದಂಬರಿಯನ್ನು ಸಿನಿಮಾವಾಗಿಸಿ ಕನ್ನಡಿಗರಿಗೆ ತೋರಿಸಲು ರುವ ಅರ್ಜುನ್ ಇತರರಿಗೆ ಮಾದರಿಯೂ ಹೌದು. ಇಂತಹ ಚಿತ್ರಗಳು ಅರ್ಜುನ್ ಸರ್ಜಾ, ಪ್ರಕಾಶ್ ರೈ ಮೂಲಕ ಕನ್ನಡಿಗರಿಗ ಮುಂದೊಮ್ಮೆ ರಜನಿಕಾಂತ್, ಪ್ರಭುದೇವ ಕೂಡ ಕನ್ನಡದಲ್ಲಿ ಹೆಚ ಸಂಖ್ಯೆಯಲ್ಲಿ ಸಿನಿಮಾ ಮಾಡುವಂತಾಗಲಿ ಎಂದು ಆಶಿಸೋಣ.

# ಅಪ್ಪ-ಮಗ ಒಟ್ಟಿಗೆ ಕುಣಿದ

ಒಂದಲ್ಲ ಒಂದು ಗಿಮಿಕ್ ಮಾಡುತ್ತಲೇ ಸದಾ ಪ್ರಚಾರ ಪ್ರೇಮ್ ಈ ಬಾರಿ ಅಂಥದೇ ಒಂದು ಹೊಸ ಪ್ರಚಾರ ಮಾಡಿಕೊಂಡಿದ್ದಾರೆ. ಅದೆಂದರೆ ತಮ್ಮ ಮಗ ಸೂರ್ಯಗೌಡನನ್ನು ತಮ್ಮ 'ಡಿಕೆ' ಚಿತ್ರದ ಹಾಡೊಂದರಲ್ಲಿ ಕುಣಿಸಿದ್ದು. ಸುಮಾರು ನಾನೂರು ಡಾನ್ಸರ್‌ಗಳಿದ್ದ ಈ ಹಾಡಿಗಾಗಿ ಕನಕಪುರದ ಹತ್ತಿರ ಒಂದು ಸೆಟ್ ಹಾಕಿದ್ದು ಅಪ್ಪ ಮಗ ಅಂದರೆ ಪ್ರೇಮ್-ಸೂರ್ಯಗೌಡ ಜೋಡಿ ಒಟ್ಟಿಗೆ ಹೆಜ್ಜೆ ಹಾಕಿದ್ದಾರೆ. ಅಂದಹಾಗೆ ಇದೇ ಮೊದಲ ಬಾರಿಗೆ ಮಗನನ್ನು ಕ್ಯಾಮೆರಾ ಮುಂದೆ ತಂದಿರುವ ಪ್ರೇಮ್ ಮುಂದೆ ಇನ್ನೇನೇನು ಮಾಡುತ್ತಾರೋ ಕಾದು ನೋಡಬೇಕು.





PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427,
Fax : 26604536, E-mail :lankesh70@rediffmail.com